
ಜನಮನದ ದನಿ


# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಅಫ್ಘಾನಿಸ್ತಾನ ವಿರುದ್ಧ ಬುಧವಾರ ನಡೆದ 2ನೇ ಏಕದಿನ ಪಂದ್ಯದಲ್ಲಿ ಶತಕ (154 ರನ್) ಗಳಿಸಿದ ಭಾರತ ತಂಡದ ನಾಯಕ ಶುಭಮನ್ ಗಿಲ್...

18 ಜೂನ್, 2026 ಗುರುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 99 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಸದ್ವಿಚಾರಗಳಿಗೆ ಸಮಯದ ಹಂಗಿಲ್ಲ » 2



ವಿಶ್ವಾಸವೇ ಜಗತ್ತಿನ ಅತಿದೊಡ್ಡ ಸಂಪತ್ತು : ಮೋದಿ » 3



ಗಿಲ್, ಇಶಾನ್ ಶತಕದ ಅಬ್ಬರ : ಭಾರತಕ್ಕೆ ಭರ್ಜರಿ ಜಯ » 4

# ಮೇಲ್ಮನೆಗೆ ಅಡ್ಡ ಮತದಾನದ ಸವಾಲು

## ಆಡಳಿತಾರೂಢ ಕಾಂಗ್ರೆಸ್‌ಗೆ ಪ್ರತಿಷ್ಠೆ | ವಿಪಕ್ಷಗಳಿಗೆ ಮೈತ್ರಿ ಬಲ ಸಾಬೀತು ಪಡಿಸಲು ಅವಕಾಶ

• ಪ್ರಜೋದಯ ವರದಿ

**ಬೆಂಗಳೂರು:** ಆಡಳಿತರೂಢ ಕಾಂಗ್ರೆಸ್ ಹಾಗು ಪ್ರತಿಪಕ್ಷಗಳ ನಡುವಿನ ಜಿದ್ದಾಜಿದ್ದಿಗೆ ಕಾರಣವಾಗಿರುವ ವಿಧಾನ ಪರಿಷತ್‌ನ ಏಳು ಸ್ಥಾನಗಳಿಗೆ ಗುರುವಾರ ಮತದಾನ ನಡೆಯಲಿದ್ದು, ಅಡ್ಡ ಮತದಾನದ ಮೇಲೆ ಎಲ್ಲರ ಕಣ್ಣು ನೆಟ್ಟಿದೆ. ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ನಡೆಯುತ್ತಿರುವ ಈ ಚುನಾವಣೆ ಆಡಳಿತಾರೂಢ ಕಾಂಗ್ರೆಸ್‌ಗೆ ಪ್ರತಿಷ್ಠೆಯ ಪ್ರಶ್ನೆ ಯಾದರೆ, ವಿಪಕ್ಷಗಳಿಗೆ ತಮ್ಮ ಮೈತ್ರಿ ಬಲವನ್ನು ಸಾಬೀತುಪಡಿಸಲು ಇರುವ ಅವಕಾಶವಾಗಿದೆ.

ಈ ಚುನಾವಣೆ ಶಾಸಕರ ಮತಗಳ ಮೂಲಕ ನಡೆಯುವುದರಿಂದ, ಪ್ರತಿ ಅಭ್ಯರ್ಥಿಯ ಗೆಲುವಿಗೆ ನಿಗದಿತ ಮತಗಳ ಅವಶ್ಯಕತೆ ಇದೆ. ಸಂಜೆ ಮತ ಎಣಿಕೆ ಮುಗಿಯುತ್ತಿದ್ದಂತೆ ಸ್ಪಷ್ಟ ಚಿತ್ರಣ ಸಿಗಲಿದೆ. ಕಾಂಗ್ರೆಸ್ 4, ಬಿಜೆಪಿ 2 ಸ್ಥಾನಗಳನ್ನು ಸುಲಭವಾಗಿ ಗೆಲ್ಲಲಿದ್ದು ಉಳಿದಿರುವ ಒಂದು ಸ್ಥಾನಕ್ಕೆ ಕೈ ಹಾಗು ಜೆಡಿಎಸ್‌ನಲ್ಲಿ ಬಾರಿ ಪೈಪೋಟಿ ಏರ್ಪಟ್ಟಿದೆ.

ಕಾಂಗ್ರೆಸ್ ಪಕ್ಷದಿಂದ ಐದನೇ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ವಿನಯ್ ಕಾರ್ತಿಕ್ ಹಾಗು ಎನ್‌ಡಿಎ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಿರುವ ಜೆಡಿಎಸ್‌ನ ಗೋವಿಂದರಾಜು ನಡುವೆ ಅದೃಷ್ಟ



ಯಾರಿಗೆ ಎಂಬುದು ಕುತೂಹಲ ಮೂಡಿಸಿದೆ.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ನಡುವಿನ ಪ್ರತಿಷ್ಠೆಯ ಸಮರದಲ್ಲಿ ಗೆಲುವು ಯಾರಿಗೆ ಎಂಬುದನ್ನು ಶಾಸಕರು ತೀರ್ಮಾನಿಸಲಿದ್ದಾರೆ. ವಿಧಾನಸೌಧದ ಕೊಠಡಿ ಸಂಖ್ಯೆ 106 ರಲ್ಲಿ ಬೆಳಿಗ್ಗೆ 8 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆದು 5 ಗಂಟೆಯ ನಂತರ ಫಲಿತಾಂಶ ಪ್ರಕಟಗೊಳ್ಳಲಿದೆ.

7 ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದ್ದು, ಆಡಳಿತಾರೂಢ ಕಾಂಗ್ರೆಸ್ 4 ಮತ್ತು ಬಿಜೆಪಿ 2 ಸ್ಥಾನಗಳನ್ನು ಸುಲಭವಾಗಿ ಗೆಲ್ಲುವಷ್ಟು ಬಲವನ್ನು ಹೊಂದಿವೆ. ವಿಧಾನ ಸಭೆಯ ಒಟ್ಟು ಮತದಾರರ ಸಂಖ್ಯೆ 222 (ಕೆಲವು ಸದಸ್ಯರ ಅನರ್ಹತೆ ಮತ್ತು ನಿಧನದಿಂದಾಗಿ). ಗೆಲುವಿಗೆ ತಲಾ 28 ಮತಗಳ ಅಗತ್ಯವಿದೆ.

**ಅತೃಪ್ತ ಶಾಸಕರ ನಂಬಿಕೊಂಡ ಜೆಡಿಎಸ್**

ಜೆಡಿಎಸ್ ತನ್ನ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳಲು ಬಿಜೆಪಿಯ ಹೆಚ್ಚುವರಿ ಮತಗಳನ್ನು ಮತ್ತು ಅತೃಪ್ತ ಶಾಸಕರ ಬೆಂಬಲವನ್ನು ನಂಬಿಕೊಂಡಿದೆ. ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಯ ನಡುವೆಯೂ, ಕೆಲವೊಂದು ರಾಜಕೀಯ ಬದಲಾವಣೆಗಳು ಅಡ್ಡಮತದಾನದ ಸಾಧ್ಯತೆಯನ್ನು ಹೆಚ್ಚಿಸಿವೆ.

ಪಕ್ಷೇತರ ಶಾಸಕರು ಮತ್ತು ನಿರ್ದಿಷ್ಟವಾಗಿ ಬಿಜೆಪಿಯಿಂದ ಅಂತರ ಕಾಯ್ದುಕೊಂಡಿರುವ ಶಾಸಕರ ಮತಗಳು ನಿರ್ಣಾಯಕವಾಗಿವೆ. ಇವರನ್ನು ತಮತ್ತ ಸೆಳೆಯಲು ಉಭಯ ಪಕ್ಷಗಳು ತೆರೆಮರೆಯಲ್ಲಿ ಭಾರೀ ಕಸರತ್ತು ನಡೆಸುತ್ತಿವೆ. ಇದು ಗೌಪ್ಯ ಮತದಾನ ವ್ಯವಸ್ಥೆಯಾಗಿರುವುದರಿಂದ, ಪಕ್ಷದ ವಿಪ್ ಇದ್ದರೂ ಅಡ್ಡಮತದಾನ ನಡೆಯುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಹಳೆಯ ಇತಿಹಾಸಗಳನ್ನು ಗಮನಿಸಿದರೆ, ಈ ಬಾರಿಯೂ ಅಚ್ಚರಿಯ ಫಲಿತಾಂಶ ಬರುವ ಸಾಧ್ಯತೆ ಇದೆ.

| ವಿಧಾನಸಭೆ ಒಟ್ಟು ಶಾಸಕರು-222 |
| --- |
| ಖಾಲಿ ಸ್ಥಾನಗಳು-2 |
| ಕಾಂಗ್ರೆಸ್ -137 |
| ಬಿಜೆಪಿ- 64 |
| ಜೆಡಿಎಸ್ -18 |
| ಪಕ್ಷೇತರರು -3 |
| (ಕಣದಲ್ಲಿರುವ ಅಭ್ಯರ್ಥಿಗಳು) |
| **ಕಾಂಗ್ರೆಸ್** |
| ಬಿ.ಕೆ. ಹರಿಪ್ರಸಾದ್ |
| ತಿಪ್ಪಣ್ಣಪ್ಪ ಕಮಕನೂರು |
| ಪಿ.ವಿ.ಮೋಹನ್ |
| ಶಿವಣ್ಣ ಮಳವಳ್ಳಿ |
| ವಿನಯ್ ಕಾರ್ತಿಕ್ |
| **ಬಿಜೆಪಿ** |
| ರಘು ಕೌಟಿಲ್ಯ |
| ಲಿಂಗರಾಜ್ ಪಾಟೀಲ್ |
| **ಜೆಡಿಎಸ್** |
| ಗೋವಿಂದರಾಜು |

**ಶಾಸಕರಿಗೆ ಮಾಕ್ ವೋಟಿಂಗ್ ತರಬೇತಿ**

ಈ ಚುನಾವಣೆ ಕೇವಲ ಸಂಖ್ಯೆಗಳ ಆಟವಲ್ಲ, ಇದು ರಾಜಕೀಯ ತಂತ್ರಗಾರಿಕೆಯ ಪರೀಕ್ಷೆಯಾಗಿದೆ. ಗೆಲುವಿನ ಅಂಚಿನಲ್ಲಿರುವ ಕಾಂಗ್ರೆಸ್, ತನ್ನ ಮತಗಳ ಕ್ರೋಢೀಕರಣಕ್ಕಾಗಿ ಮತ್ತು ಅಡ್ಡಮತದಾನವನ್ನು ತಡೆಯಲು ತನ್ನ ಶಾಸಕರನ್ನು ರೆಸಾರ್ಟ್‌ನಲ್ಲಿ ಇರಿಸಿ, ಮಾಕ್ ವೋಟಿಂಗ್ ತರಬೇತಿ ನೀಡಲಾಗಿದೆ. ಪಕ್ಷದ ಶಿಸ್ತನ್ನು ಕಾಪಾಡಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹದ್ದಿನ ಕಣ್ಣಿಟ್ಟಿದ್ದಾರೆ.

**ಶಾಸಕರ ಅಸಮಾಧಾನ ಸವಾಲು**

ಪಕ್ಷದೊಳಗಿನ ಅಸಮಾಧಾನಿತ ಶಾಸಕರ ಮೇಲೆ ಎಲ್ಲರ ಕಣ್ಣಿದೆ. ತಮ ಪಕ್ಷದ ನಿರ್ಧಾರದ ವಿರುದ್ಧವಾಗಿ ಅಥವಾ ಅಡ್ಡಮತದಾನದ ಮೂಲಕ ತಮ್ಮ ಅಸಮಾಧಾನ ಹೊರಹಾಕುವ ವರನ್ನು ಗುರುತಿಸುವುದು ನಾಯಕರಿಗೆ ದೊಡ್ಡ ಸವಾಲಾಗಿದೆ. ಕೇವಲ ಒಂದು ಹೆಚ್ಚುವರಿ ಸ್ಥಾನದ ಮೇಲೆ ಇಡೀ ಚುನಾವಣೆಯ ಗತಿಯೇ ಅವಲಂಬಿತವಾಗಿದೆ. ರಾಜ್ಯ ರಾಜಕಾರಣದ ಮುಂದಿನ ದಿಕ್ಕನ್ನು ಸೂಚಿಸಲಿದೆ. ಅಡ್ಡ ಮತದಾನದ ಭೀತಿಯನ್ನು ಹೋಗಲಾಡಿಸಲು ಯಾವ ಪಕ್ಷದ ತಂತ್ರಗಾರಿಕೆ ಫಲ ನೀಡಲಿದೆ ಎಂಬುದು ಫಲಿತಾಂಶದ ಬಳಿಕವಷ್ಟೇ ಸ್ಪಷ್ಟವಾಗಲಿದೆ.

# ರೈಲು ಸಂಚಾರ ವಿಸ್ತರಿಸಲು ಮನವಿ

## ರೈಲ್ವೆ ಸಚಿವ ವಿ.ಸೋಮಣ್ಣ ಭೇಟಿಯಾದ ಶಾಸಕ ಸಿಮೆಂಟ್ ಮಂಜು

• ಪ್ರಜೋದಯ ವರದಿ

**ಸಕಲೇಶಪುರ :** ಬೆಂಗಳೂರು-ಹಾಸನ ನಡುವೆ ಸಂಚರಿಸುತ್ತಿರುವ ಕೆಎಸ್ ಆರ್ ಬೆಂಗಳೂರು, ಹಾಸನ ಮೆಮು ಸ್ಪೆಷಲ್ ರೈಲು ಸೇವೆಯನ್ನು ಸಕಲೇಶಪುರ ರೈಲು ನಿಲ್ದಾಣದವರೆಗೆ ವಿಸ್ತರಿಸುವಂತೆ ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣ ಅವರಿಗೆ ಶಾಸಕ ಸಿಮೆಂಟ್ ಮಂಜು ಅವರು ಮನವಿ ಸಲ್ಲಿಸಿದರು.



ನವದೆಹಲಿಯಲ್ಲಿ ಸಚಿವರನ್ನು ಭೇಟಿಯಾಗಿ, ಸಕಲೇಶಪುರ ಹಾಗು ಆಲೂರು ತಾಲ್ಲೂಕಿನ ಸಾರ್ವಜನಿಕರ ಬಹುಕಾಲದ ಬೇಡಿಕೆಗಳ ಜೊತೆಗೆ ವಿವಿಧ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳ ಕುರಿತು ವಿವರವಾದ ಮನವಿ ಪತ್ರ ಸಲ್ಲಿಸಿದರು.

ಸಕಲೇಶಪುರ ಹಾಗು ಆಲೂರು ಭಾಗಗಳು ಭೌಗೋಳಿಕವಾಗಿ ಮಲೆನಾಡು, ಅರೆಮಲೆನಾಡು ಹಾಗು ಬಯಲುಸೀಮೆ ಪ್ರದೇಶಗಳನ್ನು ಒಳಗೊಂಡಿದ್ದು, ಪ್ರವಾಸೋದ್ಯಮ, ಶಿಕ್ಷಣ, ಆರೋಗ್ಯ, ಉದ್ಯೋಗದ ದೃಷ್ಟಿಯಿಂದ ರಾಜ್ಯದ ಪ್ರಮುಖ ಸಂಪರ್ಕ ವಲಯಗಳಾಗಿವೆ ಎಂದು ಉಲ್ಲೇಖಿಸಲಾಗಿದೆ. ಪ್ರತಿದಿನ ನೂರಾರು ಮಂದಿ ಉದ್ಯೋಗ, ಉನ್ನತ ಶಿಕ್ಷಣ, ವೈದ್ಯಕೀಯ ಚಿಕಿತ್ಸೆ ಮತ್ತು ಆಡಳಿತಾತ್ಮಕ ಕೆಲಸಗಳಿಗಾಗಿ ಬೆಂಗಳೂರಿಗೆ ತೆರಳುತ್ತಿದ್ದು, ಹೆಚ್ಚುತ್ತಿರುವ ಬಸ್ ಪ್ರಯಾಣ ದರದ ಹಿನ್ನೆಲೆಯಲ್ಲಿ ಕಡಿಮೆ ವೆಚ್ಚದ ಹಾಗೂ ಸುಗಮ ರೈಲು ಸೇವೆಗೆ ಸಾರ್ವಜನಿಕರಿಂದ ಹೆಚ್ಚಿನ ಬೇಡಿಕೆ ವ್ಯಕ್ತವಾಗುತ್ತಿದೆ ಎಂದು ತಿಳಿಸಲಾಗಿದೆ.

ಪ್ರಸ್ತುತ ಟ್ರೈನ್ ನಂ. 06583 ಬೆಳಿಗ್ಗೆ ಕೆಎಸ್‌ಆರ್ ಬೆಂಗಳೂರಿನಿಂದ ಹೊರಟು ಮಧ್ಯಾಹ್ನ ಹಾಸನ ತಲುಪುತ್ತಿದ್ದು, ಟ್ರೈನ್ ನಂ. 06584 ಹಾಸನದಿಂದ ಬೆಂಗಳೂರಿಗೆ ವಾಪಸ್ಸಾಗುತ್ತಿದೆ. ಈ ಸೇವೆಯನ್ನು ಸಕಲೇಶಪುರದವರೆಗೆ ವಿಸ್ತರಿಸಿದರೆ ಸಕಲೇಶಪುರ ಮತ್ತು ಆಲೂರು ಭಾಗದ ಜನರಿಗೆ ಪ್ರತಿದಿನದ ಸಂಚಾರ ವ್ಯವಸ್ಥೆ ಇನ್ನಷ್ಟು ಸುಲಭವಾಗಲಿದ್ದು, ಕಡಿಮೆ ವೆಚ್ಚದಲ್ಲಿ ಬೆಂಗಳೂರು ಸಂಪರ್ಕ ಸಾಧ್ಯವಾಗಲಿದೆ ಎಂದು ಮನವಿಯಲ್ಲಿ ವಿವರಿಸಲಾಗಿದೆ.

ಸಕಲೇಶಪುರ ತಾಲ್ಲೂಕಿನ ಗಡಿ ಭಾಗಗಳಿಗೆ ಹೊಂದಿಕೊಂಡಿರುವ ಕೊಡಗು, ದಕ್ಷಿಣ ಕನ್ನಡ ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ಸಾರ್ವಜನಿಕರಿಗೂ ಈ ರೈಲು ಸೇವೆಯಿಂದ ಪ್ರಯೋಜನ ದೊರೆಯಲಿದ್ದು, ಮಲೆನಾಡು ಪ್ರವಾಸೋದ್ಯಮಕ್ಕೆ ಉತ್ತೇಜನ ಸಿಗಲಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಲಾಗಿದೆ.

ಇದೇ ವೇಳೆ ರೈಲು ಮಾರ್ಗ ವ್ಯಾಪ್ತಿಯಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡುವಂತೆ ಮನವಿ ಸಲ್ಲಿಸಿದ ಶಾಸಕರು, ಆಲೂರು ತಾಲ್ಲೂಕಿನ ಮಡಬಲು, ಯಡೂರು ಹಾಗು ಸಕಲೇಶಪುರ ವ್ಯಾಪ್ತಿಯ ಹೊಸೂರು ಭಾಗಗಳಲ್ಲಿ ರೈತರು, ಸಾರ್ವಜನಿಕರು, ವಾಹನ ಸಂಚಾರದ ಸುರಕ್ಷತೆಗೆ ಅಗತ್ಯ ಅಂಡರ್‌ಪಾಸ್‌ಗಳನ್ನು ನಿರ್ಮಿಸು ವಂತೆ ಒತ್ತಾಯಿಸಿ ಅವರು, ಸಕಲೇಶ ಪುರ- ಅರೇಹಳ್ಳಿ ಮಾರ್ಗವಾಗಿ ಬೇಲೂರಿಗೆ ಸಂಪರ್ಕ ಕಲ್ಪಿಸುವ ಅಚ್ಚಂಗಿ ಸಮೀಪದ ರೈಲ್ವೆ ಮೇಲ್ಸೇ ತುವೆ ಶಿಥಿಲಾವಸ್ಥೆಯಲ್ಲಿರುವುದರಿಂದ ಮಳೆಗಾಲದಲ್ಲಿ ಅಪಾಯದ ಸಾಧ್ಯತೆ ಹೆಚ್ಚಿದೆ. ಸಾರ್ವಜನಿಕರ ಸುರಕ್ಷತೆ ದೃಷ್ಟಿಯಿಂದ ತುರ್ತು ದುರಸ್ತಿ ಕಾಮಗಾರಿ ಕೈಗೊಳ್ಳುವಂತೆ ಸಚಿವರ ಗಮನ ಸೆಳೆದರು.

# ರಸಗೊಬ್ಬರ ಕೊರತೆಯಾಗದಂತೆ ಕ್ರಮಕ್ಕೆ ಒತ್ತಾಯ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕು ಹಾಗು ಹೋಬಳಿ ಕೇಂದ್ರ ವ್ಯಾಪ್ತಿಯಲ್ಲಿ ಕೃಷಿ ಚಟುವಟಿಕೆಗೆ ಪೂರಕವಾಗುವ ನಿಟ್ಟಿನಲ್ಲಿ ಯೂರಿಯಾ ಹಾಗು ರಸಗೊಬ್ಬರ ಅಭಾವವಾಗದಂತೆ ಕ್ರಮ ಕೈಗೊಳ್ಳುವಂತೆ ತಾಲ್ಲೂಕು ಆಡಳಿತವನ್ನು ಕರ್ನಾಟಕ ರಾಜ್ಯ ರೈತ ಸಂಘದ ತಾಲ್ಲೂಕು ಅಧ್ಯಕ್ಷ ಎಸ್.ಎಸ್. ರಾಮಚಂದ್ರು ಒತ್ತಾಯಿಸಿದರು.

ತಾಲ್ಲೂಕಿನ ನುಗ್ಗೇಹಳ್ಳಿ ಹೋಬಳಿ ರೈತ ಸಂಪರ್ಕ ಕೇಂದ್ರದಲ್ಲಿ ಕೃಷಿ ಅಧಿಕಾರಿ ನೇತೃತ್ವದಲ್ಲಿ ರೈತ ಸಂಘದ ಮುಖಂಡರು, ರಸಗೊಬ್ಬರ ಅಂಗಡಿ ಮಾಲೀಕರು, ವಿತರಕರು, ರೈತರೊಂದಿಗೆ ನಡೆದ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ತಾಲ್ಲೂಕಿನ ಹಿರೀಸಾವೆ ಹೋಬಳಿಯಲ್ಲಿ ಯೂರಿಯಾ ಕೊಳ್ಳಲು



ನೂರಾರು ಸಂಖ್ಯೆಯ ರೈತರು ಮುಗಿಬಿದ್ದಿದ್ದಾರೆ. ಈ ಬಗ್ಗೆ ತಾಲ್ಲೂಕು ಆಡಳಿತ ಗಮನಹರಿಸಬೇಕು ಎಂದರು.

ಜೂನ್, ಜುಲೈ, ಆಗಸ್ಟ್ ತಿಂಗಳಲ್ಲಿ ರೈತರು ಬಿತ್ತನೆ ಕಾರ್ಯಗಳಿಗೆ ಹೆಚ್ಚು ಮಹತ್ವ ಕೊಡುತ್ತಾರೆ. ದಾಸ್ತಾನು ಪೂರೈಕೆಯ ಬಗ್ಗೆ ತಾಲೂಕು ಆಡಳಿತಕ್ಕೆ ಮುನ್ನೆಚ್ಚರಿಕೆ ವಹಿಸಬೇಕು. ಪಾಶ್ಚಿಮಾತ್ಯ ದೇಶಗಳಲ್ಲಿ ಯುದ್ಧದ ಹಿನ್ನಲೆಯಲ್ಲಿ ರಸಗೊಬ್ಬರ ಪೂರೈಕೆಯಲ್ಲಿ ತೊಂದರೆ ಆಗಿದೆ ಎಂದು ಅಧಿಕಾರಿಗಳು ಹೇಳುತ್ತಾರೆ. ಅವರ ಈ ಉತ್ತರದಿಂದ ರೈತರ ಸಮಸ್ಯೆ ಬಗೆಹರಿಯುವುದಿಲ್ಲ, ಪರಿಹಾರ ಹುಡುಕುವ ನಿಟ್ಟಿನಲ್ಲಿ ಅಧಿಕಾರಿಗಳು ಮುಂದಾಗುವಂತೆ ಎಚ್ಚರಿಸಿದರು.

ಯೂರಿಯಾ ಅಭಾವದಿಂದ ರೈತರು ಸಂಕಷ್ಟ ಎದುರಿಸುವ ಬದಲು ನ್ಯಾನೋ ಯೂರಿಯಾ ಬಳಸಿದರೆ ಉತ್ತಮ ಬೆಳೆಯ ಜೊತೆಗೆ ಮಣ್ಣಿನ ಫಲವತ್ತತೆಯನ್ನು ಉಳಿಸಬಹುದು.

» ನಾಲ್ಕನೇ ಪುಟದಲ್ಲಿ

# ಶಿವಲಿಂಗೇಗೌಡ ಸಚಿವರಾಗುವುದು ಖಚಿತ: ಶ್ರೇಯಸ್

## ಜಿಲ್ಲಾ ಮುಖಂಡರಿಂದ ಪಕ್ಷ ಹೈಕಮಾಂಡ್, ವರಿಷ್ಠರಿಗೆ ಮನವರಿಕೆ

• ಪ್ರಜೋದಯ ವರದಿ

**ಹಾಸನ:** ನಮಗೆ ಭರವಸೆ ಇದೆ, ಈ ಬಾರಿ ಖಂಡಿತವಾಗಿಯೂ ಹಾಸನಕ್ಕೆ ಪ್ರಾತಿನಿಧ್ಯ ಸಿಗುತ್ತದೆ. ಶಾಸಕರಾಗಿರುವ ಕೆ.ಎಂ.ಶಿವಲಿಂಗೇಗೌಡ ಅವರು ಸಚಿವರಾಗುವುದು ಬಹುತೇಕ ಖಚಿತವೆಂದು ಸಂಸದ ಶ್ರೇಯಸ್ ಪಟೇಲ್ ಅವರು ವಿಶ್ವಾಸ ವ್ಯಕ್ತಪಡಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವ ಸಂಪುಟ ವಿಸ್ತರಣೆಯಲ್ಲಿ ಜಿಲ್ಲೆಗೆ ಪ್ರಾತಿನಿಧ್ಯ ದೊರೆಯುವ ವಿಶ್ವಾಸವಿದೆ. ಈ ಸಂಬಂಧ ಪಕ್ಷದ ಹೈಕಮಾಂಡ್ ಹಾಗು ವರಿಷ್ಠರಿಗೆ ಜಿಲ್ಲೆಯ ಅಭಿಪ್ರಾಯವನ್ನು ಮನ ವರಿಕೆ ಮಾಡಿಕೊಟ್ಟಿದ್ದೇವೆ. ಶಿವಲಿಂಗೇಗೌಡ ಅವರು ಸಚಿವರಾ ಗುವ ಸಾಧ್ಯತೆ ಹೆಚ್ಚಿದೆ ಎಂದು ಹೇಳಿದರು.



**ಡಿಸಿ ವಿರುದ್ಧದ ಆರೋಪಕ್ಕೆ ಆಕ್ಷೇಪ**

ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಮಹಿಳಾ ಜಿಲ್ಲಾಧಿಕಾರಿ ವಿರುದ್ಧ ಮಾಡುತ್ತಿರುವ ಆರೋಪಗಳನ್ನು ಖಂಡಿಸಿದ ಅವರು, ಜಿಲ್ಲೆಯ ಅಭಿವೃದ್ಧಿಗೆ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆಂದು ಸಾರ್ವಜನಿಕರೇ ಹೇಳುತ್ತಿದ್ದಾರೆ. ಯಾವುದೇ ಅಧಿಕಾರಿಯ ವಿರುದ್ಧ ಆರೋಪ ಮಾಡುವುದಾದರೆ ದಾಖಲೆ ಸಮೇತ ಮಾಡಬೇಕು. ಸರ್ಕಾರಿ ಸಭೆಗಳಲ್ಲಿ ಆಧಾರ ರಹಿತ ಆರೋಪ ಮಾಡುವುದು ಸಂವಿಧಾನ ಹಾಗು ಆಡಳಿತ ವ್ಯವಸ್ಥೆಯ ನಿಯಮಗಳಿಗೆ ವಿರುದ್ಧವಾಗಿದೆ ಎಂದು ಹೇಳಿದರು.

ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ನೀಡುವ ಕುರಿತು ದೇಶಾದ್ಯಂತ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ ಮಹಿಳಾ ಅಧಿಕಾರಿಗಳ ವಿರುದ್ಧ ಈ ರೀತಿಯ ಆರೋಪ ಮಾಡುವುದು ಸೂಕ್ತವಲ್ಲ. ಮಹಿಳೆಯರ ಗೌರವ ಕಾಪಾಡುವ ಜವಾಬ್ದಾರಿ ಎಲ್ಲಾ ಜನಪ್ರತಿನಿಧಿಗಳ ಮೇಲಿದೆ ಎಂದರು.

**ವಿರೋಧ ಪಕ್ಷದಿಂದ ಸುಳ್ಳು ಸುದ್ದಿ**

ರಾಜ್ಯ ಸರ್ಕಾರ ಜಾರಿಗೆ ತಂದಿರುವ ಐದು ಗ್ಯಾರಂಟಿ ಯೋಜನೆಗಳನ್ನು ಸ್ಥಗಿತ ಗೊಳಿಸುವುದಿಲ್ಲ. ಫಲಾನುಭವಿಗಳು ಆತಂಕ ಪಡುವ ಅಗತ್ಯವಿಲ್ಲ. ಗೃಹಲಕ್ಷ್ಮಿ ಹಾಗು ಗೃಹಜ್ಯೋತಿ ಯೋಜನೆಗಳಿಂದ ಯಾರಿಗೂ ತೊಂದರೆ ಆಗುವುದಿಲ್ಲ. ಈ ಕುರಿತು ಮುಖ್ಯಮಂತ್ರಿಗಳು ಈಗಾಗಲೇ ಸ್ಪಷ್ಟನೆ ನೀಡಿದ್ದರೂ, ವಿರೋಧ ಪಕ್ಷದವರು ಸುಳ್ಳು ಸುದ್ದಿಗಳನ್ನು

» ನಾಲ್ಕನೇ ಪುಟದಲ್ಲಿ

**ಡೀಮ್ಡ್ ವಿಚಾರದಲ್ಲಿ ಆತಂಕ ಬೇಡ**

ಜಿಲ್ಲೆಯಲ್ಲಿ ಡೀಮ್ಡ್ ಫಾರೆಸ್ಟ್ ಒತ್ತುವರಿ ತೆರವು ವಿಚಾರವಾಗಿ ಪ್ರತಿಕ್ರಿಯಿಸಿದ ಶ್ರೇಯಸ್ ಪಟೇಲ್ ಅವರು, ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಜಂಟಿ ಸರ್ವೆ ನಡೆಸುವಂತೆ ಈಗಾಗಲೇ ಸೂಚನೆ ನೀಡಲಾಗಿದೆ. ಸರ್ವೆ ವರದಿ ಬಂದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು. ರೈತರು ಆತಂಕ ಪಡುವ ಅಗತ್ಯವಿಲ್ಲ. ರೈತರ ಹಿತಾಸಕ್ತಿಗೆ ಧಕ್ಕೆಯಾಗುವಂತಹ ಪರಿಸ್ಥಿತಿ ಎದುರಾದರೆ ಸರ್ಕಾರದೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಭರವಸೆ ನೀಡಿದರು.

# ಮೇಲ್ಸೇತುವೆ ಕಾಮಗಾರಿಗೆ ಕೇಂದ್ರ-ರಾಜ್ಯದಿಂದ ಅನುದಾನ

## ನವೆಂಬರ್ ಅಂತ್ಯದೊಳಗೆ ವಾಹನಗಳ ಸಂಚಾರಕ್ಕೆ ಮುಕ್ತ: ಶ್ರೇಯಸ್ ಪಟೇಲ್

• ಪ್ರಜೋದಯ ವರದಿ

**ಹಾಸನ:** ನಗರದ ರೈಲ್ವೆ ಮೇಲ್ಸೇತುವೆ ಕಾಮಗಾರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಅಗತ್ಯ ಅನುದಾನ ಬಿಡುಗಡೆಯಾಗಿದೆ. ಕೆಲಸ ಪೂರ್ಣಗೊಳಿಸಿ ನವೆಂಬರ್ ಅಂತ್ಯದೊಳಗೆ ವಾಹನಗಳ ಸಂಚಾರಕ್ಕೆ ಮುಕ್ತಗೊಳಿಸುವುದಾಗಿ ಸಂಸದ ಶ್ರೇಯಸ್ ಪಟೇಲ್ ಅವರು ಹೇಳಿದರು.

ಬುಧವಾರ ಮೇಲ್ಸೇತುವೆ ನಿರ್ಮಾಣ ಕಾಮಗಾರಿ ಸ್ಥಳಕ್ಕೆ ಅಧಿಕಾರಿಗಳು ಹಾಗು ಗುತ್ತಿಗೆದಾರರೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಶೇ.70ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು,



ಉಳಿದ ಶೇ.30ರಷ್ಟು ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಮುಗಿಸುವಂತೆ ಅಧಿಕಾರಿಗಳು ಹಾಗು ಗುತ್ತಿಗೆದಾರರಿಗೆ ಸೂಚಿಸಲಾಗಿದೆ ಎಂದರು.

ಈಗಾಗಲೇ ಬಹುತೇಕ ಪ್ರಮುಖ ಕಾಮಗಾರಿ ಪೂರ್ಣಗೊಂಡಿದ್ದು, ಸಣ್ಣ-ಪುಟ್ಟ ಕಾಮಗಾರಿಗಳು ಮಾತ್ರ ಬಾಕಿ ಉಳಿದಿವೆ. ಭದ್ರತಾ ಕ್ರಮ ಹಾಗು ವಾಹನ ದಟ್ಟಣೆಯಿಂದ ಕಾಮಗಾರಿ ವಿಳಂಬವಾಗಿತ್ತು. ಗುತ್ತಿಗೆದಾರರು ಅಕ್ಟೋಬರ್ ವೇಳೆಗೆ ಕಾಮಗಾರಿ ಪೂರ್ಣಗೊಳಿಸುವುದಾಗಿ ತಿಳಿಸಿದ್ದರೂ, ಅಗತ್ಯವಿದ್ದರೆ ಒಂದು ತಿಂಗಳ ಹೆಚ್ಚುವರಿ ಸಮಯ ತೆಗೆದುಕೊಂಡು ನವೆಂಬರ್ ಅಂತ್ಯದೊಳಗೆ ಎರಡು ಬದಿಗಳಲ್ಲೂ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕೆಂದು ಸೂಚಿಸಿರುವುದಾಗಿ ಹೇಳಿದರು.

ಸರ್ವಿಸ್ ರಸ್ತೆ ಹಾಗು ಅಂಡರ್ ಪಾಸ್ ಕಾಮಗಾರಿಗೆ ಸಂಬಂಧಿಸಿದ ಕೆಲವು ಪ್ರಕರಣಗಳು ನ್ಯಾಯಾಲಯದಲ್ಲಿದ್ದು, ಜಿಲ್ಲಾಡಳಿತ ಅಗತ್ಯ ಕ್ರಮ

» ನಾಲ್ಕನೇ ಪುಟದಲ್ಲಿ

# ಕೆಎಸ್‌ಆರ್‌ಟಿಸಿ ಬಸ್ ಪ್ರಯಾಣಿಕ ಸಾವು

• ಪ್ರಜೋದಯ ವರದಿ

**ಅರಸೀಕೆರೆ:** ಕೆಎಸ್‌ಆರ್‌ಟಿಸಿ ಬಸ್ ಹಿಂಮುಖವಾಗಿ ಚಲಿಸಿ ಪ್ರಯಾಣಿಕ ಚಕ್ರದಡಿ ಸಿಲುಕಿ ಮೃತಪಟ್ಟಿರುವ ಘಟನೆ ನಗರದ ಬಸ್ ನಿಲ್ದಾಣದಲ್ಲಿ ನಡೆದಿದೆ. ತುಮಕೂರು ಜಿಲ್ಲೆಯ ತಿಮ್ಮನಹಳ್ಳಿ ಗ್ರಾಮದ ವಸಂತ ಕುಮಾರ (56) ಮೃತರು.

ರಾತ್ರಿ 9.30ರ ವೇಳೆಗೆ ವಸಂತ ಕುಮಾರ ಅವರು ಚಿತ್ರದುರ್ಗದಿಂದ ರೈಲಿನಲ್ಲಿ ಅರಸೀಕೆರೆಗೆ ಬಂದಿದ್ದರು. ಊರಿಗೆ ತೆರಳಲು ಕೆಎಸ್‌ಆರ್‌ಟಿಸಿ ಬಸ್ ಹತ್ತುವ ವೇಳೆ ಈ ದುರ್ಘಟನೆ ಸಂಭವಿಸಿದೆ. ಅಪಘಾತದಲ್ಲಿ ಬಲಗಾಲಿನಿಂದ ಎದೆಯವರೆಗೆ ಬಸ್‌ನ ಹಿಂಬದಿ ಚಕ್ರ ಹರಿದ ಪರಿಣಾಮ ತೀವ್ರ ರಕ್ತಸ್ರಾವ ಉಂಟಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

# ಗ್ರಾಹಕರಿಗೆ ವಂಚನೆ : ಆರೋಪಿ ಬಂಧನಕ್ಕೆ ಆಗ್ರಹ

• ಪ್ರಜೋದಯ ವರದಿ

**ಹಾಸನ:** ಗ್ರಾಹಕರಿಗೆ ವಂಚಿಸಿರುವ ಸೂರ್ಯೋದಯ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಮಾಜಿ ಮ್ಯಾನೇಜರ್‌ನ್ನು ಬಂಧಿಸಿ, ತನಿಖೆ ಚುರುಕುಗೊಳಿಸುವಂತೆ ಒತ್ತಾಯಿಸಿ ಸಂತ್ರಸ್ತರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ದೂರು ಸಲ್ಲಿಸಿದರು.

ಸಂತ್ರಸ್ತ ವಿಶ್ವಾಸ್ ಅವರು ಮಾತನಾಡಿ, ಸಬ್ಸಿಡಿ ರೂಪದಲ್ಲಿ ಸಾಲ ಮಾಡಿಸಿಕೊಡುವುದಾಗಿ ನಂಬಿಸಿ 60ಕ್ಕೂ ಹೆಚ್ಚು ಗ್ರಾಹಕರಿಂದ 4 ಕೋ.ರೂ.ಗೂ ಅಧಿಕ ಹಣ ಪಡೆದು ವಂಚನೆ ಎಸಗಿರುವ ಆರೋಪ ಸಂಬಂಧ ಪ್ರಕರಣ ದಾಖಲಾಗಿದ್ದರೂ, ಸಮರ್ಪಕ ತನಿಖೆ ನಡೆದಿಲ್ಲ. ಆರೋಪಿ ಹೆಚ್.ಎಸ್.ಪೂಜಾ, ಅವರ ತಂಗಿ ತೇಜಾ, ಪಲ್ಲವಿ, ನಾಗರತ್ನ ಹಾಗು ಬ್ಯಾಂಕ್ ಕ್ಯಾಶಿಯರ್ ರಾಜೇಶ್ ಅವರ ಹೆಸರನ್ನೂ ಉಲ್ಲೇಖಿಸಿ ಪೆನ್ಷನ್‌ಮೊಹಲ್ಲಾ ಪೊಲೀಸ್ ಠಾಣೆಯಲ್ಲಿ 2026ರ ಮಾ.1 ರಂದು ಎಫ್‌ಐಆರ್ ದಾಖಲಾಗಿದೆ. ದೂರು ದಾಖಲಾಗಿ 45 ದಿನ ಕಳೆದರೂ ಪ್ರಮುಖ ಆರೋಪಿಗಳ ಬಂಧನವಾಗಿಲ್ಲವೆಂದು ದೂರಿದರು.

ಪ್ರಕರಣದ ತನಿಖೆ ನಡೆಸುತ್ತಿರುವ ಇನ್‌ಸ್ಪೆಕ್ಟರ್ ಸ್ವಾಮಿನಾಥನ್ ಅವರು ಸೂಕ್ತವಾಗಿ ತನಿಖೆ ಮಾಡುತ್ತಿಲ್ಲ. ಇದು ಆರೋಪಿಗಳಿಗೆ ಪರೋಕ್ಷವಾಗಿ ಸಹಕಾರ ನೀಡಿರುವ ಅನುಮಾನ ಮೂಡಿಸಿದೆ. ಈ ಸಂಬಂಧ ತಮ್ಮ ಬಳಿ ಕೆಲ ಆಡಿಯೋ, ವಿಡಿಯೋ ಹಾಗು ಸಂದೇಶಗಳ ದಾಖಲೆಗಳಿದ್ದು, ಅವುಗಳನ್ನು ತನಿಖಾ ಅಧಿಕಾರಿಗಳಿಗೆ ಸಲ್ಲಿಸಲು ಸಿದ್ಧವಿದ್ದೇವೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತನಿಖೆ ಚುರುಕುಗೊಳಿಸಿ ಆರೋಪಿಗಳನ್ನು ಬಂಧಿಸುವಂತೆ ಸೂಚನೆ ನೀಡಿದ್ದರೂ, ಅದು ಸಾಧ್ಯವಾಗುತ್ತಿಲ್ಲ. ಸ್ವತಂತ್ರ ತನಿಖಾ ಸಂಸ್ಥೆ ಅಥವಾ ಉನ್ನತ ಮಟ್ಟದ ಅಧಿಕಾರಿಗಳಿಂದ ತನಿಖೆ ನಡೆಸುವಂತೆ ಒತ್ತಾಯಿಸಿದರು.



ಸಂತ್ರಸ್ತರಾದ ಶ್ರೀಧರ್, ಉಮೇಶ್, ಧರ್ಮನಾಯಕ್, ಚಂದ್ರೇಗೌಡ, ಯೋಗೀಶ್, ಶ್ರೀನಿವಾಸ್, ಗೀತಾ, ವಿನಯ್ ಇದ್ದರು.

# ಶಾಲಾ ಆವರಣಕ್ಕೆ ಬಂದ ಕಾಡಾನೆ ಭೀಮ



• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಉದೇವಾರ ಗ್ರಾಮದ ಸರ್ಕಾರಿ ಪ್ರೌಢಶಾಲಾ ಆವರಣಕ್ಕೆ ಕಾಡಾನೆ ಭೀಮ ಬಂದ ಪರಿಣಾಮ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಯಿತು.

ಕಾಡಾನೆ ಕಂಡ ವಿದ್ಯಾರ್ಥಿಗಳು ಕುತೂಹಲದಿಂದ ವೀಕ್ಷಿಸುತ್ತಾ ನಿಂತಿದ್ದರು. ವಿಷಯ ತಿಳಿಯುತ್ತಿದ್ದಂತೆಯೇ ಎಲಿಫೆಂಟ್ ಟಾಸ್ಕ್ ಫೋರ್ಸ್ (ಇಟಿಎಫ್) ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಆನೆಯನ್ನು ಶಾಲೆಯ ಆವರಣದಿಂದ ಓಡಿಸಿದರು.

ಕಾಡಾನೆಯ ಚಲನವಲನವನ್ನು ಸೂಕ್ಷ್ಮವಾಗಿ ಗಮನಿಸಿದ ಸಿಬ್ಬಂದಿ, ವಿದ್ಯಾರ್ಥಿಗಳು ಹಾಗು ಸಾರ್ವಜನಿಕರಿಗೆ ಅಪಾಯ ಉಂಟಾಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡರು. ಬಳಿಕ ಕಾಡಾನೆ ಶಾಲಾ ಆವರಣದಿಂದ ಹೊರಟು ಕಾಡಿನತ್ತ ಸಾಗಿತು. ಈ ವೇಳೆ ಇಟಿಎಫ್ ಸಿಬ್ಬಂದಿ ಗ್ರಾಮಸ್ಥರು ಹಾಗು ಶಾಲಾ ಸಿಬ್ಬಂದಿಗೆ ಕಾಡಾನೆ ಕಂಡು ಬಂದರೆ ಸುರಕ್ಷತಾ ಕ್ರಮಗಳನ್ನು ಪಾಲಿಸುವಂತೆ ಹಾಗೂ ಕಾಡಾನೆಯ ಸಮೀಪ ಹೋಗದಂತೆ ಎಚ್ಚರಿಕೆ ನೀಡಿ ಜಾಗೃತಿ ಮೂಡಿಸಿದರು.

## ಪಶ್ಚಿಮಘಟ್ಟ ವ್ಯಾಪ್ತಿಗೂ ವಿಸ್ತರಿಸಿದ ಹುಲಿಗಳ ಸಾಮ್ರಾಜ್ಯ | ಅರಣ್ಯ ಇಲಾಖೆ ಕ್ಯಾಮೆರಾ ಟ್ರ್ಯಾಪಿಂಗ್‌ನಲ್ಲಿ ಸೆರೆ

# ಮಲೆನಾಡಿನ ಮೂರ್ಕಣ್ಣು ಗುಡ್ಡದಲ್ಲಿ ಹುಲಿ ದರ್ಶನ

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

**ಹಾಸನ:** ರಾಜ್ಯದಲ್ಲಿ ಬಂಡೀಪುರ, ನಾಗರಹೊಳೆ ಹಾಗು ಭದ್ರ ಅಭಯಾರಣ್ಯಗಳಿಗೆ ಸೀಮಿತವಾಗಿದ್ದ ಹುಲಿಗಳ ಸಾಮ್ರಾಜ್ಯ ಇದೀಗ ಪಶ್ಚಿಮಘಟ್ಟ ವ್ಯಾಪ್ತಿಯ ಮಲೆನಾಡು ಭಾಗಕ್ಕೂ ವಿಸ್ತರಿಸಿಕೊಂಡಿದೆ. ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಮೂರ್ಕಣ್ಣು ಗುಡ್ಡ ವ್ಯಾಪ್ತಿಯ ಅರಣ್ಯ ಪ್ರದೇಶದಲ್ಲಿ ಹುಲಿಗಳ ಸಂಚಾರ ಅರಣ್ಯ ಇಲಾಖೆಯ ಕ್ಯಾಮೆರಾ ಟ್ರ್ಯಾಪ್‌ಗಳಲ್ಲಿ ಸೆರೆಯಾಗಿದೆ.

ಮೂರ್ಕಣ್ಣು ಗುಡ್ಡ ಪ್ರದೇಶವನ್ನು ಈಗಾಗಲೇ ರಕ್ಷಿತ ಅರಣ್ಯ ಪ್ರದೇಶವಾಗಿ ಘೋಷಿಸಲಾಗಿದೆ. ಕಾಡಿನೊಳಗಿನ ಮಾನವ ಸಂಚಾರಕ್ಕೆ ಕಟ್ಟುನಿಟ್ಟಿನ ನಿರ್ಬಂಧ ಹೇರಲಾಗಿರುವ ಕಾರಣ, ವನ್ಯಜೀವಿಗಳಿಗೆ ಸುರಕ್ಷಿತ ಪರಿಸರ ನಿರ್ಮಾಣವಾಗಿದೆ. ಹೀಗಾಗಿ ಕಳೆದ ಎರಡು ವರ್ಷಗಳಿಂದ ಅರಣ್ಯ ಇಲಾಖೆ ನಿಗಾ ವಹಿಸಿ ನಡೆಸುತ್ತಿದ್ದ ನಿರಂತರ ಕಾರ್ಯಾಚರಣೆಯಲ್ಲಿ ಹುಲಿಗಳ ಚಲನವಲನ ಪತ್ತೆಯಾಗಿದೆ. ಒಂದು ಗಂಡು ಹಾಗು ಒಂದು ಹೆಣ್ಣು ಹುಲಿಗಳು ಅರಣ್ಯ ಇಲಾಖೆ ಅಳವಡಿಸಿದ್ದ ಕ್ಯಾಮೆರಾದಲ್ಲಿ ಸೆರೆಯಾಗಿದ್ದವು.

ಅರಣ್ಯ ಇಲಾಖೆ ಸಿಬ್ಬಂದಿ ಗಸ್ತು ಕಾರ್ಯಾಚರಣೆ ವೇಳೆಯೂ ಹುಲಿಯ ಹೆಜ್ಜೆ ಗುರುತುಗಳು, ಮರಗಳ ಮೇಲೆ ಉಗುರು ಗುರುತುಗಳು, ವಿಸರ್ಜನೆ ಹಾಗು ತನ್ನ ವ್ಯಾಪ್ತಿ ಗುರುತಿಸಲು ಹುಲಿ ಬಿಟ್ಟಿರುವ ವಾಸನೆ ಗುರುತುಗಳು ಪತ್ತೆಯಾಗಿದ್ದವು. ಈ ಎಲ್ಲಾ ಸುಳಿವುಗಳ ಆಧಾರದ ಮೇಲೆ ಹುಲಿಗಳ ಅಸ್ತಿತ್ವದ ಬಗ್ಗೆ ಇಲಾಖೆ ಅನುಮಾನ ವ್ಯಕ್ತಪಡಿಸುತ್ತಿದ್ದರೂ, ಕ್ಯಾಮೆರಾ ಟ್ರ್ಯಾಪ್ ದೃಶ್ಯಗಳು ಇದೀಗ ಅದನ್ನು ಅಧಿಕೃತವಾಗಿ ದೃಢಪಡಿಸಿವೆ.

**ಭದ್ರದಿಂದ ಪಶ್ಚಿಮಘಟ್ಟದತ್ತ ವಿಸ್ತರಣೆ**

ವನ್ಯಜೀವಿ ತಜ್ಞರ ಪ್ರಕಾರ, ಭದ್ರ ಹುಲಿ ಸಂರಕ್ಷಿತ ಪ್ರದೇಶದ ಹುಲಿಗಳು ತಮ್ಮ ಪ್ರದೇಶ ವಿಸ್ತರಣೆಯ ಭಾಗವಾಗಿ ಪಶ್ಚಿಮಘಟ್ಟದ ಅರಣ್ಯ

» ನಾಲ್ಕನೇ ಪುಟದಲ್ಲಿ



**ರಾಜ್ಯದಲ್ಲಿ ಹೆಚ್ಚುತ್ತಿದೆ ಹುಲಿಗಳ ಸಂತತಿ**

ಕಳೆದ ಎರಡು ದಶಕಗಳಲ್ಲಿ ಕರ್ನಾಟಕದಲ್ಲಿ ಹುಲಿಗಳ ಸಂಖ್ಯೆ ಗಮನಾರ್ಹವಾಗಿ ಏರಿಕೆಯಾಗಿದೆ. ಅರಣ್ಯ ಇಲಾಖೆ ಹಾಗು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಅಂಕಿ-ಅಂಶಗಳ ಪ್ರಕಾರ ರಾಜ್ಯವು ದೇಶದಲ್ಲೇ ಹೆಚ್ಚು ಹುಲಿಗಳನ್ನು ಹೊಂದಿರುವ ರಾಜ್ಯಗಳಲ್ಲಿ ಒಂದಾಗಿದೆ. ಬಂಡೀಪುರ, ನಾಗರಹೊಳೆ, ಭದ್ರ, ಬಿಆರ್‌ಟಿ ಹಾಗು ಮಲೆಮಹದೇಶ್ವರ ಬೆಟ್ಟದಂತೆ ಇನ್ಮುಂದೆ ಮೂರ್ಕಣ್ಣು ಗುಡ್ಡವು ಪ್ರಖ್ಯಾಗಿ ಪಡೆದುಕೊಳ್ಳುವ ನಿರೀಕ್ಷೆ ಹೆಚ್ಚಾಗಿದೆ.

**ಊಹಾಪೋಹಾಗಳಿಗೆ ವಿರಾಮ**

ಮಲೆನಾಡು ಭಾಗದಲ್ಲಿ ಹುಲಿ ಕಾಣಿಸಿಕೊಂಡಿದೆ ಎಂಬ ಊಹಾಪೂಹಗಳು ಆಗಾಗ್ಗೆ ಕೇಳಿ ಬರುತ್ತಿದ್ದವು. ಈ ಭಾಗದಲ್ಲಿ ಹುಲಿ ಇರುವಿಕೆ ಬಗ್ಗೆ ಯಾವುದೇ ಖಚಿತತೆ ಇಲ್ಲದೆ ಇದ್ದಿದ್ದರಿಂದ ಹುಲಿಯ ಸಂಚಾರದ ಬಗ್ಗೆ ಅಷ್ಟಾಗಿ ಯಾರು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಇದೀಗ ಖಚಿತವಾಗಿರುವುದರಿಂದ ಜನರಲ್ಲಿ ಆತಂಕವೂ ಹೆಚ್ಚಾಗಿದೆ. ಇನ್ಮುಂದೆ ಕಾಡಾನೆಗಳ ಭಯದ ಜೊತೆ ಹುಲಿಯ ಭೀತಿಯು ಕಾಡಲಿದೆ. ಹೀಗಾಗಿ ವನ್ಯಜೀವಿ ಸಂರಕ್ಷಣೆ ಮತ್ತು ಸಾರ್ವಜನಿಕ ಸುರಕ್ಷತೆ ಎರಡನ್ನೂ ಸಮತೋಲನದಲ್ಲಿ ನಿರ್ವಹಿಸುವ ಸವಾಲು ಅರಣ್ಯ ಇಲಾಖೆಗೆ ಎದುರಾಗಿದೆ.

> ಮೂರ್ಕಣ್ಣು ಗುಡ್ಡದಲ್ಲಿ ಹುಲಿಗಳ ಸಂಚಾರ ಇರುವುದು ಕ್ಯಾಮರಾ ಟ್ರ್ಯಾಪಿಂಗ್‌ನಲ್ಲಿ ಪತ್ತೆಯಾಗಿದೆ. ಎಲ್ಲಿಂದ ಬಂದಿದೆ ಎಂಬುದ ಬಗ್ಗೆ ಗುರುತು ಪತ್ತೆಗೆ ಸಂಬಂಧಪಟ್ಟವರಿಗೆ ಮಾಹಿತಿ ನೀಡಲಾಗಿದೆ.
>
> -ಸೌರಭ್ ಕುಮಾರ್, ಉಪ ಅರಣ್ಯ ಸಂರಕ್ಷಣಾಧಿಕಾರಿ



> ಕಂಡದ್ದೆಲ್ಲ ಬೇಕು ಎನ್ನುವುದು, ಕೈಯಲ್ಲಿ ಕೆಲಸ ಮಾಡುತ್ತಿರುವ ಫೋನ್ ಇದ್ದು ಕೂಡ ಹೊಸ ವರ್ಷನ್ ಫೋನ್ ಬಂದಿದೆ, ಅದು ಬೇಕು ಎನ್ನುವುದು ವಾಂಟ್ ಲೆಕ್ಕಾಚಾರದಲ್ಲಿ ಬರುತ್ತದೆ. ಕೈಯಲ್ಲಿ ಫೋನ್ ಇಲ್ಲ ಹೀಗಾಗಿ ಫೋನ್ ಬೇಕು ಎನ್ನುವುದು ಇವತ್ತಿಗೆ ನೀಡ್, ಅವಶ್ಯಕತೆ ಎನ್ನಿಸಿ ಕೊಂಡಿದೆ. ಇದೇ ವಿಚಾರವನ್ನು ನಾವು ಎಲ್ಲದಕ್ಕೂ ಅಳವಡಿಸಿ ನೋಡಬೇಕು.

# ಸದ್ವಿಚಾರಗಳಿಗೆ ಸಮಯದ ಹಂಗಿಲ್ಲ!




ವಿಶ್ವರಂಗ

ಮಿಲೆನಿಯಲ್ಸ್ ಮತ್ತು ಜನರೇಷನ್ ಎಕ್ಸ್ ಸಮಯದಲ್ಲಿ ತಂತ್ರಜ್ಞಾನ ಬದುಕನ್ನು ಪೂರ್ಣ ಅವರಿಸಿಕೊಂಡಿರಲಿಲ್ಲ. ಇವತ್ತಿನ ಜೆನ್ ಝಿ ಮತ್ತು ಅಲಾ ಮೊಬೈಲ್ ಕೈಯಲ್ಲಿ ಹಿಡಿದು ಜನಿಸಿದ್ದಾರೆ! ಅವರಿಗೆ ಎಐ ಕೂಡ ಸಾಥ್ ನೀಡುತ್ತಿದೆ. ಈ ಜನರೇಷನ್‌ನ ಮಕ್ಕಳಿಗೆ ಮನೆಯಿಂದ ಹೊರಗೆ ಹೋಗುವುದಕ್ಕೆ ಬೇಸರ. ಎಲ್ಲವೂ ಕೇವಲ ಒಂದು ಬಟನ್ ಒತ್ತುವುದರಿಂದ ಆಗುತ್ತದೆ. ಮತ್ತೇಕೆ ಹೊರಹೋಗಬೇಕು? ಮತ್ತೇಕೆ ಇಲ್ಲದ ಕಷ್ಟ ಪಡಬೇಕು? ಎನ್ನುವ ಮಟ್ಟಕ್ಕೆ ಬಂದಿದ್ದಾರೆ.

ಇವತ್ತಿನ ಯುವ ಜನತೆ ಜೆನ್ ಝಿ ಚಿಂತಿಸುವ ರೀತಿಗೂ ಅದಕ್ಕಿಂತ ಒಂದು ತಲೆಮಾರು ಮಿಲೆನಿಯಲ್ಸ್ ಮತ್ತು ಜನರೇಷನ್ ಎಕ್ಸ್ ಚಿಂತಿಸುತ್ತಿದ್ದ ರೀತಿಗೂ ಅಜಗಜಾಂತರವಿದೆ. ಅವತ್ತಿನ ಸನ್ನಿವೇಶಕ್ಕೂ, ಇವತ್ತಿನ ಸನ್ನಿವೇಶಕ್ಕೂ ಸಹ ಭೂಮಿ ಮತ್ತು ಆಕಾಶದಷ್ಟು ಅಂತರವಿದೆ. ತಿನ್ನುವ ಆಹಾರದಿಂದ, ಹಾಕುವ ಬಟ್ಟೆಯವರೆಗೂ ಬದಲಾವಣೆಯಾಗಿದೆ. ಈ ಎಲ್ಲ ಬದಲಾವಣೆಗಳ ನಡುವೆ ಕೂಡ ಕೆಲವು ಮೂಲಭೂತ ವಿಚಾರಗಳಲ್ಲಿ ಬದಲಾವಣೆಯಾಗುವಂತಿಲ್ಲ! ಬದಲಾವಣೆ ಮಾಡಿಕೊಂಡರೆ ಅದು ಅದಕ್ಕೆ ತಕ್ಕ ಫಲಿತಾಂಶವನ್ನು ನೀಡುತ್ತದೆ.

ಹೀಗಾಗಿ ಸಮಯ ಅದೆಷ್ಟೇ ಬದಲಾಗಿದೆ ಎಂದರೂ ಭೂಮಿಯ ಮೇಲೆ ಕೆಲವು ವಿಚಾರಗಳು ಬದಲಾಗುವುದಿಲ್ಲ. ನಾವು ಹೊಸ ತಲೆಮಾರಿನ ಜನ ಎನ್ನುವ ಹುಂಬತನದದಲ್ಲಿ ಈ ಬೇಸಿಕ್ಸ್ ವಿರುದ್ಧ ಹೋಗುತ್ತಿರುವ ಜೆನ್ ಝಿ ಮತ್ತು ಜೆನ್ ಅಲಾಗಳಿಗೆ ಈ ಲೇಖನ. ಈ ಲೇಖನವನ್ನು ಓದುತ್ತಿರುವ ಮಿಲೆನಿಯಲ್ಸ್ ಮತ್ತು ಜನರೇಷನ್ ಎಕ್ಸ್ ಇದನ್ನು ತಮ್ಮ ಮಕ್ಕಳಿಗೆ ತಲುಪಿಸ ಬಹುದು.

ಇವತ್ತಿನ ಹೊಸ ತಲೆಮಾರಿನ ಮಕ್ಕಳು ತಮಗೆ ಸಿಕ್ಕಿರುವ ಸೌಲಭ್ಯಕ್ಕೆ ನಾವು ಹಕ್ಕುದಾರರು ಎನ್ನುವಂತೆ ವರ್ತಿಸುತ್ತಿದ್ದಾರೆ. ಹೀಗಾಗಿ ಅವರಿಗೆ ಅವಶ್ಯಕತೆ, ನೀಡ್ಸ್ ಮತ್ತು ಬೇಕುಗಳು ಅಂದರೆ ವಾಂಟ್ಸ್ ನಡುವಿನ ವ್ಯತ್ಯಾಸ ಗೊತ್ತಾಗುತ್ತಿಲ್ಲ. ಎಲ್ಲಕ್ಕೂ ಮೊದಲಿಗೆ ಜನರೇಷನ್ ಎಕ್ಸ್ ಮತ್ತು ಮಿಲೆನಿಯಲ್ಸ್ ತಮ್ಮ ಮಕ್ಕಳಿಗೆ ನೀಡ್ಸ್ ಮತ್ತು ವಾಂಟ್ಸ್ ನಡುವಿನ ಅಂತರವನ್ನು ಹೇಳಿಕೊಡಬೇಕಿದೆ.

ಕಂಡದ್ದೆಲ್ಲ ಬೇಕು ಎನ್ನುವುದು, ಕೈಯಲ್ಲಿ ಕೆಲಸ ಮಾಡುತ್ತಿರುವ ಫೋನ್ ಇದ್ದು ಕೂಡ ಹೊಸ ವರ್ಷನ್ ಫೋನ್ ಬಂದಿದೆ, ಅದು ಬೇಕು ಎನ್ನುವುದು ವಾಂಟ್ಸ್ ಲೆಕ್ಕಾಚಾರದಲ್ಲಿ ಬರುತ್ತದೆ. ಕೈಯಲ್ಲಿ ಫೋನ್ ಇಲ್ಲ ಹೀಗಾಗಿ ಫೋನ್ ಬೇಕು ಎನ್ನುವುದು ಇವತ್ತಿಗೆ ನೀಡ್, ಅವಶ್ಯಕತೆ ಎನ್ನಿಸಿ ಕೊಂಡಿದೆ. ಇದೇ ವಿಚಾರವನ್ನು ನಾವು ಎಲ್ಲದಕ್ಕೂ ಅಳವಡಿಸಿ ನೋಡಬೇಕು.

ಅವಶ್ಯಕತೆ ಪೂರೈಸಿಕೊಳ್ಳುವುದು ಸರಿ, ಬೇಕುಗಳ ಹಿಂದೆ ಬೀಳುವುದು ತಪ್ಪು. ಇದು ಅದೆಷ್ಟೇ ತಲೆಮಾರು ಬದಲಾದರೂ ಬದಲಾಗದೆ ಉಳಿದುಕೊಳ್ಳುವ ನಿಯಮ. ನಿಯಮ ಬದಲಿಸಿಕೊಂಡರೆ ಬದುಕು ಬದಲಾಗುತ್ತದೆ. ಹೀಗಾಗಿ ಎಚ್ಚರವಿರಲಿ.

ಕಳೆದ ಎರಡು ತಲೆಮಾರು ವಿದ್ಯಾಭ್ಯಾಸವನ್ನು ಬಹಳ ಸೀರಿಯಸ್ಸಾಗಿ ತೆಗೆದುಕೊಂಡಿದ್ದರ ಫಲವಾಗಿ ಇಂದು ಜೆನ್ ಝಿ ಮತ್ತು ಅಲಾ ಉತ್ತಮ ಗುಣಮಟ್ಟದ ಜೀವನವನ್ನು ಆಸ್ವಾದಿಸಲು ಸಾಧ್ಯವಾಗಿದೆ. ಇವತ್ತಿನ ಈ ಎರಡು ತಲೆಮಾರಿನ ಮಕ್ಕಳು ತಮ್ಮದಲ್ಲದ ಪರಿಶ್ರಮದಿಂದ ಸಿಕ್ಕಿರುವ ಸೌಲಭ್ಯವನ್ನು ಬಳಸಿಕೊಂಡು ಅದನ್ನೇ ಬದುಕು, ಸ್ವಾತಂತ್ರ್ಯ ಎನ್ನುವಂತೆ ಬಿಂಬಿಸಿಕೊಳ್ಳುತ್ತಿದ್ದಾರೆ.

ಎಲ್ಲಾ ಒಂದೆರಡು ಪ್ರತಿಶತ ಮಕ್ಕಳನ್ನು ಬಿಟ್ಟರೆ ಉಳಿದ ಮಕ್ಕಳಿಗೆ ಸೋಶಿಯಲ್ ಮೀಡಿಯಾದಲ್ಲಿ ಕಂಟೆಂಟ್ ಕ್ರಿಯೆಟರ್ ಆಗಬೇಕು, ರಾತ್ರಿ ಕಳೆದು ಬೆಳಕಾಗುವುದರಲ್ಲಿ ಹಣವಂತರೂ, ಪ್ರಸಿದ್ಧರು ಆಗಬೇಕು ಎನ್ನುವ ತವಕ ಹೆಚ್ಚಾಗಿದೆ. ವಿದ್ಯಾಭ್ಯಾಸ ಬ್ಯಾಕ್ ಸೀಟು ಪಡೆದುಕೊಂಡಿದೆ. ಇನ್ನು ಮುಂದಕ್ಕೆ ನೂರು ತಲೆಮಾರು ಕಳೆದರೂ ಕಲಿಕೆ ಎನ್ನುವುದು ಹಳತಾಗುವುದಿಲ್ಲ. ಅದು ಎಂದಿಗೂ ಔಟ್‌ಡೇಟೆಡ್ ಆಗುವುದಿಲ್ಲ, ಕಲಿಕೆ ಎನ್ನುವುದು ನಿರಂತರ ಕ್ರಿಯೆ. ಇವತ್ತಿನ ಜೆನ್ ಝಿ ಮತ್ತು ಅಲಾ ಎಜುಕೇಶನ್ ಎನ್ನುವುದನ್ನು ಇನ್ನಷ್ಟು ಸೀರಿಯಸ್ಸಾಗಿ ತೆಗೆದುಕೊಳ್ಳಬೇಕಿದೆ.

ಇವತ್ತಿನ ತಲೆಮಾರಿನ ಯುವಕ, ಯುವತಿಯರು ಹೇಗೆ ಕಾಣುತ್ತೇವೆ ಎನ್ನುವುದರ ಬಗ್ಗೆ ಬಹಳ ಗಮನ ನೀಡುತ್ತಿದ್ದಾರೆ. ಅಂದರೆ ಜಿಮ್ ಇತ್ಯಾದಿ ದೈಹಿಕ ಕಸರತ್ತು ಮಾಡುತ್ತಿದ್ದಾರೆ. ಆದರೆ, ಆರೋಗ್ಯದ ಬಗ್ಗೆ ಹೆಚ್ಚು ಗಮನವಿಲ್ಲ. ಆ ಕ್ಷಣಕ್ಕೆ ದೇಹ ಸದೃಢವಾಗಿ ಕಾಣುವುದರಿಂದ ಯಾವ ಪ್ರಯೋಜನವೂ ಇಲ್ಲ. ಆ ಕ್ಷಣದಲ್ಲಿ ಹತ್ತಾರು ಜನ ಚಪ್ಪಾಳೆ ಹೊಡೆಯಬಹುದು.

ಆರೋಗ್ಯ ಎನ್ನುವುದು ಬದುಕಿನಲ್ಲಿ ಎಂದಿಗೂ ಬದಲಾಗದ ನಿಯಮ. ಉತ್ತಮ ಆರೋಗ್ಯ ಕಾಪಾಡಿಕೊಳ್ಳುವುದು, ಅಂದರೆ ಮಾನಸಿಕ ಮತ್ತು ದೈಹಿಕ ಆರೋಗ್ಯ ಕಾಪಾಡಿಕೊಳ್ಳುವುದು ಕೂಡ ಎಂದಿಗೂ ಔಟ್ ಆಫ್ ಫ್ಯಾಷನ್ ಆಗುವುದಿಲ್ಲ.

ಇವತ್ತಿನ ದಿನದಲ್ಲಿ ಹೆಚ್ಚುತ್ತಿರುವ ಹೃದಯಾಘಾತಕ್ಕೆ ಲೈಫ್ ಸ್ಟೈಲ್ ಕಾರಣ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರ. ನಿದ್ದೆ ಮಾಡದೆ ಮಧ್ಯರಾತ್ರಿವರೆಗೂ ಎದ್ದಿರುವುದು, ಪಾರ್ಟಿ ಮಾಡುವುದು, ಅಶಿಸ್ತು, ಸಮಯವಲ್ಲದ ಸಮಯದಲ್ಲಿ ತಿನ್ನುವುದು, ಕುಡಿಯುವುದು ಇವೆಲ್ಲವನ್ನೂ ನಾರ್ಮಲೈಸ್ ಮಾಡಲಾಗಿದೆ. ಇವೆಲ್ಲವೂ ಸಹಜ ಎನ್ನುವಂತೆ ಈಗಿನ ತಲೆಮಾರು ಅಂದುಕೊಂಡಿದೆ. ಲಯ ತಪ್ಪಿದರೆ ಏನಾಗುತ್ತದೆ? ಅದಾಗುತ್ತಿದೆ.

ಹೀಗಾಗಿ ಎಚ್ಚರ, ಆರೋಗ್ಯವಿಲ್ಲದ ಯಾವ ಯಶಸ್ಸು ಕೂಡ ಯಶಸ್ಸಲ್ಲ. ಅದನ್ನು ಆಸ್ವಾದಿಸಲು ಕೂಡ ಆರೋಗ್ಯ ಬೇಕು. ಕಳೆದೆರಡು ತಲೆಮಾರಿನ ಜನ ಹಣಕಾಸಿನ ವಿಚಾರದಲ್ಲಿ ಬಹಳಷ್ಟು ಜಾಗರೂಕತೆಯಿಂದ ಇದ್ದರು. ಇಲ್ಲದ ಸಮಯದಲ್ಲಿ, ಅಭಾವದ ಕಾಲದಲ್ಲಿ ಹುಟ್ಟಿದ ಕಾರಣ ಅವರಿಗೆ ಹಣವನ್ನು ಕಂಡರೆ ಒಂದು ರೀತಿಯ ಭಯ, ಗೌರವ! ಆದರೆ ಈಗಿನ ಎರಡು ತಲೆಮಾರಿನ ಮಕ್ಕಳು ಹಣವಿರುವುದು ಕೇವಲ ಖರ್ಚು ಮಾಡುವುದಕ್ಕೆ ಎನ್ನುವ ಹುಚ್ಚಾಟಕ್ಕೆ ಬಿದ್ದಿದ್ದಾರೆ.

ಕಳೆದೆರಡು ತಲೆಮಾರಿನಲ್ಲಿ ಕೆಲಸ ಬಿಡುವುದು, ಹೆಚ್ಚು ಖರ್ಚು ಮಾಡುವುದು ತಪ್ಪು ಎನ್ನುವಂತೆ ನೋಡಲಾಗುತ್ತಿತ್ತು. ಇವತ್ತಿನ ಮಕ್ಕಳಿಗೆ ಯಾವುದೂ ಲೆಕ್ಕಕ್ಕಿಲ್ಲ. ಕೆಲಸ ಮಾಡುವ ಸ್ಥಳದಲ್ಲಿ ಸಣ್ಣ ಅಡಚಣೆ ಉಂಟಾದರೂ ಸಾಕು, ಆ ಕ್ಷಣದಲ್ಲಿ ಕೆಲಸ ಬಿಟ್ಟು ಬರುತ್ತಾರೆ. ಹಣವಂತೂ ಬಂದದ್ದಕ್ಕೂ, ಹೋದದ್ದಕ್ಕೂ ಲೆಕ್ಕವಿಲ್ಲ ಎನ್ನುವಂತಾಗಿದೆ.

ಎಲ್ಲಿಯವರೆಗೆ ಕೈಯಲ್ಲಿ ಹಣದ ಹರಿವಿರುತ್ತದೆ ಅಲ್ಲಿಯವರೆಗೆ ಇದ್ಯಾವುದೂ ಲೆಕ್ಕಕ್ಕೆ ಬರುವುದಿಲ್ಲ. ಇಂದಿನ ತಲೆಮಾರಿನ ಮಕ್ಕಳು ಫೈನಾನ್ಷಿಯಲ್ ಲೈಫ್ ಬಗ್ಗೆ ಕೂಡ ಚೂರು ಎಚ್ಚರವಹಿಸಬೇಕಿದೆ. ಕಾಣದ ನಾಳೆಗಾಗಿ ಉಳಿಸುವುದೇಕೆ ಎನ್ನುವುದು ಬಹಳಷ್ಟು ಜೆನ್ ಝಿ ಮತ್ತು ಅಲಾಗಳ ವಿಚಾರ.

ಹೌದು. ಕಾಣದ ನಾಳೆಗಾಗಿ ಇಂದಿನ ಸುಖವನ್ನು ಖಂಡಿತ ಬಿಡಬೇಕು ಎಂದಿಲ್ಲ, ಪುಟಾಣಿ ಇರುವೆ ಕೂಡ ಮಳೆಗಾಲಕ್ಕೆ ಎಂದು ಕಾಳುಕಡ್ಡಿ ಸಂಗ್ರಹಿಸುತ್ತದೆ ಎನ್ನುವುದು ನೆನಪಿರಲಿ. ಹೆಚ್ಚು ಬೇಡ ದುಡಿದದ್ದರಲ್ಲಿ 20 ಪ್ರತಿಶತ ಕಾಣದ ನಾಳೆಗೆ ಉಳಿಸಿ. ಅದು ನಿಮ್ಮ ತಲೆ ಕಾಯುತ್ತೆ.

ಉಡಾಫೆ, ಉದಾಸೀನತೆ ಈಗಿನ ತಲೆಮಾರಿನ ಇನ್ನೊಂದು ಟ್ರೇಡ್ ಮಾರ್ಕ್! ವಿನಯ, ವಿಧೇಯತೆ, ಹಿರಿಯರಿಗೆ ಗೌರವ ನೀಡುವುದು, ಉತ್ತಮ ಭಾಷೆಯ ಬಳಕೆ, ಒಳ್ಳೆಯತನ ಎಂದಿಗೂ ಔಟ್‌ಡೇಟೆಡ್ ಆಗುವುದಿಲ್ಲ. ಯಾರೆಷ್ಟೇ ಇವತ್ತಿನ ಸಮಾಜದಲ್ಲಿ ಕೆಟ್ಟವರಿಗೆ ಬೆಲೆ ಹೆಚ್ಚು, ಒಳ್ಳೆಯವರಾಗಿದ್ದರೆ ಪ್ರಯೋಜನವಿಲ್ಲ ಎಂದು ಹೇಳಲಿ. ಅದು ಸುಳ್ಳು ಮತ್ತು ದೊಡ್ಡ ಸುಳ್ಳು. ಪ್ರಕೃತಿ ಒಳ್ಳೆಯತನಕ್ಕೆ ರಿವಾರ್ಡ್ ಕೊಡಲು ಕಾಯುತ್ತ ಕುಳಿತಿರುತ್ತದೆ.

ಎಲ್ಲರೂ ಮಾಡಿದರು ಎಂದು ನಾವೂ ಅದನ್ನು ಮಾಡಬೇಕಾಗಿಲ್ಲ. ಆಟಿಟ್ಯೂಡ್ ಬಹಳ ಮುಖ್ಯ. ಉತ್ತಮ ನಡವಳಿಕೆ ಉಳ್ಳವರಿಗೆ ನೂರಾರು ಬಾಗಿಲು ತೆರೆದುಕೊಳ್ಳುತ್ತದೆ. ತಕ್ಷಣದಲ್ಲಿ ಗೆದ್ದಂತೆ ಭಾಸವಾಗುವ ಉಡಾಫೆ, ಸೋಮಾರಿತನಗಳಿಗೆ ದೀರ್ಘಾವಧಿಯಲ್ಲಿ ಸಿಗುವುದು ಕೇವಲ ಹೀಯಾಳಿಕೆ ಎನ್ನುವುದು ಮರೆಯುವುದು ಬೇಡ. ಹೀಗಾಗಿ ಸನ್ನಡತೆಯ ಕಡೆಗೆ ಇವತ್ತಿನ ಜನತೆಗೆ ಹೆಚ್ಚಿನ ಒಲವು ಮೂಡಿಸುವುದು ಮತ್ತು ಒಳ್ಳೆಯ ಗುಣ, ನಡವಳಿಕೆಯನ್ನು ನಾರ್ಮಲೈಸ್ ಮಾಡುವ ಪ್ರಯತ್ನ ನಾವು ಮಾಡಬೇಕಿದೆ.

ದೊಡ್ಡ ದೊಡ್ಡ ವಿಚಾರಗಳಲ್ಲಿ ತೋರುವ ಆಸಕ್ತಿ, ಶ್ರದ್ಧೆಯನ್ನು ನಾವು ಸಣ್ಣ ವಿಚಾರದಲ್ಲಿ ಕೂಡ ತೋರಿಸುವುದು ಈಗಿನ ಮಕ್ಕಳಿಗೆ ಕಲಿಸಬೇಕಿದೆ. ಬದುಕಿಗೆ ಸಾಫ್ಟ್ ಸ್ಕಿಲ್ಸ್ ಅಗತ್ಯವನ್ನು ಕೂಡ ನಾವು ತಿಳಿಹೇಳಬೇಕಿದೆ. ಮಾತನಾಡುವ ರೀತಿ, ಕ್ಷಮೆ ಕೇಳುವುದು, ತಪ್ಪಿದ್ದರೆ ತಿದ್ದಿಕೊಳ್ಳುವುದು, ಟೀಮ್ ವರ್ಕ್, ವರ್ಕ್ ಎಥಿಕ್ಸ್, ಲೀಡರ್‌ಶಿಪ್ ಗುಣಗಳು ಇವೆಲ್ಲವೂ ಬದುಕಿಗೆ ಬಹಳ ಮುಖ್ಯ.

ಟೆಕ್ನಿಕಲ್ ಸ್ಕಿಲ್ಸ್ ನಮಗೆ ಕೆಲಸ ಕೊಡಿಸಬಹುದು. ಆದರೆ ಸಾಫ್ಟ್ ಸ್ಕಿಲ್ ಮೂಲಕ ನಾವು ಸಹೋದ್ಯೋಗಿಗಳ ಮನಸ್ಸು ಗೆಲ್ಲಬಹುದು. ನಿಜವಾದ ಜಯ ಬದುಕಿನಲ್ಲಿ ಸಿಗುವುದು ನಮ್ಮ ಗೆಲುವಿನಿಂದ ಮಾತ್ರವಲ್ಲ, ಅದು ನಮ್ಮ ಸುತ್ತಮುತ್ತಲಿನ ನಾಲ್ಕು ಜನರ ಮುಖದಲ್ಲಿ ಕೂಡ ನಗು ಸೃಷ್ಟಿಸಿದಾಗ ಸಿಗುವುದು ನಿಜವಾದ ಯಶಸ್ಸು, ಜಯ. ಮಿಲೆನಿಯಲ್ಸ್ ಮತ್ತು ಜನರೇಷನ್ ಎಕ್ಸ್ ಸಮಯದಲ್ಲಿ ತಂತ್ರಜ್ಞಾನ ಬದುಕನ್ನು ಪೂರ್ಣ ಅವರಿಸಿಕೊಂಡಿರಲಿಲ್ಲ. ಇವತ್ತಿನ ಜೆನ್ ಝಿ ಮತ್ತು ಅಲ್ಫಾ ಮೊಬೈಲ್ ಕೈಯಲ್ಲಿ ಹಿಡಿದು ಜನಿಸಿದ್ದಾರೆ! ಅವರಿಗೆ ಎಐ ಕೂಡ ಸಾಥ್ ನೀಡುತ್ತಿದೆ.

ಈ ಜನರೇಷನ್‌ನ ಮಕ್ಕಳಿಗೆ ಮನೆಯಿಂದ ಹೊರಗೆ ಹೋಗುವುದಕ್ಕೆ ಬೇಸರ. ಎಲ್ಲವೂ ಕೇವಲ ಒಂದು ಬಟನ್ ಒತ್ತುವುದರಿಂದ ಆಗುತ್ತದೆ. ಮತ್ತೇಕೆ ಹೊರಹೋಗಬೇಕು? ಮತ್ತೇಕೆ ಇಲ್ಲದ ಕಷ್ಟ ಪಡಬೇಕು? ಎನ್ನುವ ಮಟ್ಟಕ್ಕೆ ಬಂದಿದ್ದಾರೆ. ಈ ಕಾರಣದಿಂದ ಸಂಬಂಧಗಳು ಹಳಸಿಕೊಳ್ಳತೊಡಗಿವೆ.

ಹಿಂದೆಲ್ಲ ಯಾವುದು ಸಹಜವೂ, ಸರಳವೂ ಆಗಿತ್ತು, ಅವು ಇಂದಿಗೆ ಬಹಳ ಶ್ರಮ ಪಡುವುದರಿಂದ ಆಗುತ್ತಿದೆ. ನೆಟ್‌ವರ್ಕ್ ಎನ್ನುವುದು ರಿಯಲ್. ನಿಜವಾದ ಮನುಷ್ಯ ಸಂಪರ್ಕ ಬೇಕು. ಅದಿಲ್ಲದ ಕೇವಲ ಯಂತ್ರಗಳ ಒಡನಾಟದಿಂದ ಬದುಕು ಪರಿಪೂರ್ಣವಾಗುವುದಿಲ್ಲ. ಹೀಗಾಗಿ ಈಗಿನ ತಲೆಮಾರಿನ ಮಕ್ಕಳಿಗೆ ಮೊಬೈಲ್ ಪರದೆಯಿಂದ ಮುಖ ಎತ್ತುವಂತೆ, ಜನರೊಂದಿಗೆ ಬೆರೆತು ಮಾತಾಡುವಂತೆ ಮಾಡುವುದು ಕೂಡ ಇವತ್ತಿನ ಪ್ರಮುಖ ಕರ್ತವ್ಯವಾಗಿದೆ.

ಇವುಗಳ ಜತೆಗೆ ಈ ತಲೆಮಾರಿನ ಇನ್ನೊಂದು ವಿಚಾರ ಕೂಡ ನಾವು ಗಮನಿಸಬೇಕಿದೆ. ಈಗಿನ ತಲೆಮಾರಿನ ಮುಂದೆ ಆಯ್ಕೆಗಳು ಹೆಚ್ಚಾಗಿವೆ. ಆಯ್ಕೆ ಹೆಚ್ಚಾದಷ್ಟೂ ಮನುಷ್ಯನ ಡೌಟ್ಸ್ ಹೆಚ್ಚಾಗುತ್ತೆ. ಕಳೆದ ಎರಡು ತಲೆಮಾರಿನ ಮುಂದೆ ಆಯ್ಕೆಗಳು ಕಡಿಮೆ ಇದ್ದವು, ಅಷ್ಟರಮಟ್ಟಿಗೆ ನಿಖರತೆಯಿತ್ತು. ನೆಮ್ಮದಿಯಿತ್ತು.

ಇವತ್ತು ನೂರು ಕೋರ್ಸುಗಳು ಇವೆ. ನೂರಾರು ಚಾನಲ್‌ಗಳಿವೆ. ಯಾವ ಕೋರ್ಸ್ ತೆಗೆದುಕೊಳ್ಳು ವುದು? ಏನನ್ನು ಓದುವುದು? ಯಾವ ಚಾನಲ್ ನೋಡೋಣ? ಯಾವ ಪ್ರೋಗ್ರಾಮ್? ಆಯ್ಕೆ ಹೆಚ್ಚಾದಷ್ಟೂ ಸಂಶಯ ಹೆಚ್ಚು. ನಿಖರತೆಯಿಲ್ಲದೆ ಇದ್ದಾಗ ವೇಳೆ ಕೂಡ ಹೆಚ್ಚು ವ್ಯಯವಾಗುತ್ತದೆ. ಏನು ಮಾಡೋಣ ಎನ್ನುವ ಪ್ರಶ್ನೆಯ ಜತೆಗೆ ಸಮಯ ಕಳೆಯುವುದು ಹೆಚ್ಚಾಗಿದೆ.

ಸಮಯವನ್ನು ನಮ್ಮ ಅನುಕೂಲಕ್ಕೆ ದುಡಿಸಿಕೊಳ್ಳುವುದರ ಬದಲು, ವೇಳೆಯನ್ನು ಪೋಲು ಮಾಡುವುದರಲ್ಲಿ ಈ ತಲೆಮಾರು ವ್ಯಸ್ತರಾಗಿದ್ದಾರೆ. ಮೇಲಿನ ಎಲ್ಲ ವಿಚಾರಗಳಲ್ಲಿ ನಮ್ಮ ಪಾತ್ರವೂ ಉಂಟು! ಎಲ್ಲವನ್ನೂ ನಾವು ಸಮಯದ ಹೆಸರು ಹೇಳಿ, ಜನರೇಷನ್ ಹೆಸರು ಹೇಳಿ ಬಿಟ್ಟ ಪರಿಣಾಮ ಇವತ್ತಿನ ದಿನವನ್ನು ನಾವು ನೋಡುತ್ತಿದ್ದೇವೆ. ನಾವು ಸಂಕಷ್ಟಗಳನ್ನು ಎದುರಿಸಿ ಬದುಕನ್ನು ಕಟ್ಟಿಕೊಂಡೆವು.

ನಮ್ಮ ಮಕ್ಕಳಿಗೆ ಸಂಕಷ್ಟದ ಅರಿವು ಕೂಡ ಇಲ್ಲದಂತೆ ಬೆಳೆಸಿದ್ದೇವೆ, ಬೆಳೆಸುತ್ತಿದ್ದೇವೆ. ಇದು ಯಾರ ತಪ್ಪು? ಅವರು ಕೇಳುವುದಕ್ಕೆ ಮುಂಚೆ, ಕೇಳುವುದಕ್ಕಿಂತ ಹೆಚ್ಚು ಅವರಿಗೆ ನೀಡಿದ್ದೇವೆ. ಅಭಾವ ಎಂದರೇನು ಎನ್ನುವುದು ಅವರಿಗೆ ಗೊತ್ತಾಗದಂತೆ ಮಾಡಿದ್ದೇವೆ. ಆಮೇಲೆ ಮಕ್ಕಳಿಗೆ ವಸ್ತುವಿನ ಮೌಲ್ಯ ಗೊತ್ತಿಲ್ಲ ಎಂದು ಹೇಳುತ್ತೇವೆ.

ಇದು ಯಾರ ತಪ್ಪು? ಮಕ್ಕಳಿಗೆ ಋಣಾತ್ಮಕ ಅಂಶವನ್ನು ಹೇಳಬಾರದು ಎನ್ನುವ ಜಿದ್ದಿಗೆ ಬಿದ್ದು, ಯಸ್ ಅಪ್ಪಗಳು, ಅಮ್ಮಗಳು ಆಗಿದ್ದೇವೆ. ನೋ ಎನ್ನಬೇಕಾದಾಗ ನೋ ಅನ್ನದೆ ಇದ್ದುದರ ಫಲ ಇನ್ನೇನಾಗಲು ಸಾಧ್ಯ? ಈಗಲೂ ಕಾಲ ಮಿಂಚಿಲ್ಲ. ಎಲ್ಲವನ್ನೂ ಕಾಲದ ಮಹಿಮೆ, ಈಗಿನ ಮಕ್ಕಳೇ ಹೀಗೆ ಎನ್ನುವುದರ ಬದಲು ಎದ್ದು ನಿಂತು ಮಕ್ಕಳಿಗೆ ಕೆಲವು ವಿಚಾರಗಳು ಎವರ್‌ಗ್ರೀನ್ ಮಕ್ಕಳೇ, ಅವು ಎಂದಿಗೂ ಬದಲಾಗುವುದಿಲ್ಲ. ಅವುಗಳನ್ನು ಪಾಲಿಸುವುದರಲ್ಲಿ ನಮ್ಮೆಲ್ಲರ ಒಳಿತೂ ಅಡಗಿದೆ ಎಂದು ನೋಡಿ. ಅವು ಈಗಿನ ಕಾಲದ ಮಕ್ಕಳು ಬೇಗ ಅರ್ಥ ಮಾಡಿಕೊಳ್ಳುತ್ತಾರೆ ಎನ್ನುವ ನಂಬಿಕೆ ನನ್ನದು.

**– ರಂಗಸ್ವಾಮಿ** ಎಂ



---

# ಕರಾವಳಿ ಎಂದರೆ ಮಂಗಳೂರಷ್ಟೇ ಅಲ್ಲ!

ಪ್ರಸ್ತುತ ಕರಾವಳಿಯೆಂದರೆ ಕೇವಲ ಮಂಗಳೂರು ಎನ್ನುವುದು ಹಲವು ಬೆಂಗಳೂರಿಗರ ಭ್ರಮೆ. ಕರ್ನಾಟಕದ ಕರಾವಳಿಯಲ್ಲಿ ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಎಂದು ಮೂರು ಜಿಲ್ಲೆಗಳು ಇವೆ. 1859ಕ್ಕೆ ಮೊದಲು ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡವನ್ನು ಕೆನರಾ (ಕನ್ನಡದ ತಪ್ಪು ಉಚ್ಚಾರ) ಜಿಲ್ಲೆ ಎಂತಲೇ ಕರೆಯುತ್ತಿದ್ದರು. ಅದಕ್ಕೆ ಇಂದಿನ ಉತ್ತರ ಕನ್ನಡದ ಹೊನ್ನಾವರ ಜಿಲ್ಲಾ ಕೇಂದ್ರವಾಗಿತ್ತು.

1859ರಲ್ಲಿ ಬ್ರಿಟಿಷರು ಕೆನರಾ ಜಿಲ್ಲೆಯನ್ನು ಒಡೆದು 1862ರಲ್ಲಿ ಉತ್ತರ ಕನ್ನಡ ಜಿಲ್ಲೆಯನ್ನು ಬಾಂಬೆ ಪ್ರೆಸಿಡೆನ್ಸಿಗೆ ಮತ್ತು ದಕ್ಷಿಣ ಕನ್ನಡ (ಅವಿಭಜಿತ)ವನ್ನು ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿಸಿದರು. ಇಂದಿಗೂ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯವರು ಹಳೆಯ ಸರಕಾರಿ ಕಾಗದ ಪತ್ರಗಳಿಗೆ ಹೊನ್ನಾವರಕ್ಕೆ ಬರುವುದುಂಟು. ಕರ್ನಾಟಕ ಕರಾವಳಿಯ ಉದ್ದ ಒಟ್ಟು 320 ಕಿ.ಮೀ ಎಂದು ಹೇಳಲಾಗುತ್ತದೆ.

ಅದರಲ್ಲಿ ಉತ್ತರ ಕನ್ನಡ ಜಿಲ್ಲೆಯದೇ ಸಿಂಹಪಾಲು. ಉತ್ತರ ಕನ್ನಡವು ಸುಮಾರು 160 ಕಿ.ಮೀ, ಉಡುಪಿ ಸುಮಾರು 95 ಕಿ.ಮೀ ಹಾಗೂ ದಕ್ಷಿಣ ಕನ್ನಡ ಸುಮಾರು 65 ಕಿ.ಮೀ ಉದ್ದವನ್ನು ಹೊಂದಿದೆ ಎಂದು ಹೇಳಲಾಗುತ್ತಿದೆ. ದುರ್ದೈವ ಎಂದರೆ ಈಗಲೂ ಕರಾವಳಿ ಎಂದರೆ ಬೆಂಗಳೂರಿಗರು ಒಂದೋ ಮಂಗಳೂರು ಎನ್ನುತ್ತಾರೆ, ಇಲ್ಲವೇ ಗೋವಾ ಎನ್ನುತ್ತಾರೆ.

ಎಷ್ಟೋ ಬೆಂಗಳೂರಿಗರಿಗೆ ಗೋಕರ್ಣ, ಮಜಾಳಿಯ ಕಪ್ಪು ಮರಳಿನ ಸಮುದ್ರ ತೀರ ಇವೆ ಗೋವಾದಲ್ಲಿಯೇ ಬರುತ್ತದೆ ಎನ್ನುವ ಭ್ರಮೆ. ಉತ್ತರ ಕನ್ನಡ ಜಿಲ್ಲೆಯ ವಿಸ್ತೀರ್ಣ 10277 ಚದರ ಕಿಲೋ ಮೀಟರ್, ದಕ್ಷಿಣ ಕನ್ನಡ 4866 ಚ. ಕಿ.ಮೀ ಮತ್ತು ಉಡುಪಿಯ ವಿಸ್ತೀರ್ಣ 3582 ಚ. ಕಿ.ಮೀ. ಹೀಗಿರುವಾಗ ಕಳೆದ ಕೆಲವು ದಿನಗಳಿಂದ ಕರಾವಳಿ ಮತ್ತು ಮಲೆನಾಡಿನ ಕೆಲವು ಭಾಗಕ್ಕೆ ಉಚ್ಚ ನ್ಯಾಯಾಲಯದ ಪೀಠವನ್ನು ಕೊಡುವುದೆಂತಲೂ ಹಾಗೂ ಅದನ್ನು ಮಂಗಳೂರಿನಲ್ಲಿ ಸ್ಥಾಪಿಸ ಬೇಕೆಂತಲೂ ನಿರ್ಧಾರ ಮಾಡಿಯಾಗಿದೆ ಎಂಬ ಸುದ್ದಿಗಳು ಹರಿದಾಡುತ್ತಿವೆ.

ಅದು ಸತ್ಯವೇ ಆಗಿದ್ದಲ್ಲಿ ಇತ್ತೀಚೆಗೆ ನ್ಯಾಯ ಕೊಡುವ ದೃಷ್ಟಿಯಿಂದ ಎಸಗಿದ ದೊಡ್ಡ ಅನ್ಯಾಯ ಎಂತಲೇ ಇದನ್ನು ಬಣ್ಣಿಸಬಹುದು. ಉಚ್ಚ ನ್ಯಾಯಾಲಯದ ಪೀಠಗಳ ರಚನೆ ಇಡೀ ದೇಶದಲ್ಲಿ ಹೆಚ್ಚೆಚ್ಚು ಆಗುತ್ತಿವೆ. ಇದರ ಉದ್ದೇಶ ನ್ಯಾಯವನ್ನು ಮನೆ ಬಾಗಿಲಿಗೆ ತಂದು ಕೊಡುವುದೇ ಆಗಿದೆ. ಅದರ ಜೊತೆಗೆ ಸಮಯ, ಹಣದ ಉಳಿತಾಯ, ಸಾರ್ವಜನಿಕರಿಗೆ ಸುಲಭ ಲಭ್ಯತೆ ಇತ್ಯಾದಿ ಕಾರಣಗಳು. ಆದರೆ ಇವೆಲ್ಲವನ್ನೂ ಪರಿಗಣಿಸದೇ ಕೇರಳದ ಗಡಿಯ ಮಂಗಳೂರಿನಲ್ಲಿ ಉಚ್ಚ ನ್ಯಾಯಾಲಯದ ಪೀಠ ಸ್ಥಾಪಿಸುವುದು ಹೆಚ್ಚಿನ ಸಾರ್ವಜನಿಕರಿಗೆ ಅನಾನುಕೂಲ ಉಂಟು ಮಾಡುವಂತಹದು.

ಈಗಾಗಲೇ ಉತ್ತರ ಕನ್ನಡ ಜಿಲ್ಲೆ ಧಾರವಾಡ ಉಚ್ಚ ನ್ಯಾಯಾಲಯದ ಪೀಠದ ನ್ಯಾಯಾಧೀಕರಣಕ್ಕೆ ಬರುತ್ತಿದೆ. ಉದಾಹರಣೆ ನೀಡಿ ಹೇಳುವುದಾದರೆ ಮುಂಚೆ ಕಾರವಾರದವರು ಉಚ್ಚ ನ್ಯಾಯಾಲಯ ಧಾರವಾಡಕ್ಕೆ ಮೂರು ತಾಸಿಗೆ ಹೋಗುತ್ತಿದ್ದರು. ಕ್ರಮಿಸಬೇಕಾದ ದೂರ ಅಂದಾಜು 170 ಕಿ.ಮೀ ಆಗುತ್ತಿತ್ತು. ಈಗ ಮಂಗಳೂರಿಗೆ ಹೋಗಬೇಕಾದರೆ 5.30 ತಾಸು ಬೇಕಾಗುತ್ತದೆ ಹಾಗೂ ಕ್ರಮಿಸ ಬೇಕಾದ ದೂರ 270 ಕಿ.ಮೀ. ಇದು ನ್ಯಾಯವೇ? ಅದೇ ರೀತಿ ಉತ್ತರ ಕನ್ನಡ ಜಿಲ್ಲೆಯ ಹಳಿಯಾದವರು ಧಾರವಾಡಕ್ಕೆ ಹೋಗಲು ಅರ್ಧ ತಾಸು ತೆಗೆದುಕೊಳ್ಳುತ್ತಿದ್ದರು, ಈಗ ಮಂಗಳೂರಿಗೆ ಹೋಗಲು ಸುಮಾರು 7 ತಾಸು ಕ್ರಮಿಸಬೇಕಾಗುತ್ತದೆ.

ಹಳಿಯಾಳದವರು ಮಾಡಿದ ಪಾಪವಾದರೂ ಏನು? ಅದಕ್ಕಾಗಿ ಇತ್ತೀಚೆಗೆ ಉತ್ತರ ಕನ್ನಡ ಜಿಲ್ಲೆ ವಕೀಲರ ಸಂಘದವರು ತೀರ್ಮಾನ ಮಾಡಿ ಕರಾವಳಿ ಪೀಠವನ್ನು ಉತ್ತರ ಕನ್ನಡ ಜಿಲ್ಲೆಯ ಮಧ್ಯಂತರ ಸ್ಥಳದಲ್ಲಿ ಮಾಡಲು ಠರಾವು ಪಾಸು ಮಾಡಿದೆ. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ಪೀಠವಾದರೆ ಶಿವಮೊಗ್ಗದವರು ಒಟ್ಟು 150 ಕಿ.ಮೀನ ಹೊನ್ನಾವರಕ್ಕೆ ಮೂರು ತಾಸಿನಲ್ಲಿ ಪ್ರಯಾಣಿಸಬಹುದು. ಶಿವಮೊಗ್ಗದವರು ಮಂಗಳೂರಿಗೆ ಹೋಗಲು 203 ಕಿ.ಮೀ ಚಲಿಸಲು 4.15 ತಾಸು ತೆಗೆದುಕೊಳ್ಳಬೇಕಾಗುತ್ತದೆ.

ಹೊನ್ನಾವರದಲ್ಲಿ ಪೀಠವಾದರೆ ಬೈಂದೂರಿನವರಿಗೆ ಮಂಗಳೂರು 124 ಕಿ.ಮೀ, ಅದೇ ಹೊನ್ನಾವರ ಕೇವಲ 56 ಕಿ.ಮೀ. ಕುಂದಾಪುರದವರಿಗೂ ಮಂಗಳೂರು ಮತ್ತು ಹೊನ್ನಾವರ ಸಮಾನ ದೂರ. ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು 12 ತಾಲೂಕುಗಳಲ್ಲಿ 11 ವಕೀಲರ ಸಂಘಗಳು ಇವೆ. ಇದರ ಅರ್ಥ 11 ಕಡೆ ನ್ಯಾಯಾಲಯಗಳು ಇವೆ.

ಅದೇ ಉಡುಪಿಯಲ್ಲಿ 4 ಮತ್ತು ದಕ್ಷಿಣ ಕನ್ನಡದಲ್ಲಿ 6 ವಕೀಲರ ಸಂಘಗಳಿವೆ. ಉತ್ತರ ಕನ್ನಡ ಜಿಲ್ಲೆಯ ಪ್ರಕರಣಗಳ ಸಂಖ್ಯೆ ಧಾರವಾಡದ ಉಚ್ಚ ನ್ಯಾಯಾಲಯದಲ್ಲಿ ಸಾಕಷ್ಟು ಇವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಅನೇಕ ಉದ್ದೇಶಗಳಿಗೆ ಭೂ ಸ್ವಾಧೀನ ಆಗಿರುವುದರಿಂದ ಆ ಪ್ರಕರಣಗಳು, ಸಿವಿಲ್, ಕ್ರಿಮಿನಲ್ ಪ್ರಕರಣಗಳು ಸಾಕಷ್ಟು ಉಚ್ಚ ನ್ಯಾಯಾಲಯದಲ್ಲಿ ಇವೆ.



> 1859ರಲ್ಲಿ ಬ್ರಿಟಿಷರು ಕೆನರಾ ಜಿಲ್ಲೆಯನ್ನು ಒಡೆದು 1862ರಲ್ಲಿ ಉತ್ತರ ಕನ್ನಡ ಜಿಲ್ಲೆಯನ್ನು ಬಾಂಬೆ ಪ್ರೆಸಿಡೆನ್ಸಿಗೆ ಮತ್ತು ದಕ್ಷಿಣ ಕನ್ನಡ (ಅವಿಭಜಿತ)ವನ್ನು ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿಸಿದರು. ಇಂದಿಗೂ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯವರು ಹಳೆಯ ಸರಕಾರಿ ಕಾಗದ ಪತ್ರಗಳಿಗೆ ಹೊನ್ನಾವರಕ್ಕೆ ಬರುವುದುಂಟು. ಕರ್ನಾಟಕ ಕರಾವಳಿಯ ಉದ್ದ ಒಟ್ಟು 320 ಕಿ.ಮೀ ಎಂದು ಹೇಳಲಾಗುತ್ತದೆ.

ಅಷ್ಟೇ ಅಲ್ಲದೇ ಈ ಜಿಲ್ಲೆಯಲ್ಲಿ ಒಟ್ಟು ಎರಡು ರಾಷ್ಟ್ರೀಯ ಹೆದ್ದಾರಿಗಳು ಹಾದು ಹೋಗಿವೆ. ಅನೇಕ ಎಂಎಫ್‌ಎ ಪ್ರಕರಣಗಳು ಸಾಕಷ್ಟು ಉಚ್ಚ ನ್ಯಾಯಾಲಯದ ಹಂತದಲ್ಲಿವೆ. ಮೇಲಾಗಿ ಉತ್ತರ ಕನ್ನಡದವರಿಗೆ ಬೆಳಗಾವಿ ರೆವಿನ್ಯೂ ವಿಭಾಗವಾಗಿರುತ್ತದೆ. ಗ್ರಾಹಕ ನ್ಯಾಯಾಲಯದ ಪೀಠ, ಕೆಎಟಿ ಪೀಠ, ರೆವಿನ್ಯೂ ಅರೆ ನ್ಯಾಯಿಕ ಪ್ರಾಧಿಕಾರಿಗಳು ಹೀಗೆ ಅನೇಕ ಕೆಲಸಗಳಿಗಾಗಿ ಬೆಳಗಾವಿಗೆ ಹೋಗ ಬೇಕಾಗುತ್ತದೆ. ಒಂದೇ ಪ್ರಕರಣದಿಂದ ಉದ್ಭವಿಸಿದ ರೆವಿನ್ಯೂ ಹಾಗೂ ಸಿವಿಲ್ ಪ್ರಕರಣಗಳಿಗೆ ಬೆಳಗಾವಿ ಹಾಗೂ ಮಂಗಳೂರಿಗೆ ಅಲೆಯುವುದೆಂದರೆ ಆ ಬಡ ಕಕ್ಷಿಗಾರನ ಪರಿಸ್ಥಿತಿ ಏನಾಗಬೇಡ.

ಆದ್ದರಿಂದ ಉತ್ತರ ಕನ್ನಡದ ಜಿಲ್ಲೆಯ ವಕೀಲರು ಹಾಗೂ ನಾಗರಿಕರು ಎದ್ದು ನಿಂತು ಹೋರಾಟಕ್ಕೆ ಅಣಿಯಾಗುತ್ತಿದ್ದಾರೆ. ನ್ಯಾಯದ ಹೆಸರಿನಲ್ಲಿ ಅನ್ಯಾಯ ಆಗುವುದನ್ನು ತಪ್ಪಿಸಲು ಹೋರಾಡಲೇ ಬೇಕಿದೆ. ಉತ್ತರ ಕನ್ನಡದಲ್ಲಿ ಪೀಠ ಸ್ಥಾಪನೆ ಅಸಾಧ್ಯವಾದರೆ ಉತ್ತರ ಕನ್ನಡ ಧಾರವಾಡ ಪೀಠದ ನ್ಯಾಯಾಧೀಕರಣಕ್ಕೇ ಇರಲಿ, ಮತ್ತೆ ಮುಂದಿನ ದಿನಗಳಲ್ಲಿ ವಾರಕ್ಕೆ 2-3 ದಿನ ಸಂಚಾರಿ ಪೀಠವನ್ನು ಉತ್ತರ ಕನ್ನಡದಲ್ಲಿ ಸ್ಥಾಪಿಸಿದರೆ ಆಯಿತು ಎನ್ನುವುದು ಉತ್ತರ ಕನ್ನಡದವರ ಅಂಬೋಣವಾಗಿದೆ.

ಈಗಾಗಲೇ ಶಿವಮೊಗ್ಗದವರೂ ಸಹ ಮಂಗಳೂರಿನಲ್ಲಿ ಪೀಠ ಬೇಡ ಎಂದು ಹೋರಾಟಕ್ಕೆ ಇಳಿದಾಗಿದೆ. ಉತ್ತರ ಕನ್ನಡವೂ ಇಳಿಯಲೇಬೇಕಾದ ಅನಿವಾರ್ಯತೆ ಹೊಂದಿದೆ. ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾಗಿ, ಕರಾವಳಿ ಭಾಗದ ಭೌಗೋಳಿಕ ಪರಿಚಯವನ್ನು ಹೊಂದಿರುವ, ರಾಜ್ಯಪಾಲರೂ ಆಗಿರುವ ಗೌರವಾನ್ವಿತ ನ್ಯಾಯಮೂರ್ತಿ ನಜೀರ್‌ರವರು ಉತ್ತರ ಕನ್ನಡಿಗರ ಸಮಸ್ಯೆಯನ್ನು ಗಮನಕ್ಕೆ ತೆಗೆದುಕೊಂಡರೆ ಮತ್ತು ಅವರು ಮಧ್ಯ ಪ್ರವೇಶಿಸಿ ಉತ್ತರ ಕನ್ನಡಕ್ಕೆ ನ್ಯಾಯ ಒದಗಿಸಿದರೆ ಅವರಿಗೆ ಸದಾ ಉತ್ತರ ಕನ್ನಡ ಚಿರಋಣಿ.

**– ನಾಗರಾಜ** ನಾಯಕ

---



# ಲುಡ್ಡೈಟ್ಸ್ ಅಂದರೆ ಯಾರು?

ಸಂಪಾದಕರ ಸದ್ಯಶೋಧನೆ

ಇತ್ತೀಚೆಗೆ ಒಂದು ಪಾರ್ಟಿಯಲ್ಲಿ ನನ್ನ ಸ್ನೇಹಿತರೊಬ್ಬರು, ಇವರು ನನ್ನ ಸ್ನೇಹಿತರು, ಅಮೆರಿಕದ ಯೇಲ್ ವಿಶ್ವವಿದ್ಯಾಲಯದಲ್ಲಿ ಕಂಪ್ಯೂಟರ್ ಸೈನ್ಸ್ ಪ್ರಾಧ್ಯಾಪಕರು ಎಂದು ತಮ್ಮ ಸ್ನೇಹಿತರನ್ನು ಪರಿಚಯ ಮಾಡಿಕೊಟ್ಟರು. ಅದಕ್ಕೆ ನನ್ನ ಸ್ನೇಹಿತರ ಸ್ನೇಹಿತರು, ನಾನು ಕಂಪ್ಯೂಟರ್ ಸೈನ್ಸ್ ಪ್ರಾಧ್ಯಾಪಕನಾಗಿದ್ದರೂ ಲುಡ್ಡೈಟ್ಸ್ ಎಂದು ಕರೆದುಕೊಳ್ಳಲು ಬಯಸುತ್ತೇನೆ ಎಂದು ಹೇಳಿದರು.ಕೈಗಾರಿಕಾ ಕ್ರಾಂತಿಯ ಕಾಲದಲ್ಲಿ ಇಂಗ್ಲೆಂಡಿನ ಜವಳಿ ಕಾರ್ಖಾನೆಗಳಲ್ಲಿ ಯಂತ್ರಗಳನ್ನು ಧ್ವಂಸ ಗೊಳಿಸುವ ಮೂಲಕ ಜಗತ್ತಿನ ಗಮನ ಸೆಳೆದ ಒಂದು ಐತಿಹಾಸಿಕ ಚಳವಳಿಯ ಹೆಸರು ಲುಡ್ಡೈಟ್ಸ್ ಅಥವಾ ಲಡ್ಡೈಟ್ಸ್. ಇಂದು ನಾವು ಯಾವುದೇ ಹೊಸ ತಂತ್ರನ, ನಾವೀನ್ಯ ಅಥವಾ ಕಂಪ್ಯೂಟರೀಕರಣವನ್ನು ವಿರೋಧಿಸುವ ಜನರನ್ನು ಕರೆಯಲು ಲುಡ್ಡೈಟ್ಸ್ ಎಂಬ ಪದವನ್ನು ಬಳಸುತ್ತೇವೆ. ಆದರೆ, ಇತಿಹಾಸದ ಪುಟಗಳನ್ನು ತಿರುವಿ ನೋಡಿದಾಗ, ಲುಡ್ಡೈಟ್ಸ್‌ಗಳು ಕೇವಲ ತಂತ್ರಜ್ಞಾನದ ಕುರುಡು ವಿರೋಧಿಗಳಾಗಿರಲಿಲ್ಲ. ಬದಲಿಗೆ ಅವರು ತಮ್ಮ ಬದುಕು, ಹಕ್ಕು ಮತ್ತು ಸ್ವಾಭಿಮಾನಕ್ಕಾಗಿ ಹೋರಾಡಿದ ಕಾರ್ಮಿಕರಾಗಿದ್ದರು ಎಂಬುದು ಸ್ಪಷ್ಟವಾಗುತ್ತದೆ.

1811 ರಿಂದ 1816 ರ ಅವಧಿಯಲ್ಲಿ ಇಂಗ್ಲೆಂಡಿನ ನಾಟಿಂಗ್ ಹ್ಯಾಮ್‌ಶೈರ್, ಯಾರ್ಕ್‌ಶೈರ್ ಮತ್ತು ಲಂಕಾ ಷೈರ್ ಪ್ರಾಂತ್ಯಗಳಲ್ಲಿ ಈ ಚಳವಳಿ ತೀವ್ರವಾಗಿ ಹರಡಿತು. ಆ ಕಾಲಘಟ್ಟದಲ್ಲಿ ಕೈಗಾರಿಕಾ ಕ್ರಾಂತಿ ತೀವ್ರ ಗತಿಯಲ್ಲಿ ಸಾಗುತ್ತಿತ್ತು. ಕೈಮಗ್ಗಗಳ ಜಾಗದಲ್ಲಿ ಬೃಹತ್ ಯಾಂತ್ರಿಕ ಮಗ್ಗಗಳು (ಪವರ್ ಲೂಮ್ಸ್) ಮತ್ತು ನೂಲುವ ಯಂತ್ರಗಳು ಕಾರ್ಖಾನೆಗಳನ್ನು ಪ್ರವೇಶಿಸಿದವು.

ಈ ಯಂತ್ರಗಳ ಆಗಮನದಿಂದಾಗಿ, ತಲೆಮಾರುಗಳಿಂದ ಗೌರವಾನ್ವಿತ ಮತ್ತು ನುರಿತ ಜವಳಿ ಕುಶಲಕರ್ಮಿಗಳಾಗಿದ್ದ ನೇಯ್ಗೆಯವರು ತಮ್ಮ ಕೆಲಸವನ್ನು ಕಳೆದುಕೊಳ್ಳುವ ಭೀತಿ ಎದುರಿಸಿದರು. ಯಂತ್ರಗಳು ಕಡಿಮೆ ವೆಚ್ಚದಲ್ಲಿ, ಕಡಿಮೆ ನುರಿತ ಕಾರ್ಮಿಕರನ್ನು (ಹೆಚ್ಚಾಗಿ ಮಹಿಳೆಯರು ಮತ್ತು ಮಕ್ಕಳನ್ನು) ಬಳಸಿ ಅತಿ ಹೆಚ್ಚು ಬಟ್ಟೆಗಳನ್ನು ಉತ್ಪಾದಿಸತೊಡಗಿದವು.

ಇದು ಸಾಂಪ್ರದಾಯಿಕ ಕಾರ್ಮಿಕರ ವೇತನ ಕುಸಿತಕ್ಕೆ ಮತ್ತು ನಿರುದ್ಯೋಗಕ್ಕೆ ಕಾರಣವಾಯಿತು. ಈ ಆರ್ಥಿಕ ಸಂಕಷ್ಟ ಮತ್ತು ಶೋಷಣೆಯ ವಿರುದ್ಧ ಸಿಡಿದೆದ್ದ ಕಾರ್ಮಿಕರ ಗುಂಪೇ ಲುಡ್ಡೈಟ್ಸ್. ಈ ಚಳವಳಿಗೆ ಲುಡ್ಡೈಟ್ಸ್ ಎಂಬ ಹೆಸರು ಬರಲು ನೆಡ್ ಲುಡ್ ಎಂಬ ವ್ಯಕ್ತಿ ಕಾರಣ. ಆತ ಕೋಪದಲ್ಲಿ ಎರಡು ಯಾಂತ್ರಿಕ ಹೆಣಿಗೆ ಯಂತ್ರಗಳನ್ನು ಒಡೆದು ಹಾಕಿದ್ದ. ಇವನ ಸುತ್ತ ಕ್ರಮೇಣ ದಂತಕಥೆಗಳು ಸೃಷ್ಟಿಯಾದವು. ಕಾರ್ಮಿಕರು ಅವನನ್ನು ಕಿಂಗ್‌ಲುಡ್ ಅಥವಾ ಜನರಲ್ ಲುಡ್ ಎಂದು ಕರೆಯುತ್ತಾ, ಅವನ ಹೆಸರಿನಲ್ಲಿ ಕಾರ್ಖಾನೆಯ ಮಾಲೀಕರಿಗೆ ಬೆದರಿಕೆ ಪತ್ರಗಳನ್ನು ಕಳುಹಿಸಲು ಪ್ರಾರಂಭಿಸಿದರು. ನೆಡ್ ಲುಡ್ ಎಂಬ ಪ್ರವಾದಿ ಅಥವಾ ನಾಯಕ ನಿಜವಾಗಿಯೂ ಬದುಕಿದ್ದನೇ ಎಂಬುದಕ್ಕೆ ಯಾವುದೇ ಗಟ್ಟಿ ಪುರಾವೆಗಳಿಲ್ಲ. ಆದರೆ, ಶೋಷಿತ ಕಾರ್ಮಿಕರಿಗೆ ಆ ಹೆಸರು ಒಂದು ದೊಡ್ಡ ಸಾಂಕೇತಿಕ ಶಕ್ತಿಯಾಗಿ ಮಾರ್ಪಟ್ಟಿತು. ಅವರು ರಾತ್ರೋರಾತ್ರಿ ಮುಖವಾಡ ಧರಿಸಿ ಕಾರ್ಖಾನೆಗಳಿಗೆ ನುಗ್ಗಿ, ಹೊಸ ಯಂತ್ರಗಳನ್ನು ಸುತ್ತಿಗೆಯಿಂದ ಬಡಿದು ಧ್ವಂಸಗೊಳಿಸುತ್ತಿದ್ದರು. ಆಧುನಿಕ ಜಗತ್ತು ಲುಡ್ಡೈಟ್ಸ್‌ಗಳನ್ನು ಬದಲಾವಣೆಯನ್ನು ಒಪ್ಪದ ಮೂರ್ಖರು ಎಂಬಂತೆ ಬಿಂಬಿಸುತ್ತದೆ. ಆದರೆ ಅವರ ಹೋರಾಟ ತಂತ್ರಜ್ಞಾನದ ಮೇಲಲ್ಲ, ಬದಲಿಗೆ ಆ ತಂತ್ರಜ್ಞಾನವನ್ನು ಬಳಸಿ ಮಾಲೀಕರು ಮಾಡುತ್ತಿದ್ದ ಆರ್ಥಿಕ ಶೋಷಣೆಯ ವಿರುದ್ಧವಾಗಿತ್ತು. ಲುಡ್ಡೈಟ್ಸ್ ಚಳವಳಿ ಬ್ರಿಟಿಷ್ ಸರಕಾರವನ್ನು ತಲ್ಲಣಗೊಳಿಸಿತು. ಆ ಸಮಯದಲ್ಲಿ ನೆಪೋಲಿಯನ್ ವಿರುದ್ಧದ ಯುದ್ಧದಲ್ಲಿ ನಿರತವಾಗಿದ್ದ ಬ್ರಿಟಿಷ್ ಸರಕಾರ, ದೇಶದ ಒಳಗಿನ ಈ ದಂಗೆಯನ್ನು ಹತ್ತಿಕ್ಕಲು ತನ್ನ ಸೈನ್ಯವನ್ನು ಬಳಸಿತು. ಒಂದು ಹಂತದಲ್ಲಿ, ಯುರೋಪ್ ರಣರಂಗದಲ್ಲಿದ್ದ ಸೈನಿಕರಿಗಿಂತ ಹೆಚ್ಚು ಬ್ರಿಟಿಷ್ ಸೈನಿಕರು ಇಂಗ್ಲೆಂಡಿನ ಒಳಗೇ ಲುಡ್ಡೈಟ್ಸ್‌ಗಳನ್ನು ಮಟ್ಟ ಹಾಕಲು ನಿಯೋಜನೆಗೊಂಡಿದ್ದರು.

ಸರಕಾರವು ನೂರಾರು ಲುಡ್ಡೈಟ್ಸ್‌ಗಳನ್ನು ಬಂಧಿಸಿತು. ಅನೇಕರನ್ನು ಸಾರ್ವಜನಿಕವಾಗಿ ಗಲ್ಲಿಗೇರಿಸಲಾಯಿತು ಮತ್ತು ಇನ್ನು ಹಲವರನ್ನು ಆಸ್ಟ್ರೇಲಿಯಾದ ದ್ವೀಪಗಳಿಗೆ ಗಡಿಪಾರು ಮಾಡಲಾಯಿತು. ಕಾಲ ಬದಲಾಗಿದೆ, ಆದರೆ ಲುಡೈಟ್ಸ್ ಮನಸ್ಥಿತಿ ಇಂದಿಗೂ ಜೀವಂತವಾಗಿದೆ. ಇಂದು ಆಧುನಿಕ ತಂತ್ರಜ್ಞಾನ, ಗಣಕೀಕರಣ, ಜಾಗತೀಕರಣ ಮತ್ತು ಕೃತಕ ಬುದ್ಧಿಮತ್ತೆಯನ್ನು ವಿರೋಧಿಸುವವರನ್ನು ಲುಡ್ಡೈಟ್ಸ್ ಎಂದು ಕರೆಯಲಾಗುತ್ತದೆ. ಅಭಿವೃದ್ಧಿ ಎಂದರೆ ಕೇವಲ ಯಂತ್ರಗಳ ಮೇಲ್ದರ್ಜೆಯಲ್ಲ, ಮನುಷ್ಯನ ಜೀವನಮಟ್ಟದ ಸುಧಾರಣೆಯೂ ಹೌದು ಎಂಬುದು ಲುಡ್ಡೈಟ್ಸ್‌ಗಳ ವಾದ.

**– ವಿಶ್ವೇಶ್ವರ** ಭಟ್

---

# ನಾಯಿಗಳಿಗೆ ಟೈಮ್ ತಿಳಿಯುತ್ತದಾ?

ಸಂಪಾದಕರ ಸದ್ಯಶೋಧನೆ

ನಾಯಿಗಳು ಸಮಯವನ್ನು ಗುರುತಿಸಬಲ್ಲವೇ? ಇದು ಪ್ರಾಣಿ ಪ್ರೇಮಿಗಳಲ್ಲಿ ಮತ್ತು ವಿಜ್ಞಾನಿಗಳಲ್ಲಿ ಬಹಳ ದಿನಗಳಿಂದ ಇರುವ ಒಂದು ಕುತೂಹಲಕಾರಿ ಪ್ರಶ್ನೆ. ಮನುಷ್ಯರಂತೆ ನಾಯಿಗಳಿಗೆ ವಾಚ್ ನೋಡಿ ಈಗ ಐದು ಗಂಟೆ ಆಯ್ತು ಎಂದು ಹೇಳಲು ಬಾರದೇ ಇರಬಹುದು, ಆದರೆ ಅವುಗಳಿಗೆ ಸಮಯದ ಪ್ರಜ್ಞೆ ಅದ್ಭುತ. ಮನುಷ್ಯರಂತೆ ನಾಯಿಗಳ ದೇಹದಲ್ಲೂ ಒಂದು ಸ್ವಾಭಾವಿಕ ಜೈವಿಕ ಗಡಿಯಾರ ಇರುತ್ತದೆ. ಬೆಳಕು ಮತ್ತು ಕತ್ತಲೆಯ ಆಧಾರದ ಮೇಲೆ ಅವುಗಳ ದೇಹವು ಹಾರ್ಮೋನ್‌ಗಳನ್ನು ಬಿಡುಗಡೆ ಮಾಡುತ್ತದೆ.

ಸೂರ್ಯನ ಬೆಳಕು ಬೀಳುತ್ತಿದ್ದಂತೆ ಅವುಗಳಿಗೆ ಎಚ್ಚರವಾಗುತ್ತದೆ ಮತ್ತು ಚಟುವಟಿಕೆಯಿಂದ ಇರಬೇಕೆಂಬ ಪ್ರಜ್ಞೆ ಮೂಡುತ್ತದೆ. ಕತ್ತಲಾಗುತ್ತಿದ್ದಂತೆ ಅವುಗಳ ದೇಹವು ವಿಶ್ರಾಂತಿ ಪಡೆಯಲು ಸಿದ್ಧವಾಗುತ್ತದೆ. ನಾಯಿಗಳ ಮೂಗು ಎಷ್ಟು ಶಕ್ತಿಯುತವಾಗಿದೆ ಎಂದರೆ, ಅವು ಗಾಳಿಯಲ್ಲಿರುವ ವಾಸನೆಯ ಬದಲಾವಣೆಯಿಂದ ಸಮಯವನ್ನು ಲೆಕ್ಕ ಹಾಕುತ್ತವೆ. ನೀವು ಬೆಳಗ್ಗೆ ಕೆಲಸಕ್ಕೆ ಹೋಗುವಾಗ ಮನೆಯಲ್ಲಿ ನಿಮ್ಮ ವಾಸನೆ ತೀವ್ರವಾಗಿರುತ್ತದೆ.



ನೀವು ಹೊರಗಡೆ ಇದ್ದಷ್ಟು ಸಮಯ, ಮನೆಯಲ್ಲಿ ನಿಮ್ಮ ವಾಸನೆ ಮೆಲ್ಲಗೆ ಕಡಿಮೆಯಾಗುತ್ತಾ ಬರುತ್ತದೆ. ದಿನಾಲೂ ನೀವು ಸಂಜೆ ಐದು ಗಂಟೆಗೆ ಮನೆಗೆ ಬರುತ್ತೀರಿ ಎಂದಾದರೆ, ಆ ಸಮಯಕ್ಕೆ ಮನೆಯಲ್ಲಿ ನಿಮ್ಮ ವಾಸನೆ ಎಷ್ಟು ಮಟ್ಟಿಗೆ ಕಡಿಮೆಯಾಗಿರಬೇಕು ಎಂದು ನಾಯಿಗೆ ಗೊತ್ತಿರುತ್ತದೆ.

ಆ ನಿರ್ದಿಷ್ಟ ವಾಸನೆಯ ಮಟ್ಟವನ್ನು ತಲುಪಿದಾಗ, ನಾಯಿ ನೀವು ಬರುವ ಸಮಯವಾಯಿತೆಂದು ಬಾಗಿಲ ಬಳಿ ಕಾಯಲು ಶುರು ಮಾಡುತ್ತದೆ. ನಾಯಿಗಳು ದಿನನಿತ್ಯದ ಹವ್ಯಾಸಗಳಿಗೆ ಬೇಗನೆ ಹೊಂದಿಕೊಳ್ಳುತ್ತವೆ.

ನೀವು ದಿನಾಲೂ ಬೆಳಗ್ಗೆ ಎಂಟು ಗಂಟೆಗೆ ಆಹಾರ ನೀಡುತ್ತಿದ್ದರೆ, ನಾಯಿಯ ಹೊಟ್ಟೆಯಲ್ಲಿ ಜೀರ್ಣಕಾರಿ ರಸಗಳು ಅದೇ ಸಮಯಕ್ಕೆ ಬಿಡುಗಡೆಯಾಗಲು ಆರಂಭಿಸುತ್ತವೆ. ಗಡಿಯಾರದ ಮುಳ್ಳು ಎಂಟಕ್ಕೆ ಬರುವ ಮುನ್ನವೇ ನಾಯಿಯ ಹೊಟ್ಟೆ ಅದಕ್ಕೆ ಸಮಯದ ನೆನಪು ಮಾಡಿಕೊಡುತ್ತದೆ. ನಾಯಿಗಳು ನಮ್ಮ ದಿನಚರಿಯನ್ನು ಸೂಕ್ಷ್ಮವಾಗಿ ಗಮನಿಸುತ್ತವೆ. ಮನೆಯ ಹೊರಗೆ ಶಾಲಾ ಬಸ್ ಬರುವ ಸದ್ದು, ನಿರ್ದಿಷ್ಟ ಸಮಯದಲ್ಲಿ ಬರುವ ಸೂರ್ಯನ ಬಿಸಿಲಿನ ಕಿರಣಗಳು ಅಥವಾ ದೂರದ ದೇವಸ್ಥಾನದ ಗಂಟೆಯ ಸದ್ದು- ಇವೆಲ್ಲವೂ ಅವುಗಳಿಗೆ ಸಮಯದ ಸೂಚಕಗಳಾಗಿ ಕೆಲಸ ಮಾಡುತ್ತವೆ.

ನಾಯಿಗಳಿಗೆ ನಮ್ಮಂತೆ ನಿಮಿಷ ಅಥವಾ ಗಂಟೆ ಎಂಬ ಗಣಿತದ ಲೆಕ್ಕಾಚಾರ ಗೊತ್ತಿಲ್ಲ. ಆದರೆ ಅವು ಪರಿಸರದಲ್ಲಿ ಆಗುವ ಬದಲಾವಣೆಗಳು, ತಮ್ಮ ದೇಹದ ಅಗತ್ಯಗಳು ಮತ್ತು ಮುಖ್ಯವಾಗಿ ವಾಸನೆಯ ಏರಿಳಿತಗಳನ್ನು ಬಳಸಿಕೊಂಡು ಸಮಯವನ್ನು ಅತ್ಯಂತ ನಿಖರವಾಗಿ ಗ್ರಹಿಸುತ್ತವೆ.

ನಿಮ್ಮ ನಾಯಿ ನೀವು ಬರುವ ಸಮಯಕ್ಕೆ ಸರಿಯಾಗಿ ಬಾಗಿಲಲ್ಲಿ ನಿಂತಿದ್ದರೆ, ಅದಕ್ಕೆ ನಿಮ್ಮ ಮೇಲಿರುವ ಪ್ರೀತಿ ಮತ್ತು ಅದರ ಅದ್ಭುತ ಮೂಗಿನ ಶಕ್ತಿಯೇ ಕಾರಣ. ನಾಯಿಗಳು ತಮ್ಮ ಯಜಮಾನರ ಪ್ರತಿಯೊಂದು ಸಣ್ಣ ಚಲನವಲನವನ್ನು ಗಮನಿಸುತ್ತಿರುತ್ತವೆ. ನೀವು ಲ್ಯಾಪ್‌ಟಾಪ್ ಮುಚ್ಚುವ ಸದ್ದು, ಕೀಲಿ ಕೈ ಕೈಗೆತ್ತಿಕೊಳ್ಳುವ ಶಬ್ದ ಅಥವಾ ಆಫೀಸ್ ಬಟ್ಟೆ ಬದಲಾಯಿಸುವ ರೀತಿ-ಇವೆಲ್ಲವನ್ನೂ ಅವು ಭವಿಷ್ಯದ ಘಟನೆಗಳೊಂದಿಗೆ ಜೋಡಿಸುತ್ತವೆ.

ನೀವು ಒಂದು ಕೆಲಸ ಮಾಡಿದ ನಂತರ ಮುಂದೇನು ನಡೆಯುತ್ತದೆ ಎಂಬ ಸಮಯದ ಸರಣಿ ಅವುಗಳ ತಲೆಯಲ್ಲಿ ಅಚ್ಚೊತ್ತಿರುತ್ತದೆ. ನಾಯಿಗಳಿಗೆ ಕೇವಲ ವರ್ತಮಾನ ಕಾಲ ಮಾತ್ರವಲ್ಲ, ಭೂತಕಾಲದ ಘಟನೆಗಳ ನೆನಪೂ ಇರುತ್ತದೆ. ನೀವು ಐದು ನಿಮಿಷಗಳ ಕಾಲ ಹೊರಗೆ ಹೋಗಿ ಬಂದಾಗ ನಾಯಿ ತೋರಿಸುವ ಉತ್ಸಾಹಕ್ಕೂ, ಐದು ಗಂಟೆಗಳ ಕಾಲ ಹೊರಗೆ ಹೋಗಿ ಬಂದಾಗ ತೋರಿಸುವ ಸಂಭ್ರಮಕ್ಕೂ ವ್ಯತ್ಯಾಸವಿರುತ್ತದೆ.

ತಾವು ಎಷ್ಟು ಸಮಯ ಒಂಟಿಯಾಗಿದ್ದೆವು ಎಂಬ ಅಂತರದ ಅರಿವು ಅವುಗಳ ಮಿದುಳಿಗೆ ಸ್ಪಷ್ಟವಾಗಿ ಆಗಿರುತ್ತದೆ. ನಾಯಿಗಳು ತಮ್ಮ ಸುತ್ತಲಿನ ಸಾಮಾಜಿಕ ವಾತಾವರಣಕ್ಕೆ ತಕ್ಕಂತೆ ಸಮಯವನ್ನು ಹೊಂದಿಸಿಕೊಳ್ಳುತ್ತವೆ. ಮನೆಯ ಇತರ ಸದಸ್ಯರು ಎದ್ದೇಳುವ ಸಮಯ, ಟಿವಿ ಆನ್ ಆಗುವ ಸಮಯ ಅಥವಾ ರಾತ್ರಿ ಲೈಟ್ ಆಫ್ ಆಗುವ ಸಮಯವನ್ನು ನೋಡಿ ಅವು ತಮ್ಮ ಮಲಗುವ ಅಥವಾ ವಿಶ್ರಾಂತಿ ಪಡೆಯುವ ಸಮಯವನ್ನು ನಿರ್ಧರಿಸುತ್ತವೆ.

ಮನುಷ್ಯರು ಸಮಯವನ್ನು ಅಂಕಿ-ಅಂಶಗಳಲ್ಲಿ ನೋಡಿದರೆ, ನಾಯಿಗಳು ಸಮಯವನ್ನು ಭಾವನೆಗಳು, ಶಬ್ದಗಳು ಮತ್ತು ಮುಖ್ಯವಾಗಿ ಬದಲಾಗುವ ವಾಸನೆಗಳ ಒಂದು ಪ್ರವಾಹವಾಗಿ ಅನುಭವಿಸುತ್ತವೆ. ಅವುಗಳ ಜಗತ್ತಿನಲ್ಲಿ ಗಡಿಯಾರದ ಮುಳ್ಳಿಗಿಂತ ಪ್ರಕೃತಿಯ ಮತ್ತು ಯಜಮಾನನ ಲಯವೇ ಮುಖ್ಯ.

**– ವಿಶ್ವೇಶ್ವರ** ಭಟ್

# ವಿಶ್ವಾಸವೇ ಜಗತ್ತಿನ ಅತಿದೊಡ್ಡ ಸಂಪತ್ತು: ಮೋದಿ

## ನಾವಿಕರ ಸುರಕ್ಷತೆ ನಮ್ಮೆಲ್ಲರ ಜವಾಬ್ದಾರಿ: 7 ಶೃಂಗಸಭೆಯಲ್ಲಿ ಟ್ರಂಪ್ ಎದುರೇ ಖಡಕ್ ಸಂದೇಶ..!

• ಪ್ರಜೋದಯ ವರದಿ

**ಫ್ರಾನ್ಸ್:** ವಿಶ್ವಾಸವೇ ಜಗತ್ತಿನ ಅತೀ ದೊಡ್ಡ ಸಂಪತ್ತಾಗಿದ್ದು, ನಾವಿಕರ ಸುರಕ್ಷತೆಯೇ ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಪ್ರತಿಪಾದಿಸಿದ್ದಾರೆ.

ಒಮಾನ್ ಕೊಲ್ಲಿಯಲ್ಲಿ ಅಮೆರಿಕ ಪಡೆಗಳು ನಡೆಸಿದ ವೈಮಾನಿಕ ದಾಳಿಯಲ್ಲಿ ಮೂವರು ಭಾರತೀಯ ನಾವಿಕರು ಮೃತಪಟ್ಟ ಬೆನ್ನಲ್ಲೇ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಜಿ 7 ಶೃಂಗಸಭೆಯಲ್ಲಿ ಜಾಗತಿಕ ನಾಯಕರ ಸಮ್ಮುಖದಲ್ಲೇ ಈ ವಿಷಯವನ್ನು ಪ್ರಸ್ತಾಪಿಸಿ, ಕಳವಳ ವ್ಯಕ್ತಪಡಿಸಿದ್ದಾರೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಉಪಸ್ಥಿತರಿದ್ದ ವೇದಿಕೆಯಲ್ಲೇ ಮೋದಿ ಅವರು ಕಡಲ ಮಾರ್ಗಗಳ ಸುರಕ್ಷತೆ ಮತ್ತು ನಾಗರಿಕ ನಾವಿಕರ ರಕ್ಷಣೆಯ ಕುರಿತು ಜಾಗತಿಕ ಸಮುದಾಯಕ್ಕೆ ಅವರ ಹೊಣೆಗಾರಿಕೆಯನ್ನು ನೆನಪಿಸಿದ್ದಾರೆ.

ಫ್ರಾನ್ಸ್‌ನಲ್ಲಿ ನಡೆದ ಜಿ 7 ಶೃಂಗಸಭೆಯ ಅಧಿವೇಶನದಲ್ಲಿ ಮಾತನಾಡಿದ ಮೋದಿ, ಇತ್ತೀಚಿನ ಮಧ್ಯ



ಪ್ರಾಚ್ಯ ಸಂಘರ್ಷಗಳು ಮಾನವ ಜೀವ, ಆರ್ಥಿಕತೆ ಹಾಗೂ ಅಂತರ ರಾಷ್ಟ್ರೀಯ ವ್ಯಾಪಾರದ ಮೇಲೆ ಗಂಭೀರ ಪರಿಣಾಮ ಬೀರಿವೆ. ಅನೇಕ ದೇಶಗಳಲ್ಲಿ ಜೀವಹಾನಿ ಮತ್ತು ಆಸ್ತಿಪಾಸ್ತಿ ನಷ್ಟ ಉಂಟಾಗಿದ್ದು, ಭಾರತ ಸೇರಿದಂತೆ ಹಲವು ರಾಷ್ಟ್ರಗಳ ನಾಗರಿಕರು ಇದರ ಪರಿಣಾಮ ಅನುಭವಿಸಿದ್ದಾರೆ. ಶೇಷವಾಗಿ, ಹಾರ್ಮುಜ್ ಜಲ ಸಂಧಿಯಲ್ಲಿನ ಅಶಾಂತಿಯಿಂದ ತೈಲ ಮತ್ತು ಸರಕು ಸಾಗಣೆ ವ್ಯವಹಾರಕ್ಕೆ ತೊಂದರೆಯಾಗಿದ್ದು, ಜಾಗತಿಕ ಆರ್ಥಿಕತೆಯ ಮೇಲೂ ಪರಿಣಾಮ ಬೀರಿದೆ.

ಜಾಗತಿಕ ಸಮುದ್ರ ವ್ಯಾಪಾರದ ಮೂಲಕ ರಾಷ್ಟ್ರಗಳನ್ನು ಸಂಪರ್ಕಿಸುವ ಸಮುದ್ರಯಾನಿಕರ ಸುರಕ್ಷತೆಯನ್ನು ಖಚಿತಪಡಿಸುವುದು ನಮ್ಮೆಲ್ಲರ ಕರ್ತವ್ಯ. ಸಮುದ್ರ ಮಾರ್ಗಗಳು ಸುರಕ್ಷಿತವಾಗಿರಬೇಕು. ನಾವಿಕರು ಯಾವುದೇ ಭಯವಿಲ್ಲದೆ ತಮ್ಮ ಕರ್ತವ್ಯ ನಿರ್ವಹಿಸುವ ವಾತಾವರಣ ನಿರ್ಮಾಣವಾಗಬೇಕು ಎಂದಿದ್ದಾರೆ.

ದೇಶಗಳ ನಡುವಿನ ಪರಸ್ಪರ ನಂಬಿಕೆಯೇ ಇಂದಿನ ಜಗತ್ತಿನ ಅತ್ಯಂತ ಮಹತ್ವದ ತಂತ್ರಜ್ಞಾನಿಕ ಮತ್ತು ಆರ್ಥಿಕ ಸಂಪತ್ತಾಗಿದೆ. ಖನಿಜ ಸಂಪತ್ತು, ತಂತ್ರಜ್ಞಾನ ಅಥವಾ ಮಾರುಕಟ್ಟೆಗಿಂತ ಇಂದು ವಿಶ್ವಕ್ಕೆ ಅಗತ್ಯವಿರುವುದು ಪರಸ್ಪರ ವಿಶ್ವಾಸ. ತಂತ್ರಜ್ಞಾನ ಮತ್ತು ಸರಬರಾಜು ಸರಪಳಿಗಳು ಜಾಗತಿಕ ಹಿತಕ್ಕಾಗಿ ಬಳಸಲ್ಪಡಬೇಕು, ಅವುಗಳನ್ನು ಆಯುಧಗಳಾಗಿ ಬಳಸಬಾರದು ಎಂದು ಮೋದಿ ಖಡಕ್ ಸಂದೇಶ ರವಾನಿಸಿದ್ದಾರೆ.

ಇದೇ ವೇಳೆ, ಗ್ಲೋಬಲ್ ಸೌತ್ ರಾಷ್ಟ್ರಗಳ ಆಶಯಗಳ ಕುರಿತು ಮಾತನಾಡಿದ ಅವರು, ಅಭಿವೃದ್ಧಿಶೀಲ ರಾಷ್ಟ್ರಗಳು ಕೇವಲ ನೆರವಿನ ಫಲಾನುಭವಿಗಳಾಗಲು ಬಯಸುವುದಿಲ್ಲ; ಜಾಗತಿಕ ಅಭಿವೃದ್ಧಿಯ ಸಮಾನ ಪಾಲುದಾರರಾಗಲು ಬಯಸುತ್ತಿವೆ ಎಂದು ತಿಳಿಸಿದರು.

ಬಳಿಕ ಭಾರತದ ಅಭಿವೃದ್ಧಿ ಮಾದರಿಯನ್ನು ವಿವರಿಸಿದ ಮೋದಿ ಅವರು, ''ಸರ್ವ ಜನ ಹಿತಾಯ, ಸರ್ವ ಜನ ಸುಖಾಯ'' ಎಂಬ ತತ್ವದಡಿ ಭಾರತ ದೇಶವು ಕಾರ್ಯ ನಿರ್ವಹಿಸುತ್ತಿದ್ದು, ಹಣಕಾಸು ಸೇರ್ಪಡೆ, ಆರೋಗ್ಯ ಭದ್ರತೆ, ಡಿಜಿಟಲ್ ಗುರುತು, ತಂತ್ರಜ್ಞಾನ ಆಧಾರಿತ ಸಬಲೀಕರಣ ಹಾಗೂ ಮಹಿಳಾ ನೇತೃತ್ವದ ಅಭಿವೃದ್ಧಿಯಲ್ಲಿ ಗಮನಾರ್ಹ ಸಾಧನೆ ಮಾಡಿದೆ ಎಂದು ಅವರು ಹೇಳಿದರು.

ಗಮನಾರ್ಹವಾಗಿ, ಅಮೆರಿಕದ ಸೆಂಟ್ರಲ್ ಕಮಾಂಡ್ ಜೂನ್ 8, 9 ಮತ್ತು 11ರಂದು ಇರಾನ್ ಬಂದರುಗಳ ಮೇಲಿನ ನಿರ್ಬಂಧ ಉಲ್ಲಂಘಿಸಲು ಯತ್ನಿಸುತ್ತಿದ್ದ ಹಡಗುಗಳ ವಿರುದ್ಧ ಕ್ರಮ ಕೈಗೊಂಡಿರುವುದಾಗಿ ಹೇಳಿದ್ದು, ಆ ದಾಳಿಗಳಲ್ಲೇ ಮೂವರು ಭಾರತೀಯ ನಾವಿಕರು ಮೃತಪಟ್ಟಿದ್ದರು. ಈ ಹಿನ್ನೆಲೆಯಲ್ಲಿ ಮೋದಿ ಅವರ ಈ ಹೇಳಿಕೆ ಭಾರೀ ಮಹತ್ವವನ್ನು ಪಡೆದುಕೊಂಡಿದೆ.

ಫ್ರಾನ್ಸ್‌ನ ಆಹ್ವಾನದ ಮೇರೆಗೆ ಜಿ7 ಶೃಂಗಸಭೆಯಲ್ಲಿ ಅತಿಥಿ ರಾಷ್ಟ್ರವಾಗಿ ಭಾಗವಹಿಸಿರುವ ಮೋದಿ, ಸ್ಲೋವಾಕಿಯಾ ಪ್ರವಾಸ ಮುಗಿಸಿ ಫ್ರಾನ್ಸ್‌ನ ಎವಿಯನ್-ಲೆ-ಬೇನ್ಸ್‌ಗೆ ಆಗಮಿಸಿದ್ದರು.

ಜಿ 7 ಒಕ್ಕೂಟದಲ್ಲಿ ಕೆನಡಾ, ಫ್ರಾನ್ಸ್, ಜರ್ಮನಿ, ಇಟಲಿ, ಜಪಾನ್, ಯುನೈಟೆಡ್ ಕಿಂಗ್‌ಡಮ್ ಮತ್ತು ಯುನೈಟೆಡ್ ಸ್ಟೇಟ್ಸ್ ಸದಸ್ಯ ರಾಷ್ಟ್ರ, ಜೊತೆಗೆ ಯುರೋಪಿಯನ್ ಯೂನಿಯನ್ ಕೂಡ ಇದರ ಭಾಗವಾಗಿದೆ.

# ಆಲೂರು ಮಾದರಿ ಪಟ್ಟಣವಾಗಬೇಕು

## ಸಂಸದ ಶ್ರೇಯಸ್ ಎಂ.ಪಟೇಲ್ ಮಹದಾಸೆ

• ಪ್ರಜೋದಯ ವರದಿ

**ಆಲೂರು:** ಪಟ್ಟಣವನ್ನು ಅಭಿವೃದ್ಧಿ ಮಾಡುವ ಮೂಲಕ ಸುಂದರ ಹಾಗೂ ಮಾದರಿ ಪಟ್ಟಣವನ್ನಾಗಿ ಮಾಡುವ ಮಹಾದಾಸೆ ಹೊಂದಿದ್ದೇನೆ ಎಂದು ಸಂಸದ ಶ್ರೇಯಸ್ ಎಂ. ಪಟೇಲ್ ಅವರು ತಿಳಿಸಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಪಕ್ಕದಲ್ಲಿ ಸುಮಾರು 64 ಲಕ್ಷ ರೂಪಾಯಿ ಅಂದಾಜು ವೆಚ್ಚದಲ್ಲಿ ನೂತನವಾಗಿ ನಿರ್ಮಿಸುತ್ತಿರುವ ಅಂಚೆ ಕಚೇರಿ ಕಟ್ಟಡ ಕಾಮಗಾರಿ ವೀಕ್ಷಿಸಿ ಮಾತನಾಡಿದ ಅವರು, ಸುಮಾರು ಏಳು ದಶಕಗಳ ಬೇಡಿಕೆಯಾಗಿದ್ದ ಅಂಚೆ ಕಚೇರಿ ಕಟ್ಟಡ ಕಾಮಗಾರಿ ಪ್ರಾರಂಭಗೊಂಡಿದೆ ಎಂದು ಮಾಹಿತಿ ನೀಡಿದರು.

ಗುಣಮಟ್ಟದಲ್ಲಿ ಉತ್ತಮ ಕಟ್ಟಡವನ್ನು ನಿರ್ಮಿಸಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಹಲವು ವರ್ಷಗಳಿಂದ ಕಟ್ಟಡ ನಿರ್ಮಾಣಕ್ಕೆ ಸ್ಥಳ ಇದ್ದರೂ ಕಟ್ಟಡ ನಿರ್ಮಿಸಲು ಸಾಧ್ಯವಾಗಿರಲಿಲ್ಲ. ಕೇಂದ್ರ ಸಚಿವರಿಗೆ ಮನವಿ ಮಾಡಿದ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರದ ನೆರವಿನಿಂದ ಸುಮಾರು 64 ಲಕ್ಷ ರೂಪಾಯಿ ಅನುದಾನದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದು ಅವರು ಹೇಳಿದರು.

ಕಾಂಗ್ರೆಸ್ ಸರ್ಕಾರ ಬಡವರ ಪರವಾದ ಪಕ್ಷವಾಗಿದೆ. ಜಿಲ್ಲೆಯ



ಎಲ್ಲಾ ತಾಲ್ಲೂಕುಗಳನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ದಿಟ್ಟ ಹೆಜ್ಜೆ ಇಟ್ಟಿದ್ದು, ತಾಲ್ಲೂಕುಗಳಿಗೆ ಆಗಬೇಕಾದ ಅಭಿವೃದ್ಧಿ ಕಾರ್ಯಗಳತ್ತ ಗಮನಹರಿಸಲಾಗುವುದು. ಜಿಲ್ಲೆಯಲ್ಲಿ ಆಲೂರು ಅತಿ ಚಿಕ್ಕ ತಾಲ್ಲೂಕಾಗಿದ್ದು, ಅಭಿವೃದ್ಧಿಯಲ್ಲಿ ಕುಂಠಿತವಾಗಿದೆ. ನನ್ನ ಅವಧಿಯಲ್ಲಿ ಸರ್ಕಾರದಿಂದ ಆಗಬೇಕಾದ ಅಭಿವೃದ್ಧಿ ಕೆಲಸಗಳನ್ನು ಮಾಡಿ ಮಾದರಿ ಪಟ್ಟಣವನ್ನಾಗಿ ಮಾಡಲು ಮುಂದಾಗಿದ್ದೇನೆ ಎಂದು ತಿಳಿಸಿದರು.

ಈಗಾಗಲೇ ಸಂಸದರ ಅನುದಾನದಲ್ಲಿ ತಾಲ್ಲೂಕಿನ ಕ್ರೀಡಾಂಗಣದಲ್ಲಿ ಶೌಚಾಲಯ ಹಾಗೂ ಹೈಮಾಸ್ಕ್ ದೀಪಗಳನ್ನು ಅಳವಡಿಸಲಾಗಿದೆ. ಪಟ್ಟಣದಲ್ಲಿ ಫುಡ್ ಕೋರ್ಟ್ ನಿರ್ಮಿಸಲು ಅನುದಾನವನ್ನು ತಂದಿದ್ದು, ಅತಿ ಶೀಘ್ರದಲ್ಲಿ ಚಾಲನೆ ನೀಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಅಂಚೆ ನಿರೀಕ್ಷಕ ಸಂತೋಷ್ ಮಲೋತ್, ಅಂಚೆ ಪಾಲಕರಾದ ನಂದಿನಿ, ಅಂಚೆ ಮೇಲ್ವಿಚಾರಕ ಮಧು ಹಾಗೂ ಸಿಬ್ಬಂದಿ ವರ್ಗ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷ ಪೃಥ್ವಿ ಜಯರಾಮ್, ಯೂತ್ ಕಾಂಗ್ರೆಸ್ ಚಂದ್ರಶೇಖರ್ ಅಧ್ಯಕ್ಷ ರಾಜಶೇಖರ್, ಮುಖಂಡರಾದ ಶಾಂತಕೃಷ್ಣ, ಶಿವಣ್ಣ, ಹರೀಶ್, ಸಂದೇಶ್, ನಾರಾಯಣ, ಯೋಗೀಶ್, ಪನೀಶ್, ರುದ್ರಕುಮಾರ್ ಇದ್ದರು.

# ಚಿರತೆ ದಾಳಿಗೆ 3 ಕರುಗಳು ಬಲಿ



• ಪ್ರಜೋದಯ ವರದಿ

**ಹೊಳೆನರಸೀಪುರ:** ತಾಲ್ಲೂಕಿನ ಟಿ. ಮಾಯಗೌಡನಹಳ್ಳಿ ಗ್ರಾಮದ ರೈತ ದಿಲೀಪ್ ಎಂಬುವರ ಮನೆ ಸಮೀಪದ ಕೊಟ್ಟಿಗೆಯಲ್ಲಿ ಕಟ್ಟಿದ್ದ 3 ಕರುಗಳನ್ನು ಚಿರತೆ ದಾಳಿ ಇಟ್ಟು ಅರೆಬರೆ ತಿಂದು ಹಾಕಿದೆ.

ಬುಧವಾರ ನಸುಕಿನ ವೇಳೆ ಕರುವಿನ ಚೀರಾಟ ಕೇಳುತ್ತಿತ್ತಾದರೂ, ದಿಲೀಪ್ ಮನೆಯಿಂದ ಹೊರಬರುವ ಸಾಹಸ ಮಾಡಿಲ್ಲ. ಸ್ವಲ್ಪ ಸಮಯದ ನಂತರ ಬಂದು ನೋಡುವಷ್ಟರಲ್ಲಿ ಶೆಡ್‌ನ ಹೊರಗೆ ಕರುಗಳ ಕಳೆಬರ ಪತ್ತೆಯಾಗಿದೆ. ಮಂಗಳವಾರ ಸಂಜೆ ಮೇವು ತಿಂದು ಕೊಟ್ಟಿಗೆಯಲ್ಲಿ ಬೆಚ್ಚಗೆ ನಿದ್ರಿಸಿದ್ದ ಕರುಗಳು ಬೆಳಗಾಗುವಷ್ಟರಲ್ಲಿ ಚಿರತೆಗೆ ಬಲಿಯಾಗಿದೆ.

ಮೊನ್ನೆಯಷ್ಟೆ ಅಂಕವಳ್ಳಿ, ಉದ್ದೂರು ಹೊಸಳ್ಳಿ, ಕಳ್ಳಿಕೊಪ್ಪಲು ಗ್ರಾಮದಲ್ಲಿ 5 ರ ಮೇಲೆ ದಾಳಿಇಟ್ಟು, ಅಟ್ಟಹಾಸ ಮೆರೆದಿದ್ದ ಚಿರತೆಯನ್ನು ಬೋನಿಗಟ್ಟಿದ್ದರು. ಈಗಾಗಲೇ ಹಳ್ಳಿಮೈಸೂರು ಹೋಬಳಿಯ ಟಿ.ಮಾಯಗೌಡನಹಳ್ಳಿಯಲ್ಲಿ ಮತ್ತೆ ಚಿರತೆ ಕರು ಬಲಿ ತೆಗೆದುಕೊಂಡು ಉಪಟಳ ನಡೆಸಿದೆ. ಅರಣ್ಯ ಇಲಾಖೆಗೆ ಮನವಿ ಮಾಡಿದ್ದೇವೆ. ಬೋನ್ ಇಡುವುದಾಗಿ ತಿಳಿಸಿದ್ದಾರೆ ಎಂದು ರೈತ ದಿಲೀಪ್ ತಿಳಿಸಿದ್ದಾರೆ.


# ಕ್ರಿಕೆಟ್: ಭಾರತ 8ನೇ ಬಾರಿ 400 ರನ್ ಸಾಧನೆ

• ಪ್ರಜೋದಯ ವರದಿ

**ಲಖನೌ:** ಅಫ್ಘಾನಿಸ್ತಾನ ವಿರುದ್ಧ ತವರಿನಲ್ಲಿ ನಡೆಯುತ್ತಿರುವ 2ನೇ ಏಕದಿನ ಪಂದ್ಯದಲ್ಲಿ ಭಾರತ ತಂಡವು 400 ರನ್‌ಗಳ ಸಾಧನೆ ಮಾಡಿದೆ. ಇದರೊಂದಿಗೆ ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ಸಲ 400ಕ್ಕೂ ಅಧಿಕ ರನ್ ಗಳಿಸಿದ ತಂಡಗಳ ಸಾಲಿನಲ್ಲಿ ದಕ್ಷಿಣ ಆಫ್ರಿಕಾ ಜೊತೆ ಜಂಟಿ ಅಗ್ರಸ್ಥಾನ ಹಂಚಿಕೊಂಡಿದೆ.

ಒಟ್ಟಾರೆಯಾಗಿ ಎಂಟನೇ ಸಲ ಭಾರತ ತಂಡವು ಏಕದಿನದಲ್ಲಿ 400ಕ್ಕೂ ಅಧಿಕ ರನ್‌ಗಳ ಸಾಧನೆ ಮಾಡಿದೆ. 2011ರಲ್ಲಿ ವೆಸ್ಟ್‌ಇಂಡೀಸ್ ವಿರುದ್ಧ ಐದು ವಿಕೆಟ್ ನಷ್ಟಕ್ಕೆ 418 ರನ್ ಗಳಿಸಿರುವುದು ಏಕದಿನದಲ್ಲಿ ಭಾರತದ ಗರಿಷ್ಠ ಸಾಧನೆಯಾಗಿದೆ.

ನಾಯಕ ಶುಭಮನ್ ಗಿಲ್ (154) ಹಾಗೂ ವಿಕೆಟ್ ಕೀಪರ್ ಎಡಗೈ ಬ್ಯಾಟರ್ ಇಶಾನ್ ಕಿಶನ್ (125) ಅಮೋಘ ಶತಕಗಳ ನೆರವಿನಿಂದ ಭಾರತ ತಂಡವು 49.5 ಓವರ್‌ಗಳಲ್ಲಿ 402 ರನ್‌ಗಳಿಗೆ ತನ್ನೆಲ್ಲ ವಿಕೆಟ್



ಗಳನ್ನು ಕಳೆದುಕೊಂಡಿತು.

**ರೋಹಿತ್ 14,000 ರನ್‌ಗಳ ಮೈಲಿಗಲ್ಲು**

ಹಿಟ್ ಮ್ಯಾನ್ ಖ್ಯಾತಿಯ ರೋಹಿತ್ ಶರ್ಮಾ ಲಿಸ್ಟ್ ಎ ಕ್ರಿಕೆಟ್‌ನಲ್ಲಿ 14,000 ರನ್‌ಗಳ ಮೈಲಿಗಲ್ಲು ತಲುಪಿದ್ದಾರೆ. ಈ ಸಾಧನೆ ಮಾಡಿದ ಭಾರತದ 5ನೇ ಬ್ಯಾಟರ್ ಎಂಬ ಹೆಗ್ಗಳಿಕೆಗೆ ಭಾಜನರಾಗಿದ್ದಾರೆ. ಅಫ್ಘನ್ ವಿರುದ್ಧದ ಪಂದ್ಯದಲ್ಲಿ ರೋಹಿತ್ 39 ಎಸೆತಗಳಲ್ಲಿ ಆರು ಬೌಂಡರಿ ಹಾಗೂ 2 ಸಿಕ್ಸರ್‌ಗಳಿಂದ 48 ರನ್ ಗಳಿಸಿದರು.

**ಭಾರತೀಯ ಬ್ಯಾಟರ್‌ಗಳ ಪಟ್ಟಿ**

ಸಚಿನ್ ತೆಂಡೂಲ್ಕರ್-21,999, ವಿರಾಟ್ ಕೊಹ್ಲಿ-16,447, ಸೌರವ್ ಗಂಗೂಲಿ- 15,622, ರಾಹುಲ್ ದ್ರಾವಿಡ್-15,271 ಹಾಗು ರೋಹಿತ್ ಶರ್ಮಾ-14,000.

**ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಗಿಲ್ 7,000 ರನ್ ಸಾಧನೆ**

110 ಎಸೆತಗಳಲ್ಲಿ 22 ಬೌಂಡರಿ ಹಾಗೂ 2 ಸಿಕ್ಸರ್‌ಗಳಿಂದ 154 ರನ್ ಗಳಿಸಿದ್ದಾರೆ. ಈ ಪೈಕಿ 77 ಎಸೆತಗಳಲ್ಲಿ ಶತಕ ಹಾಗೂ 108 ಎಸೆತಗಳಲ್ಲಿ 150 ರನ್‌ಗಳ ಸಾಧನೆ ಮಾಡಿದ್ದಾರೆ. ಒಟ್ಟಾರೆಯಾಗಿ 140 ಪಂದ್ಯಗಳಲ್ಲಿ (173 ಇನಿಂಗ್ಸ್) 46.24ರ ಸರಾಸರಿಯಲ್ಲಿ 7,029 ರನ್ ಗಳಿಸಿದ್ದಾರೆ. ಅದರಲ್ಲಿ 21 ಶತಕ ಹಾಗೂ 29 ಅರ್ಧಶತಕಗಳು ಸೇರಿವೆ.

**ಏಕದಿನದಲ್ಲಿ ಅಯ್ಯರ್ 3,000 ರನ್**

ಏಕದಿನ ಕ್ರಿಕೆಟ್‌ನಲ್ಲಿ ಶ್ರೇಯಸ್ ಅಯ್ಯರ್ 3,000 ರನ್‌ಗಳ ಗಡಿ ದಾಟಿದ್ದಾರೆ. ಏಕದಿನದಲ್ಲಿ ವೇಗವಾಗಿ 3,000 ರನ್ ಗಳಿಸಿದ ಭಾರತದ 2ನೇ ಬ್ಯಾಟರ್ ಎನಿಸಿದ್ದಾರೆ. ಅಫ್ಘನ್ ವಿರುದ್ಧದ ಪಂದ್ಯದಲ್ಲಿ ಅಯ್ಯರ್ 26 ರನ್ ಗಳಿಸಿದರು. ಆ ಮೂಲಕ 78 ಏಕದಿನಗಳಲ್ಲಿ (72 ಇನಿಂಗ್ಸ್) 45.68ರ ಸರಾಸರಿಯಲ್ಲಿ 3,015 ರನ್ ಗಳಿಸಿದ್ದಾರೆ. ಅದರಲ್ಲಿ ಐದು ಶತಕ ಹಾಗೂ 23 ಅರ್ಧಶತಕಗಳು ಸೇರಿವೆ. ಏಕದಿನದಲ್ಲಿ ವೇಗದಲ್ಲಿ 3,000 ರನ್ ಗಳಿಸಿದ ಭಾರತೀಯ ಬ್ಯಾಟರ್ ಎಂಬ ದಾಖಲೆ ಶುಭಮನ್ ಗಿಲ್ (62 ಇನಿಂಗ್ಸ್) ಅವರ ಹೆಸರಲ್ಲಿದೆ.

**ಇಶಾನ್ 71 ಎಸೆತಗಳಲ್ಲಿ ಶತಕ**

ಮತ್ತೊಂದೆಡೆ ಇಶಾನ್ ಕಿಶನ್ 71 ಎಸೆತಗಳಲ್ಲಿ ಶತಕದ ಸಾಧನೆ ಮಾಡಿದ್ದಾರೆ. ಇಶಾನ್ 79 ಎಸೆತಗಳಲ್ಲಿ 125 ರನ್ (14 ಬೌಂಡರಿ, 7 ಸಿಕ್ಸರ್) ಗಳಿಸಿ ಅಬ್ಬರಿಸಿದರು.

**ದ್ವಿಶತಕದ ಜೊತೆಯಾಟ**

ಶುಭಮನ್ ಗಿಲ್ ಹಾಗೂ ಇಶಾನ್ ಕಿಶನ್ ಮೂರನೇ ವಿಕೆಟ್‌ಗೆ 224 ರನ್‌ಗಳ ಅಮೂಲ್ಯ ಜೊತೆಯಾಟ ಕಟ್ಟುವ ಮೂಲಕ ಗಮನಸೆಳೆದರು.

# 98ರ ಹರೆಯದ ಮುದ್ದೇಗೌಡರಿಗೆ ಅಭಿನಂದನೆ



• ಪ್ರಜೋದಯ ವರದಿ

**ಹಾಸನ:** ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಉದ್ಯಮಿಗಳು, ಸಮಾಜ ಸೇವಕರು ಹಾಗೂ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ ಹಾಸನದ ಕಟ್ಟಡದ ಪ್ರಮುಖ ದಾನಿಗಳಾದ ಜಿ.ಎಲ್.ಮುದ್ದೇಗೌಡ ಅವರು 97 ವಸಂತಗಳನ್ನು ಯಶಸ್ವಿಯಾಗಿ ಪೂರೈಸಿ 98ನೇ ವಸಂತಕ್ಕೆ ಕಾಲಿಟ್ಟಿರುವ ಹಿನ್ನೆಲೆಯಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಕಾರ್ಯಕಾರಿ ಮಂಡಳಿಯ ಸದಸ್ಯರು ಅವರನ್ನು ಭೇಟಿ ಮಾಡಿ ಆತ್ಮೀಯವಾಗಿ ಅಭಿನಂದಿಸಿದರು.

ಈ ಸಂದರ್ಭದಲ್ಲಿ ರೆಡ್‌ಕ್ರಾಸ್ ಸಂಸ್ಥೆಯ ಸಭಾಪತಿ ಹೆಮ್ಮಿಗೆ ಮೋಹನ್, ಉಪಸಭಾಪತಿ ಡಾ.ವೈ. ಎಸ್.ವೀರಭದ್ರಪ್ಪ, ಶಬ್ಬೀರ್ ಅಹ್ಮದ್, ಜಯೇಂದ್ರಕುಮಾರ್, ಅಮ್ಜಾದ್ ಖಾನ್, ಎಚ್.ಡಿ.ಕುಮಾರ್, ಎಸ್. ಎಸ್. ಪಾಷಾ, ವೈ.ಎನ್.ಸುಬ್ಬಸ್ವಾಮಿ, ಬಿ.ಆರ್.ಉದಯ್‌ಕುಮಾರ್, ಕೆ.ಟಿ. ಜಯಶ್ರೀ, ಡಾ.ಹೇಮಲತ ಪಟ್ಟಾಭಿ, ಡಾ.ಭಾರತಿ ರಾಜಶೇಖರ್, ಡಾ.ವಿ.ಕೆ. ಅಬ್ದುಲ್ ಬಶೀರ್, ಗಿರೀಶ್, ಜಯಪ್ರಕಾಶ, ಗಿರಿಗೌಡ, ಭೀಮರಾಜ್, ಡಾ.ರಂಗಲಕ್ಷ್ಮಿ ಇನ್ನಿತರರು ಉಪಸ್ಥಿತರಿದ್ದರು.

# ಸಾರ್ವಜನಿಕ ಆಸ್ತಿ ರಕ್ಷಣೆಗೆ ಕಟ್ಟುನಿಟ್ಟಿನ ಕ್ರಮ

• ಪ್ರಜೋದಯ ವರದಿ

**ಬೇಲೂರು:** ಪಟ್ಟಣದ ಸಾರ್ವಜನಿಕ ಆಸ್ತಿಗಳ ರಕ್ಷಣೆಗೆ ಮುಂದಾಗಿರುವ ಪುರಸಭೆ ಅಧಿಕಾರಿಗಳು, ಅಕ್ರಮ ಒತ್ತುವರಿ ಹಾಗೂ ಅನುಮತಿ ಇಲ್ಲದ ನಿರ್ಮಾಣ ಕಾಮಗಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿದ್ದಾರೆ.

ಪಟ್ಟಣದ ಹೊಳೆಬೀದಿಯ ಭಸ್ಮೀಕರಣ ಕೇಂದ್ರದ ಪಕ್ಕದಲ್ಲಿರುವ ಖಾತೆ ಸಂಖ್ಯೆ 1028/946ರಲ್ಲಿ ಪುರಸಭೆಗೆ ಸೇರಿದ ಸುಮಾರು 180 ಅಡಿ ಜಾಗವನ್ನು ಖಾಸಗಿ ಶಾಲೆಯವರು ಒತ್ತುವರಿ ಮಾಡಿಕೊಂಡು ಕಾಂಪೌಂಡ್ ನಿರ್ಮಾಣ ಮಾಡುತ್ತಿದ್ದಾರೆ ಎಂಬ ಸಾರ್ವಜನಿಕ ದೂರಿನ ಹಿನ್ನೆಲೆಯಲ್ಲಿ ಪುರಸಭೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿಯನ್ನು ತಡೆಹಿಡಿದಿದ್ದಾರೆ.

ಪುರಸಭೆ ಆರೋಗ್ಯಾಧಿಕಾರಿ ಲೋಹಿತ್ ಅವರು ಸ್ಥಳ ಪರಿಶೀಲನೆ ನಡೆಸಿ, ದಾಖಲೆಗಳ ಪರಿಶೀಲನೆ ಹಾಗೂ ಪುರಸಭೆಯ ಅನುಮತಿ ಪಡೆಯುವವರೆಗೆ ಯಾವುದೇ ನಿರ್ಮಾಣ ಕಾರ್ಯ ಮುಂದುವರಿಸದಂತೆ ಸೂಚನೆ ನೀಡಿದ್ದಾರೆ. ಈ ವೇಳೆ ಶಾಲಾ ಸಿಬ್ಬಂದಿ ಹಾಗೂ ಅಧಿಕಾರಿಗಳ



ನಡುವೆ ಮಾತಿನ ಚಕಮಕಿ ನಡೆದಿದೆ.

ಈ ಕುರಿತು ಮಾತನಾಡಿದ ಪುರಸಭೆ ಮುಖ್ಯಾಧಿಕಾರಿ ಬಸವರಾಜು ಟಾಕಪ್ಪ ಶಿಗ್ಗಾವಿ, ಪುರಸಭೆಗೆ ಸೇರಿದ ಸಾರ್ವಜನಿಕ ಆಸ್ತಿಯನ್ನು ಯಾರೂ ಅಕ್ರಮವಾಗಿ ಬಳಸಿಕೊಳ್ಳಲು ಅವಕಾಶ ನೀಡುವುದಿಲ್ಲ. ಖಾಸಗಿ ಜಾಗದ ಮಾಲೀಕರು ತಮ್ಮ ಆಸ್ತಿಯನ್ನು ರಕ್ಷಿಸಿಕೊಳ್ಳಬಹುದು. ಆದರೆ ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿಟ್ಟಿರುವ ಜಾಗವನ್ನು ಒತ್ತು ವರಿ ಮಾಡಿಕೊಂಡಿದ್ದರೆ ಅದು ಎಷ್ಟೇ ಪ್ರಭಾವಿ ವ್ಯಕ್ತಿಯಾದರೂ ತೆರವು ಗೊಳಿಸಲಾಗುವುದು ಎಂದು ಅವರು ಎಚ್ಚರಿಕೆ ನೀಡಿದರು.

ಪಟ್ಟಣದಾದ್ಯಂತ ಪುರಸಭೆ ಆಸ್ತಿಗಳ ಸಮೀಕ್ಷೆ ನಡೆಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಸರ್ವೆಯಲ್ಲಿ ಪುರಸಭೆಯ ಜಾಗ ಒತ್ತುವರಿ ಆಗಿರುವುದು ದೃಢಪಟ್ಟಲ್ಲಿ ನಿಯಮಾನುಸಾರ ತೆರವು ಕಾರ್ಯಾಚರಣೆ ನಡೆಸಲಾಗುವುದು ಎಂದು ತಿಳಿಸಿದರು.

**ಸರ್ಕಾರಿ ಆಸ್ತಿಗೆ ಕೈ ಹಾಕಿದರೆ ಕ್ರಮ**

ಪುರಸಭೆಯ ಜಾಗಗಳು ಜನರ ಆಸ್ತಿಯಾಗಿದ್ದು, ಅವುಗಳ ರಕ್ಷಣೆಯ ಜವಾಬ್ದಾರಿ ಎಲ್ಲರ ಮೇಲಿದೆ. ಯಾವುದೇ ವ್ಯಕ್ತಿ ಅಥವಾ ಸಂಸ್ಥೆ ಅನುಮತಿ ಇಲ್ಲದೆ ಸರ್ಕಾರಿ ಅಥವಾ ಪುರಸಭೆ ಜಾಗದಲ್ಲಿ ನಿರ್ಮಾಣ ಕಾರ್ಯ ಕೈಗೊಂಡರೆ ಕಾನೂನು ಕ್ರಮ ಎದುರಿಸಬೇಕಾಗುತ್ತದೆ. ಸಾರ್ವಜನಿಕರು ಸಹ ಅಕ್ರಮ ಒತ್ತುವರಿ ಕಂಡುಬಂದಲ್ಲಿ ಪುರಸಭೆ ಗಮನಕ್ಕೆ ತರುವಂತೆ ಅಧಿಕಾರಿಗಳು ಮನವಿ ಮಾಡಿದ್ದಾರೆ.

# ವಿಶೇಷ ಮತದಾರರ ಪರಿಷ್ಕರಣೆಗೆ ಎಲ್ಲ ಪಕ್ಷಗಳ ಸಹಕಾರ ಅಗತ್ಯ

## ಬಿಎಲ್‌ಒ-2 ಏಜೆಂಟರ ತರಬೇತಿ ಕಾರ್ಯಕ್ರಮದಲ್ಲಿ ಇ.ಒ. ಹುಲೆಮನೆ ತಿಮ್ಮಣ್ಣ ಮನವಿ

• ಪ್ರಜೋದಯ ವರದಿ

**ಸಕಲೇಶಪುರ:** ಮತದಾರರ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯನ್ನು ಯಶಸ್ವಿಯಾಗಿ ಹಾಗೂ ಪಾರದರ್ಶಕವಾಗಿ ನಡೆಸಲು ರಾಜಕೀಯ ಪಕ್ಷಗಳ ಬೂತ್ ಲೆವೆಲ್ ಏಜೆಂಟರು (ಬಿಎಲ್‌ಒ-2) ಸಕ್ರಿಯವಾಗಿ ಸಹಕರಿಸಬೇಕು ಎಂದು ಉಪ ವಿಭಾಗಾಧಿಕಾರಿ ಹುಲೆಮನೆ ತಿಮ್ಮಣ್ಣ ಅವರು ಮನವಿ ಮಾಡಿದರು.

ಪಟ್ಟಣದ ಒಕ್ಕಲಿಗರ ಕಲ್ಯಾಣ ಮಂಟಪದಲ್ಲಿ ತಾಲ್ಲೂಕು ಆಡಳಿತದ ವತಿಯಿಂದ ಆಯೋಜಿಸಿದ್ದ ಬಿಎಲ್‌ಒ-2 ಏಜೆಂಟರ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಚುನಾವಣಾ ಆಯೋಗದ ನಿರ್ದೇಶನದಂತೆ ಜೂ.30 ರಿಂದ ಜುಲೈ 29 ರವರೆಗೆ ಬಿಎಲ್‌ಒಗಳು ಮನೆ-ಮನೆಗೆ ಭೇಟಿ ನೀಡಿ ಮತದಾರರಿಗೆ ಎನ್ಯುಮರೇಷನ್ ಫಾರಂ ವಿತರಿಸಿ, ಭರ್ತಿ ಮಾಡಿದ ನಮೂನೆಗಳನ್ನು ಸಂಗ್ರಹಿಸಲಿದ್ದಾರೆ ಎಂದು ತಿಳಿಸಿದರಲ್ಲದೆ, ಮತದಾರರ ಪಟ್ಟಿಯ ಪರಿಷ್ಕರಣೆ ಪ್ರಕ್ರಿಯೆ ಪಾರದರ್ಶಕವಾಗಿ ನಡೆಯುವಂತೆ ನೋಡಿಕೊಳ್ಳುವುದು ಬಿಎಲ್‌ಎಗಳ ಜವಾಬ್ದಾರಿಯಾಗಿದ್ದು,



ಯಾವುದೇ ಗೊಂದಲಗಳಿಗೆ ಅವಕಾಶ ನೀಡದಂತೆ ಕಾರ್ಯ ನಿರ್ವಹಿಸಬೇಕು ಎಂದು ತಿಳಿಸಿದರು.

ಸಕಲೇಶಪುರ ಹಾಗೂ ಕಟ್ಟಾಯ ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾರರ ಮ್ಯಾಪಿಂಗ್ ಕಾರ್ಯ ಶೇ.96.50 ರಷ್ಟು ಪೂರ್ಣಗೊಂಡಿದ್ದು, ಉಳಿದ ಪ್ರಕರಣಗಳ ಪರಿಶೀಲನೆ ನಡೆಸಲಾಗುವುದು ಎಂದು ಹೇಳಿದರು.

ಬಿಜೆಪಿ ಮಂಡಲ ಅಧ್ಯಕ್ಷ ವಳಲಹಳ್ಳಿ ಅಶ್ವತ್ ಮಾತನಾಡಿ, ಪಕ್ಷದ 144 ಬೂತ್‌ಗಳ ಬಿಎಲ್‌ಎ-2 ಏಜೆಂಟರು ತರಬೇತಿಯಲ್ಲಿ ಭಾಗವಹಿಸಿದ್ದು, ವಿಶೇಷ ಮತದಾರರ ಪರಿಷ್ಕರಣೆ ಪ್ರಕ್ರಿಯೆಗೆ ಬಿಜೆಪಿ ಸಂಪೂರ್ಣ ಸಹಕಾರ ನೀಡಲಿದೆ. ಅರ್ಹ ಮತದಾರರ ಹೆಸರು ಮತದಾರರ ಪಟ್ಟಿಯಲ್ಲಿ ಉಳಿಯುವಂತೆ ಹಾಗೂ ಅನರ್ಹ ಹೆಸರುಗಳನ್ನು ನಿಯಮಾನುಸಾರ ಕೈಬಿಡುವಂತೆ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಜೆಡಿಎಸ್ ಮುಖಂಡ ಹಾಗೂ ಮಾಜಿ ಪುರಸಭೆ ಅಧ್ಯಕ್ಷ ಕಾಡಪ್ಪ ಮಾತನಾಡಿ, ಯಾವುದೇ ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯದಂತೆ ಬೂತ್ ಮಟ್ಟದ ಏಜೆಂಟರು ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಬೇಕು. ಮನೆ-ಮನೆ ಸಮೀಕ್ಷೆ ನಡೆಸುವ ಬಿಎಲ್‌ಒಗಳಿಗೆ ಎಲ್ಲರೂ ಸಹಕಾರ ನೀಡಬೇಕು ಎಂದು ಕರೆ ನೀಡಿದರು.

ಕಾಂಗ್ರೆಸ್ ಮುಖಂಡ ವಳಲಹಳ್ಳಿ ರುದ್ರೇಶ್ ಮಾತನಾಡಿ, ಮತದಾರರ ಪರಿಷ್ಕರಣೆ ಕಾರ್ಯದಲ್ಲಿ ಕಾಂಗ್ರೆಸ್ ಪಕ್ಷದ ಬಿಎಲ್‌ಒಗಳು ಪ್ರಾಮಾಣಿಕವಾಗಿ ಭಾಗವಹಿಸಲಿದ್ದು, ಯಾವುದೇ ಅರ್ಹ ಮತದಾರರಿಗೆ ಅನ್ಯಾಯವಾಗದಂತೆ ಕಾರ್ಯ ನಿರ್ವಹಿಸಲಾಗುವುದು. ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸುವ ಬಿಎಲ್‌ಒಗಳಿಗೆ ಅಗತ್ಯ ಸಹಕಾರ ನೀಡಲಾಗುವುದು ಎಂದರು.

ಬಹುಜನ ಸಮಾಜ ಪಕ್ಷದ ಜಿಲ್ಲಾ ಅಧ್ಯಕ್ಷ ಲಕ್ಷ್ಮಣ ಕೀರ್ತಿ ಅವರು ಮಾತನಾಡಿ, ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯದಲ್ಲಿ ರಾಜಕೀಯ ಪಕ್ಷಗಳ ಕಾರ್ಯಕರ್ತರು ಹಾಗೂ ಬಿಎಲ್‌ಒಗಳ ನಡುವಿನ ಸಮನ್ವಯ ಅತ್ಯಂತ ಅತ್ಯಗತ್ಯವಾಗಿದೆ. ಮನೆ-ಮನೆಗಳಿಗೆ ಭೇಟಿ ನೀಡುವ ಅಧಿಕಾರಿಗಳಿಗೆ ಸ್ಥಳೀಯ ಮಾಹಿತಿ ನೀಡಿ ಸಹಕಾರ ನೀಡುವಂತೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಗಂಗಾಧರಪ್ಪ, ಚುನಾವಣಾ ಶಿರಸ್ತೇದಾರ್ ಜನಾರ್ಧನ್, ಶಿರಸ್ತೇದಾರ್ ರವಿ, ಕಾಂಗ್ರೆಸ್ ಮುಖಂಡ ಉದಯ್, ಬಿಜೆಪಿ ಮುಖಂಡ ರಾಜಕುಮಾರ್, ಎಸ್‌ಡಿಪಿಐ ಮುಖಂಡ ಸಿದ್ದಿಕ್ ಆನೆಮಹಲ್ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಬಿಎಲ್‌ಒ-2 ಏಜೆಂಟರು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

## 1700 ಕೋಟಿ ವಿಶೇಷ ಪ್ಯಾಕೇಜ್‌ಗೆ ಕಾಫಿ ಮಂಡಳಿ ಅಧ್ಯಕ್ಷ ಎಂ.ಜೆ.ದಿನೇಶ್ ಒತ್ತಾಯ

# ಕಾಫಿ ಬೆಳೆಗಾರರ ಬದುಕಿಗೆ ಶಾಶ್ವತ ಭದ್ರತೆ ನೀಡಿ

• ಪ್ರಜೋದಯ ವರದಿ

**ಬೇಲೂರು:** ಕಾಫಿ ಬೆಳೆಗಾರರು ಎದುರಿಸುತ್ತಿರುವ ಹಲವು ವರ್ಷಗಳ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿಶೇಷ ಗಮನ ಹರಿಸಬೇಕು ಎಂದು ಕಾಫಿ ಮಂಡಳಿ ಅಧ್ಯಕ್ಷ ಎಂ.ಜೆ. ದಿನೇಶ್ ಒತ್ತಾಯಿಸಿದರು.

ಪಟ್ಟಣದ ತಾಲ್ಲೂಕು ಕಾಫಿ ಬೆಳೆಗಾರರ ಸಂಘದ ಸಭಾಂಗಣದಲ್ಲಿ ನಡೆದ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಕಾಫಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ 2026-31ರ ಪಂಚವಾರ್ಷಿಕ ಯೋಜನೆಗೆ ₹1700 ಕೋಟಿ ಅನುದಾನ ನೀಡುವಂತೆ ಕಾಫಿ ಮಂಡಳಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಈ ಅನುದಾನ ದೊರೆತರೆ ಕಾಫಿ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ನೆರವಾಗಲಿದೆ ಎಂದು ಹೇಳಿದರು.

ಬೆಳೆಗಾರರ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದ್ದು, ಸಹಾಯಧನವನ್ನು 42 ಕೋಟಿ ರೂ.ನಿಂದ 95 ಕೋಟಿ ರೂ.ಗೆ ಹೆಚ್ಚಿಸಲಾಗಿದೆ. ಕಾಫಿ ಕ್ಷೇತ್ರದಲ್ಲಿ ಯಾಂತ್ರೀಕರಣ, ತಂತ್ರಜ್ಞಾನ ಬಳಕೆ, ಗುಣಮಟ್ಟ ಹೆಚ್ಚಳ ಹಾಗೂ ಮಾರುಕಟ್ಟೆ ವಿಸ್ತರಣೆಗೆ ಹೊಸ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಆದರೆ ಕಾಫಿ ಬೆಳೆಗಾರರು ಕಾಡಾನೆಗಳ ಹಾವಳಿ, ಕಾರ್ಮಿಕರ ಕೊರತೆ, ಉತ್ಪಾದನಾ ವೆಚ್ಚದ ಏರಿಕೆ ಹಾಗೂ ಕಾಫಿ ಬೆಲೆಗಳ ಏರಿಳಿತದಂತಹ ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇವುಗಳಿಗೆ ಶಾಶ್ವತ




ಆನೆಗಳ ಹಾವಳಿಯಿಂದ ರೈತರು ಹಾಗೂ ಗ್ರಾಮೀಣ ಜನರು ನಿರಂತರ ತೊಂದರೆ ಅನುಭವಿಸುತ್ತಿದ್ದಾರೆ. ಸರ್ಕಾರ ಕೇವಲ ಭರವಸೆಗಳಿಗೆ ಸೀಮಿತವಾಗದೆ, ಆನೆಗಳ ಸಂಚಾರ ನಿಯಂತ್ರಣ, ಮಾನವ-ಆನೆ ಸಂಘರ್ಷ ತಡೆ ಹಾಗೂ ರೈತರ ಜೀವ-ಬೆಳೆ ರಕ್ಷಣೆಗೆ ಶಾಶ್ವತ ಕ್ರಮಗಳನ್ನು ಕೈಗೊಳ್ಳಬೇಕು.
– ಶಾಸಕ ಎಚ್.ಕೆ.ಸುರೇಶ್

ಪರಿಹಾರ ಕಲ್ಪಿಸುವ ಅಗತ್ಯವಿದೆ ಎಂದರು.

ಕಾಫಿ ತೋಟ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ಆನೆ-ಮಾನವ ಸಂಘರ್ಷಕ್ಕೆ ವೈಜ್ಞಾನಿಕ ಪರಿಹಾರ ರೂಪಿಸಬೇಕು. ಆನೆಗಳ ಸಂಚಾರ ಮಾರ್ಗ ಗುರುತಿಸಿ ವೈಜ್ಞಾನಿಕ ಕಾರಿಡಾರ್ ನಿರ್ಮಾಣಕ್ಕೆ ಸರ್ಕಾರ ತ್ವರಿತ ಕ್ರಮ ಕೈಗೊಳ್ಳಬೇಕು ಎಂಬ ಬೇಡಿಕೆ ಬೆಳೆಗಾರರಿಂದ ಕೇಳಿಬಂದಿದೆ ಎಂದರು.

ಬೆಳೆಗಾರರ ಸಂಘದ ಅಧ್ಯಕ್ಷ ವೈ.ಎಸ್. ಸಿದ್ದೇಗೌಡ ಮಾತನಾಡಿ, ಕಾಫಿ, ಅಡಿಕೆ ಹಾಗೂ ಮೆಣಸು ಬೆಳೆಗಾರರ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವ ಉದ್ದೇಶದಿಂದ ಗ್ರಾಮ ಪಂಚಾಯಿತಿ ಮಟ್ಟದಿಂದ ಸಂಘಟನೆಯನ್ನು ಬಲಪಡಿಸಲಾಗುತ್ತಿದೆ. ಬೆಳೆಗಾರರಿಗೆ ಮಾಹಿತಿ ಹಾಗೂ ಮಾರ್ಗದರ್ಶನ ನೀಡಲು ಪ್ರತಿ ಪಂಚಾಯಿತಿಯಲ್ಲೂ ಮಾಹಿತಿ ಕೇಂದ್ರಗಳ ಅಗತ್ಯವಿದೆ ಎಂದರು.

ಕಾಫಿ ತೋಟಗಳಲ್ಲಿ ತೀವ್ರವಾಗಿರುವ ಕಾರ್ಮಿಕರ ಕೊರತೆ ನಿವಾರಣೆಗೆ ಹೊರ ರಾಜ್ಯಗಳಿಂದ ಕಾನೂನುಬದ್ಧವಾಗಿ ಕಾರ್ಮಿಕರನ್ನು ಕರೆತರುವ ವ್ಯವಸ್ಥೆಯನ್ನು ಸರಳಗೊಳಿಸಬೇಕು. ಸಣ್ಣ ಹಾಗೂ ಮಧ್ಯಮ ಬೆಳೆಗಾರರಿಗೆ ಕಡಿಮೆ ಬಡ್ಡಿದರದ ಸಾಲ, ಬೆಳೆ ವಿಮೆ ಹಾಗೂ ಆಧುನಿಕ ಯಂತ್ರೋಪಕರಣಗಳಿಗೆ ಹೆಚ್ಚಿನ ಸಹಾಯಧನ ನೀಡಬೇಕು ಎಂದು ಒತ್ತಾಯಿಸಿದರು.

ಕಾಫಿಯ ಗುಣಮಟ್ಟ ಪರೀಕ್ಷೆಗೆ ಹೊಸ ತಂತ್ರಜ್ಞಾನ ಬಳಕೆ, ದೇಶೀಯ ಕಾಫಿ ಬಳಕೆ ಹೆಚ್ಚಿಸುವ ಪ್ರಚಾರ ಕಾರ್ಯಗಳು ಹಾಗೂ ಬೆಳೆಗಾರರ ಸಹಭಾಗಿತ್ವದಲ್ಲಿ ಪ್ರತ್ಯೇಕ ನಿಧಿ ರಚಿಸುವ ಚಿಂತನೆ ಸ್ವಾಗತಾರ್ಹವಾಗಿದೆ. ಆದರೆ ಯೋಜನೆಗಳ ಲಾಭ ನೇರವಾಗಿ ಅರ್ಹ ಬೆಳೆಗಾರರಿಗೆ ತಲುಪುವಂತೆ ಪಾರದರ್ಶಕ ವ್ಯವಸ್ಥೆ ರೂಪಿಸಬೇಕು ಎಂದು ಹೇಳಿದರು.

ಪ್ರಭಾವಿಗಳ ಒತ್ತಡಕ್ಕೆ ಮಣಿದು ಬೇರೆ ಪ್ರದೇಶಗಳಿಂದ ಆನೆಗಳನ್ನು ತಂದು ಬೇಲೂರು ಹಾಗೂ ಸಕಲೇಶಪುರ ತಾಲ್ಲೂಕುಗಳಲ್ಲಿ ಬಿಡಲಾಗುತ್ತಿದೆ ಎಂಬ ಆರೋಪಗಳು ಕೇಳಿ ಬರುತ್ತಿದ್ದು, ಇದಕ್ಕೆ ಕಡಿವಾಣ ಹಾಕಬೇಕು. ಕಾಡಾನೆ ಹಾವಳಿ ಕುರಿತು ಮಾತನಾಡಿದ ಅವರು, ಸ್ಥಳೀಯ ಜನರು ಇಷ್ಟು ದಿನ ಮೌನವಾಗಿರುವುದನ್ನು ಕೆಲವರು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಇದೇ ಪರಿಸ್ಥಿತಿ ಮುಂದುವರಿದರೆ ಮುಂದಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯ ಆನೆಗಳನ್ನು ನಮ್ಮ ತಾಲ್ಲೂಕುಗಳಲ್ಲೇ ಸ್ಥಳಾಂತರಿಸುವ ಆತಂಕವಿದೆ. ಜನರ ಸಮಸ್ಯೆ ಸರ್ಕಾರದ ಗಮನಕ್ಕೆ ತಲುಪಬೇಕು. ದೊಡ್ಡ ದೊಡ್ಡ ಕಾಫಿ ಬೆಳೆಗಾರರ ಅಲ್ಲಿನ ಪ್ರದೇಶಗಳ ಪ್ರಭಾವದಿಂದ ಅಧಿಕಾರಿಗಳು ಮುಕ್ತವಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಬಾರದು. ಬೇಲೂರು ಹಾಗೂ ಸಕಲೇಶಪುರ ಭಾಗದ ರೈತರ ಸಂಕಷ್ಟವನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಅವರು ಹೇಳಿದರು.

ಸಭೆಯಲ್ಲಿ ಕಾಫಿ ಬೆಳೆಗಾರರ ಸಂಘದ ಪ್ರಧಾನ ಕಾರ್ಯದರ್ಶಿ ವೈ.ಡಿ. ಲೋಕೇಶ್ ಸೇರಿದಂತೆ ನೂರಾರು ಕಾಫಿ ಬೆಳೆಗಾರರು ಭಾಗವಹಿಸಿದ್ದರು.

**ಬೆಳೆಗಾರರ ಪ್ರಮುಖ ಬೇಡಿಕೆಗಳು**

- ಕಾಫಿ ಕ್ಷೇತ್ರಕ್ಕೆ 1700 ಕೋಟಿ ರೂ. ವಿಶೇಷ ಅನುದಾನ ಮಂಜೂರು ಮಾಡಬೇಕು.
- ಆನೆ- ಮಾನವ ಸಂಘರ್ಷಕ್ಕೆ ವೈಜ್ಞಾನಿಕ ಹಾಗೂ ಶಾಶ್ವತ ಪರಿಹಾರ ರೂಪಿಸಬೇಕು.
- ಕಾರ್ಮಿಕರ ಕೊರತೆ ನಿವಾರಣೆಗೆ ವಿಶೇಷ ನೀತಿ ಜಾರಿಗೆ ತರಬೇಕು.
- ಸಣ್ಣ ಬೆಳೆಗಾರರಿಗೆ ಹೆಚ್ಚಿನ ಸಹಾಯಧನ ಹಾಗೂ ಸಾಲ ಸೌಲಭ್ಯ ನೀಡಬೇಕು.
- ಕಾಫಿ ಮಂಡಳಿ ಯೋಜನೆಗಳ ಲಾಭ ಎಲ್ಲ ಅರ್ಹ ಬೆಳೆಗಾರರಿಗೆ ತಲುಪುವಂತೆ ಕ್ರಮ ಕೈಗೊಳ್ಳಬೇಕು.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್ ಕಾರ್ಯಾಲಯ, ಹಾಸನ
ಜಿಲ್ಲಾ ಪಂಚಾಯತ್, ಬಿ.ಎಂ.ರಸ್ತೆ, ಹಾಸನ-573201
ದೂರವಾಣಿ ಸಂಖ್ಯೆ: 08172-268794 ಜಾಲ ತಾಣ: https://zphassan.karnataka.gov.in Mail ID: admsection95@gmail.com
ಸಂ:ಜಿಪಂಹಾ/ಅಸಿ(14)ಜಿ.ಪಂ.ಕ.ಸ್ವಲೇ.ಸಾ.ಖ.ಟೆಂ/2026-27
ದಿನಾಂಕ:10.06.2026

ಇ-ಟೆಂಡರ್ ಅಧಿಸೂಚನೆ

ಹಾಸನ ಜಿಲ್ಲಾ ಪಂಚಾಯತ ಕಛೇರಿಯಲ್ಲಿ ವಿವಿಧ ಶಾಖೆಗಳ ದೈನಂದಿನ ಕೆಲಸಗಳಿಗೆ ಅಗತ್ಯವಿರುವ ಲೇಖನ ಮತ್ತು ಸ್ವಚ್ಛತಾ ಸಾಮಗ್ರಿಗಳ ಸರಬರಾಜಿಗಾಗಿ Fಇ-ಟೆಂಡರ್ ಪ್ರಕಟಣೆ. **ಇ-ಟೆಂಡರ್ ಪ್ರಕಟಣೆ** ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ ಜಿಪಂಹಾ/ಆಸಿ(14)ಜಿ.ಪಂ.ಕ.ಸ್ವಲೇ.ಸಾ.ಖ.ಟೆಂ/2026-27 ದಿನಾಂಕ: 10/06/2026 ಟೆಂಡರ್ ಸಲ್ಲಿಸಲು ಪ್ರಾರಂಭದ ದಿನಾಂಕ 15/06/2026 ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ 15.00.000/- ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 30/06/2026 KPPP ಪೋರ್ಟಲ್ ನಲ್ಲಿ ಸಂಜೆ 5.00 ರವರೆಗೆ ತಾಂತ್ರಿಕ ಬಿಡ್ ತೆರೆಯುವ ವೇಳೆ ದಿನಾಂಕ ಮತ್ತು ಸ್ಥಳ, ದಿನಾಂಕ: 02/07/2026 ಬೆಳಗ್ಗೆ 11.00 ಗಂಟೆಗೆ, ಜಿಲ್ಲಾ ಪಂಚಾಯತ್ ಕಚೇರಿ, ಹಾಸನ (ಸ್ಥಳ & ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ) ಆರ್ಥಿಕ ಬಿಡ್ ತೆರೆಯುವ ವೇಳೆ ದಿನಾಂಕ ಮತ್ತು ಸ್ಥಳ: ದಿನಾಂಕ: 10/07/2026 ಮದ್ಯಾಹ್ನ 11.00 ಗಂಟೆಗೆ, ಜಿಲ್ಲಾ ಪಂಚಾಯತ್ ಕಚೇರಿ, ಹಾಸನ. (ಸ್ಥಳ & ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ) ಟೆಂಡರ್ ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ 37,500/- ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ: ಉಪ ಕಾರ್ಯದರ್ಶಿ (ಆಡಳಿತ) ಜಿಲ್ಲಾ ಪಂಚಾಯತ್, ಹಾಸನ ದೂರವಾಣಿ ಸಂಖ್ಯೆ: 08172-268824 ಟೆಂಡರಿನಲ್ಲಿ ಸಲ್ಲಿಸಬೇಕಾದ ದಾಖಲಾತಿಗಳ ಹಾಗೂ ಇನ್ನಿತರ ನಿಬಂಧನೆಗಳ ವಿವರಗಳನ್ನು KPPP ಪೋರ್ಟಲ್‌ನಲ್ಲಿ ಪಡೆಯಬಹುದು.

ಸಹಿ/-ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್, ಹಾಸನ.

ವಾಸಾಸಂಇ/ಹಿಸನಿ/ಹಾಸನ/242/ಕೆಎಸ್‌ಎಂಸಿಎ/2026-27

# ಗಿಲ್, ಇಶಾನ್ ಶತಕದ ಅಬ್ಬರ: ಭಾರತಕ್ಕೆ ಭರ್ಜರಿ ಜಯ

## ಭಾರತಕ್ಕೆ 2-0 ಅಂತರದಿಂದ ಸರಣಿ ಜಯ

• ಪ್ರಜೋದಯ ವರದಿ

**ಲಖನೌ:** ಭಾರತ ತಂಡದ ಬ್ಯಾಟಿಂಗ್ ಹಾಗು ಬೌಲಿಂಗ್ ನೆರವಿನಿಂದ ಭಾರತ ಅಫ್ಘಾನಿಸ್ತಾನ ವಿರುದ್ಧ 170 ರನ್‌ಗಳ ಅಮೋಘ ಜಯ ಗಳಿಸಿತು.

ಭಾರತ ನೀಡಿದ 403 ರನ್ ಗುರಿಗೆ ಉತ್ತರವಾಗಿ ಅಫ್ಘಾನಿಸ್ತಾನ ತಂಡದ ಬ್ಯಾಟರ್ ರಹಮತ್ ಶಾ ಅವರ 79 ರನ್‌ಗಳ ನೆರವಿನಿಂದ 44.3 ಓವರ್‌ಗಳಲ್ಲಿ 232 ರನ್‌ಗಳಿಸಿತು.

ನಾಯಕ ಶುಭಮನ್‌ಗಿಲ್ (154) ಹಾಗೂ ವಿಕೆಟ್ ಕೀಪರ್ ಎಡಗೈ ಬ್ಯಾಟರ್ ಇಶಾನ್ ಕಿಶನ್(125) ಅಮೋಘ ಶತಕಗಳ ನೆರವಿನಿಂದ ಭಾರತ ತಂಡವು ಅಫ್ಘಾನಿಸ್ತಾನದ ವಿರುದ್ಧ ನಡೆದ 2ನೇ ಏಕದಿನ ಪಂದ್ಯದಲ್ಲಿ 49.5 ಓವರ್‌ಗಳಲ್ಲಿ 402 ರನ್‌ಗಳಿಗೆ ತನ್ನೆಲ್ಲ ವಿಕೆಟ್‌ಗಳನ್ನು ಕಳೆದುಕೊಂಡಿತು.

ಆರಂಭಿಕ ಬ್ಯಾಟರ್ ರೋಹಿತ್ ಶರ್ಮಾ ಸಹ 48 ರನ್‌ಗಳ ಅಮೂಲ್ಯ ಕಾಣಿಕೆ ನೀಡಿದರು. ಮೊದಲು ಬ್ಯಾಟಿಂಗ್ ನಡೆಸಿದ ಭಾರತದ ಆರಂಭ ಉತ್ತಮವಾಗಿರಲಿಲ್ಲ, ಯಶಸ್ವಿ ಜೈಸ್ವಾಲ್ (4) ವಿಕೆಟ್ ಬೇಗನೇ ಪತನವಾಯಿತು. ಆದರೆ ಬಿರುಸಿನ ಬ್ಯಾಟಿಂಗ್ ಪ್ರದರ್ಶಿಸಿದ ರೋಹಿತ್ 39 ಎಸೆತಗಳಲ್ಲಿ ಆರು ಬೌಂಡರಿ ಹಾಗೂ ಎರಡು ಸಿಕ್ಸರ್‌ಗಳಿಂದ 48 ರನ್ ಗಳಿಸಿದರು.

ಬಳಿಕ ಇಶಾನ್ ಕಿಶನ್ ಅವರೊಂದಿಗೆ ಜೊತೆಗೂಡಿದ ನಾಯಕ ಗಿಲ್ ತಂಡವನ್ನು ಮುನ್ನಡೆಸಿ ದರು. ಅವರಿಬ್ಬರು ಮೂರನೇ ವಿಕೆಟ್‌ಗೆ 224 ರನ್‌ಗಳ ಅಮೂಲ್ಯ ಜೊತೆಯಾಟ ಕಟ್ಟಿದರು. ಅಫ್ಗನ್ ಬೌಲರ್‌ಗಳನ್ನು ದಂಡಿಸಿದ ಗಿಲ್ ಹಾಗೂ ಕಿಶನ್ ಶತಕಗಳ ಸಾಧನೆ ಮಾಡಿದರು. ಗಿಲ್ 110 ಎಸೆತಗಳಲ್ಲಿ 154 (22 ಬೌಂಡರಿ, 2ಸಿಕ್ಸರ್) ಹಾಗೂ ಇಶಾನ್ 79 ಎಸೆತಗಳಲ್ಲಿ 125 ರನ್ (14 ಬೌಂಡರಿ, 7ಸಿಕ್ಸರ್) ಗಳಿಸಿ ಅಬ್ಬರಿಸಿದರು.




ಇನ್ನುಳಿದಂತೆ ಶ್ರೇಯಸ್ ಅಯ್ಯರ್ 26, ವಾಷಿಂಗ್ಟನ್ ಸುಂದರ್ 19 ರನ್ ಗಳಿಸಿದರು. ಕೆ.ಎಲ್.ರಾಹುಲ್ ಶೂನ್ಯಕ್ಕೆ ಔಟ್ ಆದರು. ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ ಭಾರತ 1-0 ಅಂತರದ ಮುನ್ನಡೆಯಲ್ಲಿದೆ. ಈ ಪಂದ್ಯವನ್ನು ಗೆದ್ದು ಸರಣಿ ವಶಪಡಿಸಿಕೊಳ್ಳುವ ಇರಾದೆಯಲ್ಲಿದೆ. ಇದಕ್ಕೂ ಮೊದಲು ನಡೆದ ಏಕೈಕ ಟೆಸ್ಟ್ ಪಂದ್ಯದಲ್ಲೂ ಇನಿಂಗ್ಸ್ ಹಾಗೂ 300ರನ್ ಅಂತರದ ಗೆಲುವು ದಾಖಲಿಸಿತ್ತು.

ಅಫ್ಘಾನಿಸ್ತಾನ ಪರ ರಹಮತ್ ಶಾ 79, ರಹಮಾನುಲ್ಲಾ ಗುರ್ಬಾಜ್ 41, ಇಬ್ರಾಹಿಂ ಜದ್ರಾನ್ 21, ಸೇದಿಕುಲ್ಲಾ ಅಟಲ್ 42, ದರ್ವಿಶ್ ರಸೂಲಿ 6, ನಾಯಕ ಹಶ್ಮತುಲ್ಲಾ ಶಾಹಿದಿ 4, ರಶೀದ್ ಖಾನ್ 12, ನಂಗೆಯಾಲಿಯಾ ಖರೋಟಿ 6, ಎಎಂ ಗಜನ್ಫರ್ 1, ಮೊಹಮ್ಮದ್ ಸಲೀಮ್ ಸಫಿ 9 ಹಾಗು ಬಿಲಾಲ್ ಸಮಿ ಅಜೇಯ 2 ರನ್ ಗಳಿಸಿದರು.



# ಮಲೆನಾಡಿನ ಮೂರ್ಕಣ್ಣು ಗುಡ್ಡದಲ್ಲಿ ಹುಲಿ ದರ್ಶನ

» ಮೊದಲನೇ ಪುಟದಿಂದ

ಮಾರ್ಗಗಳನ್ನು ಅನುಸರಿಸಿ ಹಾಸನ ಜಿಲ್ಲೆಯ ಮಲೆನಾಡು ಭಾಗಕ್ಕೆ ಪ್ರವೇಶಿಸಿರಬಹುದು. ಹುಲಿ ತನ್ನದೇಯಾದ ಪ್ರಭುತ್ವದ ವ್ಯಾಪ್ತಿಯನ್ನು (ಟೆರಿಟರಿ) ಹೊಂದಿರುವ ಪ್ರಾಣಿ. ಆಹಾರ ಹಾಗು ಸಂಗಾತಿಗಾಗಿ ಹುಲಿಗಳು ಹೊಸ ಪ್ರದೇಶಗಳತ್ತ ವಲಸೆ ಹೋಗುವುದು ಸಾಮಾನ್ಯ.

ಒಂದು ಗಂಡು ಹುಲಿಯ ಟೆರಿಟರಿ 60 ರಿಂದ 150 ಚದರ ಕಿಲೋ ಮೀಟರ್‌ವರೆಗೆ ವ್ಯಾಪಿಸಬಹುದು. ಹೆಣ್ಣು ಹುಲಿಗಳು ತುಸು ಕಡಿಮೆ ವ್ಯಾಪ್ತಿಯನ್ನು ಹೊಂದಿರುತ್ತವೆ. ಹೀಗಾಗಿ ಪಶ್ಚಿಮ ಘಟ್ಟ ವ್ಯಾಪ್ತಿಯ ಮಲೆನಾಡು ಅರಣ್ಯಕ್ಕೆ ಹುಲಿಗಳು ಬಂದಿವೆ ಎಂದು ಹೇಳಲಾಗುತ್ತಿದೆ.

**ಆಹಾರ ಸರಪಳಿಯ ಸಮೃದ್ಧಿ**

ಹುಲಿಗಳ ಆಗಮನಕ್ಕೆ ಪ್ರಮುಖ ಕಾರಣವಾಗಿ ಈ ಭಾಗದಲ್ಲಿರುವ ಸಮೃದ್ಧ ಆಹಾರ ಸಂಪನ್ಮೂಲಗಳನ್ನು ಗುರುತಿಸಲಾಗಿದೆ. ಜಿಂಕೆ, ಕಾಡೆಮ್ಮೆ, ಕಾಡುಹಂದಿ, ಕಾಡುಕುರಿ ಸೇರಿ ಹಲವು ಸಸ್ಯಾಹಾರಿ ಪ್ರಾಣಿಗಳ ಸಂಖ್ಯೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಏರಿಕೆ ಕಂಡು ಬಂದಿದೆ. ಯಾವುದೇ ಪ್ರದೇಶದಲ್ಲಿ ಹುಲಿ ನೆಲೆ ಸಲು ಅಲ್ಲಿ ಸಾಕಷ್ಟು ಪ್ರಮಾಣದ ಬೇಟೆ ಪ್ರಾಣಿಗಳು ಇರಬೇಕು. ಆಹಾರ ಲಭ್ಯತೆ ಇಲ್ಲದ ಪ್ರದೇಶದಲ್ಲಿ ಹುಲಿಗಳು ದೀರ್ಘಕಾಲ ಉಳಿಯುವುದಿಲ್ಲ. ಮೂರ್ಕಣ್ಣು ಗುಡ್ಡ ಮತ್ತು ಸುತ್ತಮುತ್ತಲಿನ ಅರಣ್ಯ ಪ್ರದೇಶಗಳಲ್ಲಿ ಜಿಂಕೆಯ ಸಂತತಿ ಹೆಚ್ಚುತ್ತಿರುವುದರಿಂದ ಹುಲಿಗಳ ಆಗಮನವಾಗಿದೆ.

**ಅರಣ್ಯ ವರ್ಗೀಕರಣ**

ಜಿಲ್ಲೆಯಲ್ಲಿ ಪ್ರಸ್ತುತ ಸಾಮಾಜಿಕ ಅರಣ್ಯ, ಸೆಕ್ಷನ್-4 ಅರಣ್ಯ, ಮೀಸಲು ಅರಣ್ಯ ಹಾಗು ರಕ್ಷಿತ ಅರಣ್ಯ ಎಂಬ ವರ್ಗೀಕರಣ ಹೊಂದಿದೆ. ಇನ್ಮುಂದೆ ಹುಲಿಗಳ ಸಂತತಿ ವೃದ್ಧಿಯಾದರೆ ಮುಂ ದಿನ ದಿನಗಳಲ್ಲಿ ಹುಲಿ ಸಂರಕ್ಷಿತ ಪ್ರದೇಶವಾಗಿ ಘೋಷಣೆ ಯಾಗಲಿದೆ.

ಹುಲಿಗಳ ಸ್ಥಿರ ನೆಲೆ ಹಾಗು ಸಂತತತಿ ವೃದ್ಧಿಯಾದರೆ ಮಲೆನಾಡು ರಕ್ಷಿತಾರಣ್ಯ ಪ್ರದೇಶಕ್ಕೆ ವಿಶೇಷ ಸಂರಕ್ಷಣಾ ಮಾನ್ಯತೆ ದೊರೆಯುವ ಸಾಧ್ಯತೆಗಳಿವೆ. ಇದರಿಂದ ಕೇಂದ್ರ ಹಾಗು ರಾಜ್ಯ ಸರ್ಕಾರಗಳ ವಿಶೇಷ ಅನುದಾನ, ಹೆಚ್ಚುವರಿ ಸಿಬ್ಬಂದಿ, ಆಧುನಿಕ ನಿಗಾ ವ್ಯವಸ್ಥೆ ಹಾಗು ವನ್ಯಜೀವಿ ಸಂರಕ್ಷಣಾ ಕಾರ್ಯಕ್ರಮಗಳು ಜಾರಿಯಾಗಲಿವೆ.

# ಮೇಲ್ಸೇತುವೆ ಕಾಮಗಾರಿಗೆ ಕೇಂದ್ರ-ರಾಜ್ಯದಿಂದ ಅನುದಾನ

» ಮೊದಲನೇ ಪುಟದಿಂದ

ಕೈಗೊಂಡು ಅವುಗಳ ಕಾಮಗಾರಿಯನ್ನೂ ಆರಂಭಿಸಲಿದೆ.

**ಹಂಗರಹಳ್ಳಿ ಮೇಲ್ಸೇತುವೆ ಪರಿಶೀಲನೆ**

ನಗರದ ಪರಿಶೀಲನೆ ಬಳಿಕ ಹೊಳೆನರಸೀಪುರ ರಸ್ತೆಯ ಹಂಗರಹಳ್ಳಿಯಲ್ಲಿ ನಿರ್ಮಾಣವಾಗುತ್ತಿರುವ ರೈಲ್ವೆ ಮೇಲ್ಸೇತುವೆ ಕಾಮಗಾರಿಯನ್ನೂ ಸಂಸದರು ಪರಿಶೀಲಿಸಿದರು. ಯಾವುದೇ ಕಾರಣಕ್ಕೂ ಕಳಪೆ ಕಾಮಗಾರಿ ನಡೆಯಬಾರದು. ಒಮ್ಮೆ ನಿರ್ಮಿಸಿದ ಕಾಮಗಾರಿಯನ್ನು ಮತ್ತೆ ಮರು ನಿರ್ಮಾಣ ಮಾಡುವ ಪರಿಸ್ಥಿತಿ ಬರದಂತೆ ಗುಣ ಮಟ್ಟ ಕಾಪಾಡಿಕೊಂಡು ಕೆಲಸ ನಿರ್ವಹಿಸಬೇಕೆಂದು ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

**ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಅಂತಿಮ ಹಂತ**

ರಾಷ್ಟ್ರೀಯ ಹೆದ್ದಾರಿ-75ರ ಶಿರಾಡಿಘಾಟ್ ಕಾಮಗಾರಿ ಅಂತಿಮ ಹಂತದಲ್ಲಿದೆ. ಸಣ್ಣಪುಟ್ಟ ಕಾಮಗಾರಿಗಳು ಮಾತ್ರ ಬಾಕಿ ಇವೆ. ಜಿಲ್ಲಾಧಿಕಾರಿ ಈಗಾಗಲೇ ಸ್ಥಳ ಪರಿಶೀಲನೆ ನಡೆಸಿದ್ದು, ತಾವೂ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದೇನೆ. ದೋಣಿಗಲ್ ಹಾಗು ಹಾಸನ ಬೈಪಾಸ್ ಸೇರಿ ಎಲ್ಲಾ ಕಾಮಗಾರಿಗಳನ್ನು ಆದಷ್ಟು ಬೇಗ ಪೂರ್ಣಗೊಳಿಸುವಂತೆ ಸೂಚನೆ ನೀಡಲಾಗಿದೆ. ಕಳೆದ ವರ್ಷದ ಮಳೆಯಿಂದ ತಡೆಗೋಡೆ ಕುಸಿತ ಸೇರಿ ಹಲವು ಸಮಸ್ಯೆಗಳು ಎದುರಾಗಿದ್ದವು. ಈ ಬಾರಿ ಅಂತಹ ಘಟನೆಗಳು ಮರುಕಳಿಸದಂತೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆಂದು ಹೇಳಿದರು.

# ಶಿವಲಿಂಗೇಗೌಡ ಸಚಿವರಾಗುವುದು ಖಚಿತ

» ಮೊದಲನೇ ಪುಟದಿಂದ

ಹರಡುತ್ತಿದ್ದಾರೆಂದು ಆರೋಪಿಸಿದರು.

ಗೃಹಲಕ್ಷ್ಮಿ ಯೋಜನೆಗೆ ಸಂಬಂಧಿಸಿದಂತೆ ನಡೆಯುತ್ತಿರುವುದು ಕೇವಲ ಪರಿಷ್ಕರಣೆ ಪ್ರಕ್ರಿಯೆಯಾಗಿದ್ದು, ದಾಖಲೆಗಳನ್ನು ಸರಿಯಾಗಿ ಸಲ್ಲಿಸಿದ ಎಲ್ಲಾ ಅರ್ಹ ಫಲಾನುಭವಿಗಳಿಗೆ ಯೋಜನೆಯ ಹಣ ನಿರಂತರವಾಗಿ ಜಮೆಯಾಗಲಿದೆ. ಪಿಂಚಣಿ ಯೋಜನೆಯ ಕುರಿತು ಪ್ರತಿಕ್ರಿಯಿಸಿದ ಅವರು, ಕೆಲ ಫಲಾನುಭವಿಗಳ ದಾಖಲೆಗಳಲ್ಲಿ ವ್ಯತ್ಯಾಸ ಕಂಡು ಬಂದಿರುವ ಕಾರಣ ಪಾವತಿ ತಾತ್ಕಾಲಿಕವಾಗಿ ವಿಳಂಬವಾಗಿದೆ. ದಾಖಲೆಗಳ ಪರಿಶೀಲನೆ ನಡೆಯುತ್ತಿದ್ದು, ಅಗತ್ಯ ದಾಖಲಾತಿಗಳನ್ನು ಸಲ್ಲಿಸಿದ ಬಳಿಕ ಅರ್ಹರಿಗೆ ಪಿಂಚಣಿ ಹಣ ಬಿಡುಗಡೆ ಮಾಡಲಾಗುವುದು. ಕೇಂದ್ರ ಸರ್ಕಾರ ಮತದಾರರ ಪಟ್ಟಿಯ ಪರಿಷ್ಕರಣೆ ನಡೆಸುವ ರೀತಿಯಲ್ಲಿಯೇ ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳ ಮಾಹಿತಿಯನ್ನೂ ಪರಿಷ್ಕರಿಸಲಾಗುತ್ತಿದೆ ಎಂದು ತಿಳಿಸಿದರು.

ಕಾಂಗ್ರೆಸ್ ಸರ್ಕಾರ ಬಡವರು, ಸಾಮಾನ್ಯ ವರ್ಗದ ಜನರ ಪರವಾಗಿ ಕಾರ್ಯನಿರ್ವಹಿಸುತ್ತಿದೆ. ಐದು ಗ್ಯಾರಂಟಿ ಯೋಜನೆಗಳ ಮೂಲಕ ಈಗಾಗಲೇ 57 ಸಾವಿರ ಕೋಟಿಗೂ ಅಧಿಕ ಮೊತ್ತವನ್ನು ನೇರವಾಗಿ ಜನರ ಖಾತೆಗಳಿಗೆ ಜಮೆ ಮಾಡಲಾಗಿದೆ. 2028ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತೊಮ್ಮೆ ಅಧಿಕಾರಕ್ಕೆ ಬಂದು ಇನ್ನಷ್ಟು ಜನಪರ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

# ವೃದ್ಧ ದಂಪತಿ ನೋಡಿಕೊಳ್ಳದೆ ಮಕ್ಕಳ ನಿರ್ಲಕ್ಷ್ಯ

## ಕಾನೂನುಬದ್ಧ ನೆರವು ಕೊಡಿಸಲು ದೂರು: ಡಾ||ಜಿ.ಎನ್.ಬಸವರಾಜು

• ಪ್ರಜೋದಯ ವರದಿ

**ಹಾಸನ:** ವೃದ್ಧ ದಂಪತಿಯನ್ನು ನೋಡಿಕೊಳ್ಳದ ಮಕ್ಕಳ ವಿರುದ್ಧ ಕಾನೂನುಬದ್ಧ ದೊರಕುವ ನೆರವಿನ ನಿಟ್ಟಿನಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಆಶ್ರಯ ವಿಭಾಗದ ಅಧಿಕಾರಿ ಗಳ ಗಮನಕ್ಕೆ ತರುವ ಜೊತೆಗೆ ಪೊಲೀಸ್ ಠಾಣೆಗೂ ದೂರು ನೀಡಲಾಗುವುದೆಂದು ಹಾಸನಾಂಬ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಡಾ.ಜಿ.ಎನ್. ಬಸವರಾಜು ಅವರು ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೀವನವಿಡೀ ಮಕ್ಕಳಿಗಾಗಿ ಶ್ರಮಿಸಿದ ವೃದ್ಧ ದಂಪತಿಯನ್ನು ಮಕ್ಕಳು ಅನಾರೋಗ್ಯದ ಸಮಯದಲ್ಲೂ ನೋಡಿಕೊಳ್ಳದೆ ನಿರ್ಲಕ್ಷ್ಯ ತೋರಿರುವ ಅಮಾನವೀಯ ಘಟನೆ ಅರಸೀಕೆರೆ ತಾಲ್ಲೂಕಿನ ಗಂಡಸಿ ಹೋಬಳಿಯ ನೀರಗುಂದ ಗ್ರಾಮದಲ್ಲಿ ಬೆಳಕಿಗೆ ಬಂದಿದೆ. ವೃದ್ಧ ದಂಪತಿಗೆ ಕಾನೂನುಬದ್ಧ ನೆರವು ಕೊಡಿಸಲು ಶ್ರಮಿಸುವುದಾಗಿ ಹೇಳಿದರು.




ಮೂರ್ಛೆರೋಗದಿಂದ ಬಳಲುತ್ತಿದ್ದ ರಮೇಶ್ (55) ಅವರು ಜೂ.2 ರಂದು ಪ್ರಜ್ಞೆ ತಪ್ಪಿ ನಾಲಿಗೆ ಕಚ್ಚಿಕೊಂಡ ಪರಿಣಾಮ ಉಸಿರಾಟದ ತೊಂದರೆಯಿಂದ ಗಂಭೀರ ಸ್ಥಿತಿಗೆ ತಲುಪಿದ್ದರು. ಅವರನ್ನು ನಗರದ ಹಾಸನಾಂಬ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ತೀವ್ರ ನಿಗಾ ಘಟಕದ ತಜ್ಞ ವೈದ್ಯೆ ಡಾ||ಪ್ರೇಮಾ ನೇತೃತ್ವದಲ್ಲಿ ನಾಲ್ಕು ದಿನ ವೆಂಟಿಲೇಟರ್‌ನಲ್ಲಿ ಚಿಕಿತ್ಸೆ ನೀಡಲಾಯಿತು. ವೈದ್ಯರು ಹಾಗು ಸಿಬ್ಬಂದಿ ಶ್ರಮದಿಂದ ಅವರು ಇದೀಗ ಗುಣಮುಖರಾ ಗಿದ್ದಾರೆ. ಚಿಕಿತ್ಸೆಗೆ 2.5 ಲಕ್ಷ ರೂ. ವೆಚ್ಚವಾಗಿದ್ದರೂ, ರೋಗಿಯ ಬಡತನವನ್ನು ಮನಗಂಡ ಆಸ್ಪತ್ರೆ ಯಾವುದೇ ಶುಲ್ಕ ಪಡೆಯದೆ ಉಚಿತ ಚಿಕಿತ್ಸೆ ನೀಡಿದೆ.

ಗುಣಮುಖರಾದ ಬಳಿಕ ಅವರನ್ನು ಮನೆಗೆ ಕರೆದುಕೊಂಡು ಹೋಗುವಂತೆ ಮಕ್ಕಳಿಗೆ ಹಲವು ಬಾರಿ ಕರೆ ಮಾಡಿದರೂ ಸ್ಪಂದನೆ ದೊರೆಯಲಿಲ್ಲವೆಂದು ಬೇಸರ ವ್ಯಕ್ತಪಡಿಸಿದರು.

ರಮೇಶ್ ಅವರನ್ನು ಆಸ್ಪತ್ರೆಗೆ ದಾಖಲಿಸಿದ ಬಳಿಕ ಅವರ ಮನೆಗೆ ಸಿಬ್ಬಂದಿಯನ್ನು ಕಳುಹಿಸಿ ಪರಿಶೀಲಿಸಿದಾಗ, ಪತ್ನಿಯೂ ಎರಡೂ ಕಾಲುಗಳಿಗೆ ಗಾಯವಾಗಿ ಹಾಸಿಗೆ ಹಿಡಿದಿರುವುದು ಗೊತ್ತಾಯಿತು. ವೃದ್ಧ ದಂಪತಿಯನ್ನು ನೋಡಿಕೊಳ್ಳಲು ಯಾರೂ ಇಲ್ಲದಿರುವುದು ಅತ್ಯಂತ ನೋವಿನ ಸಂಗತಿ ಎಂದು ತಿಳಿಸಿದರು.

# ಬದುಕಿನಲ್ಲಿ ಸಮಾಜ ಸೇವೆಯೇ ಶಾಶ್ವತ

• ಪ್ರಜೋದಯ ವರದಿ

**ಹಳೇಬೀಡು:** ಮನುಷ್ಯನ ಜನನ ಆಕಸ್ಮಿಕವಾದರೂ ಸಾವು ಖಚಿತ. ಈ ಎರಡರ ನಡುವಿನ ಬದುಕಿನಲ್ಲಿ ಸಮಾಜಕ್ಕೆ ಸಲ್ಲಿಸುವ ಸೇವೆಯೇ ಶಾಶ್ವತ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಹೆಚ್.ಎಂ.ಮಂಜಪ್ಪ ಅವರು ಹೇಳಿದರು.



ಪಟ್ಟಣದ ಎಸ್‌ಜಿಆರ್ ಆವರಣದಲ್ಲಿ ಹಳೇಬೀಡಿನ ಹಿರಿಯ ನಾಗರಿಕರು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗು ಎಸ್‌ಜಿಆರ್ ಪದವಿ ಪೂರ್ವ ಕಾಲೇಜಿನ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ದ್ಯಾವಪ್ಪನಹಳ್ಳಿ ಸೋಮಶೇಖರ್ ನುಡಿನಮನ ಕಾರ್ಯಕ್ರಮ ದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿ, ಸೋಮಶೇಖರ್ ಅವರು ನೇರ ನುಡಿಯ, ಎಲ್ಲಾ ಜಾತಿ-ಧರ್ಮದವರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದು, ಹಲವಾರು ಸಂಘ-ಸಂಸ್ಥೆಗಳಲ್ಲಿ ವಿವಿಧ ಹುದ್ದೆಗಳನ್ನು ನಿರ್ವಹಿಸಿ, ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ ಹಾಗೂ ಉದ್ಯೋಗಾವಕಾಶ ಕಲ್ಪಿಸಲು ಶ್ರಮಿಸಿದ್ದರು ಎಂದು ಸ್ಮರಿಸಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಅಧಿಕಾರಿ ಮಂಜುಳಾ ಮಾತನಾಡಿ, ಯೋಜನೆಯ ವಿವಿಧ ಕಾರ್ಯಕ್ರಮಗಳ ಯಶಸ್ಸಿಗೆ ಸೋಮಶೇಖರ್ ಅವರ ಕೊಡುಗೆ ಅಪಾರ. ಜನಜಾಗೃತಿ ವೇದಿಕೆ ಉಪಾಧ್ಯಕ್ಷರಾಗಿ ಸಲ್ಲಿಸಿದ ಸೇವೆ ಸದಾ ಸ್ಮರಣೀಯ ಎಂದರು.

ಸೊಪ್ಪನಹಳ್ಳಿ ಶಿವಣ್ಣ, ಗಂಗೂರು ಶಿವಕುಮಾರ್ ಮಾತನಾಡಿ, ಸೋಮಶೇಖರ್ ಅವರು ಜಾತಿ-ಧರ್ಮ ಮೀರಿ ಎಲ್ಲರನ್ನೂ ಸಮಾನವಾಗಿ ಕಾಣುತ್ತಿದ್ದ ಅಪರೂಪದ ವ್ಯಕ್ತಿತ್ವ ಹೊಂದಿ ದ್ದರು. ಸಮಾಜಸೇವೆಗೆ ತಮ್ಮದೇ ಆದ ಕೊಡುಗೆ ನೀಡಿದ ಅವರು ಸಾಮೂಹಿಕ ಸತ್ಯನಾರಾಯಣ ಪೂಜಾ ಮಹೋತ್ಸವ ನಡೆಸುವ ಕನಸು ಕಂಡಿದ್ದರು ಎಂದು ನೆನಪಿಸಿದರು.

ಎಸ್‌ಜಿಆರ್ ಪದವಿ ಪೂರ್ವ ಕಾಲೇಜು ಕಾರ್ಯದರ್ಶಿ ಹೆಚ್.ಆರ್.ಸುರೇಶ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಸೋಮಶೇಖರ್ ಅವರ ಸಮಾಜಮುಖಿ ಚಿಂತನೆ ವಿದ್ಯಾರ್ಥಿಗಳಿಗೆ ಮಾದರಿಯಾಗಿದ್ದು, ಅವರ ಆದರ್ಶಗಳುಸದಾಪ್ರೇರಣೆಯಾಗಲಿವೆ ಎಂದರು.

ಜನಜಾಗೃತಿ ನಿರ್ದೇಶಕ ಎಲ್‌ಐಸಿ ಚಂದ್ರಶೇಖರ್, ಕರಿಯಮ್ಮ ದೇವಸ್ಥಾನದ ಕಾರ್ಯದರ್ಶಿ ಹಾಗೂ ಅಧ್ಯಕ್ಷ ಕುಮಾರ್, ಯಶೋಧರ್, ನಂದನ್ ಕುಟುಂಬ, ರಂಜಿತ ಇತರರು ಇದ್ದರು.

# ಗಾಂಜಾ ಸೇವನೆ: ಬಂಧನ

• ಪ್ರಜೋದಯ ವರದಿ

**ಹಾಸನ:** ಶ್ರವಣಬೆಳಗೊಳ ಹಾಗು ಆಲೂರು ಪೊಲೀಸ್ ಠಾಣಾ ವ್ಯಾಪ್ತಿಯ 2 ಪ್ರತ್ಯೇಕ ಪ್ರಕರಣಗಳಲ್ಲಿ ಗಾಂಜಾ ಸೇವನೆ ಮಾಡಿದ್ದ ಆರೋಪದಡಿ 8 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಶ್ರವಣಬೆಳಗೊಳ ದೇವೇಗೌಡ ವೃತ್ತದ ಸಮೀಪ ಪಿಎಸ್‌ಐ ನವೀನ್ ಕುಮಾರ್ ಗಸ್ತಿನಲ್ಲಿದ್ದ ವೇಳೆ ಮೂವರು ಅನುಮಾನಾಸ್ಪದವಾಗಿ ಕಂಡುಬಂದಿದ್ದರು. ಅವರನ್ನು ವಶಕ್ಕೆ ಪಡೆದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಗಾಂಜಾ ಸೇವನೆ ಮಾಡಿರುವುದು ದೃಢಪಟ್ಟಿದೆ. ಈ ಸಂಬಂಧ ಸುಂಡಹಳ್ಳಿ ಗ್ರಾಮದ ಸಂದೀಪ್(38), ಶ್ರೀಕಂಠನಗರದ ಮೋಹನ್ (35) ಹಾಗು ಶಿವಮೊಗ್ಗಾ ಜಿಲ್ಲೆಯ ಭದ್ರಾವತಿ ತಾಲ್ಲೂಕಿನ ಬಾರಂದೂರು ಗ್ರಾಮದ ಸುದೀಪ್ (19) ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಇನ್ನೊಂದು ಪ್ರಕರಣದಲ್ಲಿ ಆಲೂರು ತಾಲ್ಲೂಕಿನ ಕೊಡಗಿಹಳ್ಳಿ ಗ್ರಾಮದ ಆಂಜನೇಯಸ್ವಾಮಿ ದೇವಾಲಯದ ಬಳಿ ಐವರು ಅನುಮಾನಾಸ್ಪದವಾಗಿ ಕುಳಿತಿದ್ದ ಮಾಹಿತಿ ಮೇರೆಗೆ ಪಿಎಸ್‌ಐ ಪ್ರವೀಣ್ ಕುಮಾರ್ ಹಾಗು ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು. ವಶಕ್ಕೆ ಪಡೆದವರ ವೈದ್ಯಕೀಯ ಪರೀಕ್ಷೆಯಲ್ಲಿ ಗಾಂಜಾ ಸೇವನೆ ಮಾಡಿರುವುದು ದೃಢಪಟ್ಟಿದೆ.

ಈ ಸಂಬಂಧ ಕೊಡಗಿಹಳ್ಳಿ ಗ್ರಾಮದ ಕೀರ್ತಿ (20), ಗೇಕರವಳ್ಳಿ ಗ್ರಾಮದ ಕಿರಣ್ (29), ಆಲೂರು ಪಟ್ಟಣದ ಆಶಾ ಬಡಾವಣೆಯ ಶಮಂತ್ (29), ಕಣತೂರು ಗ್ರಾಮದ ಸಚ್ಚಿನ್ ಗೌಡ (21) ಹಾಗೂ ಆಲೂರು ಪಟ್ಟಣದ ಅಫ್ರಿದ್ (20) ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

# ಇಂದು ಮೂಲಸೌಕರ್ಯ ಲೋಕಾರ್ಪಣೆ




• ಪ್ರಜೋದಯ ವರದಿ

**ಹಾಸನ:** ಕುವೆಂಪು ನಗರದಲ್ಲಿರುವ ಎಂ.ಕೃಷ್ಣ ಸರ್ಕಾರಿ ಶಾಲೆಯನ್ನು ವಿಶ್ವಂ ಫೌಂಡೇಶನ್ 10 ಲಕ್ಷ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಿದೆ. ಈ ಮೂಲ ಸೌಕರ್ಯಗಳ ಲೋಕಾರ್ಪಣೆ ಕಾರ್ಯಕ್ರಮ ಜೂ.18 ರಂದು ನಡೆಯಲಿದೆ ಎಂದು ಫೌಂಡೇಶನ್‌ನ ಟ್ರಸ್ಟಿ ಕೌಶಿಕ್‌ಗೌಡ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದಾಕ್ಷಾಯಿಣಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶುಭಂಶುಕ್ಲಾ, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಬಲರಾಂ ಮೊದಲಾದವರು ಉದ್ಘಾಟನೆ ನೆರವೇರಿಸಲಿದ್ದಾರೆಂದು ತಿಳಿಸಿದರು.

ನಮ್ಮ ಈ ಕಾರ್ಯಕ್ಕೆ ವೈದ್ಯರು, ಶಿಕ್ಷಕರು, ಉದ್ಯಮಿಗಳು, ಸರ್ಕಾರಿ ನೌಕರರು ಕೈಜೋಡಿಸಿ ದ್ದಾರೆ. ಈ ಮೂಲಕ ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ, ಅಗತ್ಯವಿರುವ ಮಕ್ಕಳ ಮತ್ತು ಕುಟುಂಬಗಳ ಸುರಕ್ಷತೆ, ರಕ್ಷಣೆ, ಯುವ ಜನರ ಜೀವನೋಪಾಯಕ್ಕಾಗಿ ಅಗತ್ಯ ವಾದಿ ಕೌಶಲ್ಯ ನೀಡಲು ತರಬೇತಿ, ಆರೋಗ್ಯ ಸೇವೆ ಮಾಡಲಾಗುತ್ತಿದೆ. 2022ರಲ್ಲಿ ಆರಂಭ ವಾದ ಫೌಂಡೇಶನ್ ಸ್ವಯಂ ಸೇವಕರಿಂದಲೇ ನಡೆಯುತ್ತಿದ್ದು ಶಿಕ್ಷಣ, ಆಶ್ರಯ, ಕೌಶಲ್ಯಾಭಿವೃದ್ಧಿ ಹಾಗೂ ವೃತ್ತಿಪರ ತರಬೇತಿ, ಮಾನಸಿಕ ಆರೋಗ್ಯ ವೃದ್ಧಿಗೆ ಒತ್ತು ನೀಡಲಾಗುತ್ತಿದೆ ಎಂದರು.

ಸದಸ್ಯ ಪ್ರಜ್ವಲ್, ಕೃತಾ ವಸಂತ್, ತಾನ್ಯ, ಮೇಘ ಇದ್ದರು.

# ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಒಳ್ಳೆಯ ಕೆಲಸ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಶಿಕ್ಷಣ ಸೇರಿ ಎಲ್ಲಾ ಕ್ಷೇತ್ರದಲ್ಲಿ ಸಾಧನೆ ಮಾಡಿ ದವರನ್ನು ಗೌರವಿಸುವುದು ಸಮಾಜದ ಕರ್ತವ್ಯ. ಕನ್ನಡ ಸಾಹಿತ್ಯ ಪರಿಷತ್ ಹೋಬಳಿ ಘಟಕವು ಮಕ್ಕಳನ್ನು ಅಭಿನಂದಿಸುವ ಮೂಲಕ ಅವರು ಹೆಚ್ಚಿನ ಸಾಧನೆ ಮಾಡುವಂತೆ ಪ್ರೇರೇಪಿಸುತ್ತಿರುವುದು ಉತ್ತಮ ಕೆಲಸವೆಂದು ಆದಿಚುಂಚನಗಿರಿ ಹಾಸನ-ಕೊಡಗು ಮಠದ ಶಂಭುನಾಥಸ್ವಾಮೀಜಿ ಅವರು ಹೇಳಿದರು.

ತಾಲ್ಲೂಕಿನ ಕಬ್ಬಳಿ ಶ್ರೀ ಬಸವೇಶ್ವರ ಸ್ವಾಮಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ ಹೋಬಳಿ ಘಟಕವು ಶಾಲೆಯ ಸಹಯೋಗದಲ್ಲಿ ಏರ್ಪಡಿಸಿದ್ದ 2025-26ನೇ ಸಾಲಿನ ಹತ್ತನೇ ತರಗತಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಮತ್ತು ಕನ್ನಡ ಭಾಷೆ ಯಲ್ಲಿ ಪೂರ್ಣ ಅಂಕ ಗಳಿಸಿದ ಹೋಬಳಿಯ ಶಾಲೆಗಳ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ, ಆಶೀರ್ವಚನ ನೀಡಿದರು.



ವಿದ್ಯೆ ಕಲಿತವರು ದಾರಿ ತಪ್ಪಬಹುದು, ಸಂಸ್ಕಾರ ಕಲಿತವರು ಎಂದಿಗೂ ದಾರಿ ತಪ್ಪುವುದಿಲ್ಲ. ಆದಿ ಚುಂಚನಗಿರಿ ಮಠದ ಬಾಲಗಂಗಾಧರನಾಥ ಸ್ವಾಮೀಜಿಗಳು 1986ರಲ್ಲಿ ಅಖಿಲ ಭಾರತ ಮಕ್ಕಳ ಕನ್ನಡ ಸಾಹಿತ್ಯ ಪರಿಷತ್ ಸ್ಥಾಪಿಸಿ, ಮಕ್ಕಳಿಗೆ ಕೃತಿಗಳನ್ನು ರಚನೆ ಮಾಡಲು ಪ್ರೇರೇಪಿಸಿದರು ಎಂದರು.

ಕನ್ನಡ ಭಾಷೆ ಅಮೃತ ಭಾಷೆ, ರಾಜ್ಯದಲ್ಲಿರುವ ಅನ್ಯಭಾಷಿಕರಿಗೆ ಕನ್ನಡವನ್ನು ಕಲಿಸಬೇಕು. ಐಎಎಸ್, ಐಪಿಎಸ್ ಸೇರಿ ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಗಳು ಕನ್ನಡ ಭಾಷೆ ಕಲಿತು, ಕೆಲಸ ಮಾಡಿದಾಗ ಜನರಿಗೆ ಅನುಕೂಲವಾಗುತ್ತದೆ. ಇತ್ತೀಚೆಗೆ ಕೆಲವು ನ್ಯಾಯಾಲಯದ ತೀರ್ಪುಗಳು ಕನ್ನಡದಲ್ಲಿ ಬರುತ್ತಿವೆ, ಮುಂದಿನ ದಿನಗಳಲ್ಲಿ ಎಲ್ಲಾ ಕೋರ್ಟ್‌ಗಳ ಆದೇಶ, ತೀರ್ಪುಗಳು ಸ್ಥಳೀಯ ಭಾಷೆಯಲ್ಲಿ ಬರುವಂತೆ ಆಗಬೇಕೆಂದು ತಿಳಿಸಿದರು.

ಸಾಹಿತಿ ಪ್ರೊ.ಹೊಸೂರು ಎನ್. ತಮ್ಮಣ್ಣಗೌಡ ಅವರು ಮಾತನಾಡಿ, ಮಕ್ಕಳಲ್ಲಿರುವ ಜ್ಞಾನವು ಪರೀಕ್ಷೆಗಳ ಮೂಲಕ ಪ್ರತಿಭೆಯಾಗಿ ಹೊರ ಬರುತ್ತದೆ. ಮನೆಯಲ್ಲಿ ಹಿರಿಯರು, ಶಾಲೆಯಲ್ಲಿ ಶಿಕ್ಷಕರು ಮತ್ತು ಸಭೆಯಲ್ಲಿ ಗುರುಗಳು ಹೇಳುವುದನ್ನು ಶ್ರದ್ಧೆಯಿಂದ ಕೇಳಿದರೆ, ನಿಮ್ಮ ಭವಿಷ್ಯ ಉತ್ತಮವಾಗುತ್ತದೆ ಎಂದರು.

ಸ್ವಾಮೀಜಿ ಸಾನಿಧ್ಯದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಹೋಬಳಿ ಕನ್ನಡ ಸಾಹಿತ್ಯ ಪರಿಷತ್ ಘಟಕದ ಅಧ್ಯಕ್ಷ ಹೆಚ್.ಎ. ಪ್ರಮೋದ್, ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಪ್ರೊ.ಹೆಚ್.ಪಿ. ಶಂಕರ್, ಮಾಜಿ ಅಧ್ಯಕ್ಷ ಹೆಚ್.ಇ. ಬೋರಣ್ಣ, ಬಸವೇಶ್ವರಸ್ವಾಮಿ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯಶಿಕ್ಷಕ ಟಿ. ತಿಮ್ಮೇಗೌಡ ಹಾಗು ಪದಾಧಿಕಾರಿಗಳು ಇತರರು ಇದ್ದರು.

# ರಸಗೊಬ್ಬರ ಕೊರತೆಯಾಗದಂತೆ ಕ್ರಮಕ್ಕೆ ಒತ್ತಾಯ

» ಮೊದಲನೇ ಪುಟದಿಂದ

ರೈತರು ಈ ಬಗ್ಗೆ ಕೃಷಿ ಅಧಿಕಾರಿಗಳಿಂದ ಮಾಹಿತಿ ಪಡೆದು ಬಳಸುವಂತೆ ಹಾಗೂ ಸರ್ಕಾರ ಕೃಷಿ ಇಲಾಖೆಯ ಮೂಲಕ ನ್ಯಾನೋ ಯೂರಿಯಾ ಬೆಂಬಲ ಬೆಲೆಯೊಂದಿಗೆ ಮಾರಾಟಕ್ಕೆ ಅವಕಾಶ ಕಲ್ಪಿಸುವಂತೆ ಮನವಿ ಮಾಡಿದರು.

ಹೋಬಳಿ ಕೃಷಿ ಅಧಿಕಾರಿ ಜಿ.ವಿ.ದಿನೇಶ್ ಅವರು ಮಾತನಾಡಿ, ಹೋಬಳಿ ವ್ಯಾಪ್ತಿಯಲ್ಲಿ ರಸಗೊಬ್ಬರ ಹಾಗೂ ಯೂರಿಯಾ ಅಭಾವ ಹೆಚ್ಚಿನ ಪ್ರಮಾಣದಲ್ಲಿ ಕಾಣುತ್ತಿಲ್ಲ. ಹೋಬಳಿಯ ವ್ಯಾಪ್ತಿಗೆ ಬರುವ ರಸಗೊಬ್ಬರ ಮಾರಾಟ ಅಂಗಡಿಗಳಲ್ಲಿ ಮತ್ತು ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ರೈತರಿಗೆ ತೊಂದರೆ ಆಗದಂತೆ ಪೂರೈಕೆ ಮಾಡಲಾಗುತ್ತಿದೆ. ಕೆಲವು ಸಣ್ಣಪುಟ್ಟ ಸಮಸ್ಯೆ ಹೊರತುಪಡಿಸಿದರೆ ಹೆಚ್ಚಿನ ಸಮಸ್ಯೆ ಕಾಣುತ್ತಿಲ್ಲವೆಂದು ತಿಳಿಸಿದರು.

ಶ್ರೀ ಬಾಲಾಜಿ ರಸಗೊಬ್ಬರ ಅಂಗಡಿಯ ವರ್ತಕ ಎನ್.ಎಸ್. ಪ್ರವೀಣ್ ಕುಮಾರ್ ಮಾತನಾಡಿ, ಜಿಲ್ಲೆಯಲ್ಲಿ ರಸಗೊಬ್ಬರ ಅಂಗಡಿಗಳ ಪೂರೈಕೆಗೆ ಅನುಗುಣವಾಗಿ ಯೂರಿಯಾ ಹಾಗೂ ರಸಗೊಬ್ಬರ ದಾಸ್ತಾನು ಬರುತ್ತಿಲ್ಲ. ಜಿಲ್ಲೆಗೆ ಬರುವ ನೂರರಷ್ಟು ದಾಸ್ತಾನಿನಲ್ಲಿ 60-40 ಅನುಪಾತದಲ್ಲಿ ಶೇ.60 ರಷ್ಟು ರಸಗೊಬ್ಬರ ಅಂಗಡಿಗಳಿಗೆ ಶೇ.40 ರಷ್ಟು ದಾಸ್ತಾನು ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಪೂರೈಕೆಯಾಗುತ್ತಿದೆ. ಇದರಿಂದ ಅಂಗಡಿಗಳಲ್ಲೂ ಸಹ ಬಯೋಮೆಟ್ರಿಕ್ ಮೂಲಕ ರೈತರಿಗೆ ಯೂರಿಯಾ ವಿತರಣೆ ಮಾಡಲಾಗುತ್ತಿದೆ ರೈತರಿಗೆ ಯಾವುದೇ ಸಮಸ್ಯೆಯಾಗದಂತೆ ಕೃಷಿ ಅಧಿಕಾರಿಗಳ ಮಾರ್ಗ ಸೂಚನೆಯಂತೆ ಮಾರಾಟ ಮಾಡಲಾಗುತ್ತಿದೆ ಎಂದರು.

ಸಭೆಯಲ್ಲಿ ಹೋಬಳಿ ರೈತ ಸಂಘದ ಅಧ್ಯಕ್ಷ ಸೋಮಶೇಖರಯ್ಯ, ರಸಗೊಬ್ಬರ ಅಂಗಡಿ ಮಾಲೀಕರಾದ ಎನ್.ಪಿ.ರವಿ, ಸುಂದರೇಶ್, ಉಮೇಶ್, ಸುಬ್ಬೇಗೌಡ, ರೈತ ಮುಖಂಡರಾದ ಶಿವಪ್ಪ, ಅಮಾಸಯ್ಯ, ರಾಜಣ್ಣ, ಮಂಜಣ್ಣ, ರೈತ ಸಂಪರ್ಕ ಕೇಂದ್ರದ ಸಿಬ್ಬಂದಿ ವಿಜಯ್‌ಕುಮಾರ್, ಚೈತ್ರ, ರಾಜೇಶ್ವರಿ, ಮಂಜುನಾಥ್ ಇದ್ದರು.

# ವಿದ್ಯುತ್ ಕಾಯ್ದೆಗೆ ತಿದ್ದುಪಡಿ: ಖಂಡನೀಯ

• ಪ್ರಜೋದಯ ವರದಿ

**ಅರಕಲಗೂಡು:** ರಾಜ್ಯದಲ್ಲಿ ವಿದ್ಯುತ್ ವಿತರಣಾ ಚಟುವಟಿಕೆ ನಡೆಸಲು ಟಾಟಾ ಕಂಪನಿಗೆ ಅನುಮತಿ ನೀಡಬಾರದೆಂದು ಆಗ್ರಹಿಸಿ ತಾಲ್ಲೂಕು ರೈತ ಸಂಘ, ಹಸಿರು ಸೇನೆ ಕಾರ್ಯಕರ್ತರು ಮತ್ತು ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘದ ಸದಸ್ಯರು ಪಟ್ಟಣದ ಸೆಸ್ಕ್ ಕಚೇರಿ ಮುಂದೆ ಬುಧವಾರ ಪ್ರತಿಭಟನೆ ನಡೆಸಿದರು.

ತಾಲ್ಲೂಕು ರೈತ ಸಂಘದ ಅಧ್ಯಕ್ಷ ಹೆಚ್.ಹೆಚ್.ಭುವನೇಶ್ವರ್ ಅವರು ಮಾತನಾಡಿ, ವಿದ್ಯುತ್ ವಲಯವನ್ನು ಖಾಸಗೀಕರಣ ಮಾಡುವ ಹುನ್ನಾರದಿಂದ ವಿದ್ಯುತ್ ಕಾಯ್ದೆಗೆ ತಿದ್ದುಪಡಿ ತರಲು ಪ್ರಯತ್ನ ನಡೆಯುತ್ತಿದ್ದು ಇದು ಖಂಡನೀಯ, ಅದಕ್ಕೆ ರೈತ ಸಂಘ ಆಸ್ಪದ ನೀಡುವುದಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ಖಾಸಗೀಕರಣದಿಂದ ಕೇವಲ ನೌಕರರಿಗಷ್ಟೆ ಅಲ್ಲ ರೈತರು ಮತ್ತು ಜನಸಾಮಾನ್ಯರಿಗೂ ಇದರ ಬಿಸಿ ತಟ್ಟಲಿದೆ. ಖಾಸಗೀಕರಣದ ವಿರುದ್ಧ ಆಕ್ಷೇಪಣೆ ಸಲ್ಲಿಸಲು ಜೂನ್ 23 ಕೊನೆಯ ದಿನವಾಗಿದ್ದು, ತಾಲ್ಲಕೂನ ಪ್ರತಿಯೊಬ್ಬ ರೈತರೂ ಆಕ್ಷೇಪಣೆ ಸಲ್ಲಿಸಲಿದ್ದಾರೆ. ರೈತ ಸಂಘ ಹತ್ತು ಸಾವಿರ ಪತ್ರಗಳನ್ನು ಮುದ್ರಿಸಿ ತಾಲ್ಲೂಕಿನ ಪ್ರತಿ ರೈತರ ಮನೆಗಳಿಗೆ ತಲುಪಿಸಲಿದೆ. ತಾಲ್ಲೂಕಿನ ರೈತರು ಆಕ್ಷೇಪಣಾ ಪತ್ರಗಳಿಗೆ ಸಹಿ ಹಾಕಿ ಜೂನ್ 19ರೊಳಗೆ ತಲುಪಿಸಬೇಕು. ಸೆಸ್ಕ್ ನೌಕರರೂ ಕೈಜೋಡಿಸುವಂತೆ ಮನವಿ ಮಾಡಿದರು.



ಕೇವಲ ರೈತರು, ನೌಕರರಷ್ಟೇ ಅಲ್ಲದೆ ಸಾರ್ವಜನಿಕರೂ ಸಹ ಆಕ್ಷಪಣೆಗಳನ್ನು ಸಲ್ಲಿಸುವ ಮೂಲಕ ಸರ್ಕಾರದ ಈ ನಡೆಯನ್ನು ಖಂಡಿಸಬೇಕು. ಜಿಲ್ಲೆಯಲ್ಲಿ 5 ಲಕ್ಷ ರೈತರಿಂದ ಆಕ್ಷೇಪಣಾ ಪತ್ರಗಳಿಗೆ ಸಹಿ ಹಾಕಿಸಿ ಬೆಂಗಳೂರಿಗೆ ತೆರಳಿ ಸಲ್ಲಿಸಲಾಗುವುದೆಂದರು. ರೈತ ಸಂಘದಮುಖಂಡರು ಹಾಗೂ ಸೆಸ್ಕ್ ನೌಕರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಆಟೋ ಡಿಕ್ಕಿ: ಪಾದಚಾರಿ ಸಾವು

• ಪ್ರಜೋದಯ ವರದಿ

**ಹಾಸನ:** ಪ್ಯಾಸೆಂಜರ್ ಆಟೋರಿಕ್ಷಾ ಡಿಕ್ಕಿ ಹೊಡೆದ ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದ ವೃದ್ಧ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟ ಘಟನೆ ನಗರದಲ್ಲಿ ನಡೆದಿದೆ. ಅಂಬೇಡ್ಕರ್ ನಗರದ ನಿವಾಸಿ ಅಬ್ದುಲ್ ಗಫರ್ (71) ಮೃತರು. ನಗರದ ಆರ್‌ಎಂಸಿ ಗೇಟ್ ಎದುರು ರಸ್ತೆ ದಾಟುತ್ತಿದ್ದಾಗ ಸಂತೆಪೇಟೆ ವೃತ್ತ ದಿಂದ ತಣ್ಣೀರು ಹಳ್ಳದ ಕಡೆಗೆ ತೆರಳುತ್ತಿದ್ದ ಪ್ಯಾಸೆಂಜರ್ ಆಟೋ ಡಿಕ್ಕಿ ಹೊಡೆದಿದೆ. ಅಪಘಾತದ ಪರಿಣಾಮ ಅಬ್ದುಲ್ ಗಫರ್ ರಸ್ತೆಗೆ ಬಿದ್ದು ತಲೆ ಹಾಗು ದೇಹದ ಭಾಗಗಳಿಗೆ ಗಂಭೀರ ಗಾಯಗಳಾಗಿದ್ದವು. ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

**ಸಕಲೇಶಪುರದಲ್ಲಿ ಪೂರ್ವ ಭಾವಿ ಸಭೆ | 1,30,738 ಮಕ್ಕಳಿಗೆ ಲಸಿಕೆ ಗುರಿ**

# ಪಲ್ಸ್ ಪೋಲಿಯೋ ಯಶಸ್ವಿಗೆ ಸಹಕರಿಸಲು ಮನವಿ

• ಪ್ರಜೋದಯ ವರದಿ

**ಸಕಲೇಶಪುರ:** ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಯಶಸ್ವಿಗೆ ತಾಲ್ಲೂಕಿನ ಎಲ್ಲಾ ಸಂಘ-ಸಂಸ್ಥೆಗಳು ಚುನಾಯಿತ ಪ್ರತಿನಿಧಿಗಳು, ವಿವಿಧ ಇಲಾಖೆ ಅಧಿಕಾರಿಗಳು ಮತ್ತು ಪತ್ರಕರ್ತರು ಸಹಕರಿಸಬೇಕೆಂದು ತಾಲ್ಲೂಕು ವೈದ್ಯಾಧಿಕಾರಿ ಡಾ||ಮಹೇಶ್ ಅವರು ಮನವಿ ಮಾಡಿದರು.

ಪಟ್ಟಣದ ತಾಲ್ಲೂಕು ಆಡಳಿತ ಸೌಧದ ಸಭಾಂಗಣದಲ್ಲಿ ಕರೆಯಲಾಗಿದ್ದ ಪಲ್ಸ್ ಪೋಲಿಯೋ ಚಾಲನಾ ಸಮಿತಿ ಕಾರ್ಯಪಡೆಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ತಾಲ್ಲೂಕಿನಲ್ಲಿ ಒಟ್ಟು 1,30,738 ಜನಸಂಖ್ಯೆ ಇದ್ದು, 5 ವರ್ಷ ಒಳಪಟ್ಟ ಮಕ್ಕಳ ಸಂಖ್ಯೆ 6,951 ಇದ್ದು, ಈ ಮಕ್ಕಳಿಗೆ ಪೋಲಿಯೋ ಲಸಿಕೆ ನೀಡುವ ಗುರಿ ಹೊಂದಲಾಗಿದೆ. ಒಟ್ಟು ತಾಲ್ಲೂಕಿನಲ್ಲಿ 73 ಪೋಲಿಯೋ ಬೂತ್‌ಗಳನ್ನು ತೆರೆಯಲಾಗುತಿದ್ದು ಲಸಿಕೆ ನೀಡುವ ಸಿಬ್ಬಂದಿಗಳು 300 ಹಾಗೂ ಮೇಲ್ವಿಚಾರಕರು 18 ಜನ ಕರ್ತವ್ಯ ನಿರ್ವಹಿಸಲಿದ್ದಾರೆ ಎಂದರು.

ಗ್ರಾಮೀಣ ಪ್ರದೇಶಗಳಲ್ಲಿ ಅಂಗನವಾಡಿ ಮತ್ತು ಶಾಲೆಗಳಲ್ಲಿ ಲಸಿಕೆ ಹಾಕಲಾಗುವುದು. ಪಟ್ಟಣ ಪ್ರದೇಶಗಳಲ್ಲಿ ಶಾಲೆ, ಅಂಗನವಾಡಿ, ಬಸ್ ನಿಲ್ದಾಣಗಳಲ್ಲಿ ಪಲ್ಸ್ ಪೋಲಿಯೋ ಬೂತ್‌ಗಳನ್ನು ತೆರೆಯಲು ಯೋಜಿಸಲಾಗಿದ್ದು, ಜೂನ್ 28 ರಂದು ಬೆಳಿಗ್ಗೆ 8 ಗಂಟೆಗೆ ಲಸಿಕೆ ಕಾರ್ಯಕ್ರಮ ಪ್ರಾರಂಭವಾಗುತ್ತದೆ. ಸಾರ್ವಜನಿಕರಿಗೆ ಮಾಹಿತಿ ನೀಡಲು ಸೂಚಿಸಲಾಗಿದೆ ಎಂದರು.



ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಲಸಿಕೆ ನೀಡುವ ಸಿಬ್ಬಂದಿಗೆ ಸ್ಥಳೀಯ ಸಂಘ- ಸಂಸ್ಥೆಗಳ ಸಹಯೋಗದೊಂದಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಲು ತೀರ್ಮಾನಿಸಲಾಯಿತು. ಪಟ್ಟಣ ವ್ಯಾಪ್ತಿಯಲ್ಲಿ ಎರಡು ಮೊಬೈಲ್ ವಾಹನಗಳನ್ನು ನಿಯೋಜಿಸುವುದರ ಜೊತೆಗೆ ರೈಲ್ವೆ ನಿಲ್ದಾಣದ ಸೌಲಭ್ಯವನ್ನೂ ಬಳಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು. ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಮೈಕಿಂಗ್ ಮೂಲಕ ಪ್ರಚಾರ ನಡೆಸುವಂತೆ ಸೂಚಿಸಲಾಯಿತು. ವಿವಿಧ ಅಭಿವೃದ್ಧಿ ಯೋಜನಾ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಅಂಗನವಾಡಿ ಕಾರ್ಯಕರ್ತೆಯರು ನಿಗದಿತ ಸಮಯಕ್ಕೆ ಹಾಜರಾಗುವಂತೆ ನೋಡಿಕೊಳ್ಳ ಬೇಕೆಂದರು.

ಆರೋಗ್ಯ ಇಲಾಖೆ ಅಧಿಕಾರಿಗಳು ಅಭಿಯಾನ ಆರಂಭಕ್ಕೂ ಮುನ್ನ ಹಾಗೂ ಕಾರ್ಯಕ್ರಮ ಪೂರ್ಣಗೊಳ್ಳುವವರೆಗೆ ಅಗತ್ಯ ಮಾರ್ಗದರ್ಶನ ಮತ್ತು ಸಹಕಾರ ನೀಡಲಿದ್ದಾರೆ. ಲಸಿಕೆ ಹಾಗೂ ಸಿಬ್ಬಂದಿಯನ್ನು ವಿವಿಧ ಕೇಂದ್ರಗಳಿಗೆ ಸಾಗಿಸಲು ಜಿಲ್ಲಾ ಮಟ್ಟದಿಂದ ವಾಹನಗಳನ್ನು ನಿಯೋಜಿಸಲಾಗಿದೆ ಎಂದರು.

ಗ್ರಾಮೀಣ ಪ್ರದೇಶದಲ್ಲಿ ಜೂನ್ 28, 29 ಹಾಗೂ 30 ಹಾಗು ಪಟ್ಟಣ ಪ್ರದೇಶದಲ್ಲಿ ಜೂನ್ 28 ರಿಂದ ಜುಲೈ 1ರ ವರೆಗೆ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸಲಿದ್ದಾರೆ. ಚೆಸ್ಕಾಂ ಅಧಿಕಾರಿ ಗಳು ಸಮರ್ಪಕವಾಗಿ ವಿದ್ಯುತ್ ಪೂರೈಕೆ ಮಾಡಿಕೊಡಬೇಕು ಹಾಗು ಪ್ರತಿಯೊಬ್ಬರು ಐದು ವರ್ಷದೊಳಗಿನ ಮಕ್ಕಳಿಗೆ ತಪ್ಪದೇ ಲಸಿಕೆ ಹಾಕಿಸಬೇಕೆಂದು ಮನವಿ ಮಾಡಿದರು.

ಕಂದಾಯ ಇಲಾಖೆಯ ಶಿರಸ್ತೇದಾರ್ ರವಿಕುಮಾರ್, ಚುನಾವಣಾ ಶಿರಸ್ತೇದಾರ್ ಜನಾರ್ಧನ್, ಶ್ವೇತಾ, ಅರಣ್ಯ ಇಲಾಖೆಯ ವಲಯ ಅರಣ್ಯಾಧಿಕಾರಿ ಹೇಮಂತ್ ಕುಮಾರ್ ಇತರರು ಹಾಜರಿದ್ದರು.

# ರಿಜ್ವಾನ್ ಅರ್ಷದ್‌ಗೆ ಸಚಿವ ಸ್ಥಾನ ನೀಡಲು ಒತ್ತಾಯ




• ಪ್ರಜೋದಯ ವರದಿ

**ಹಾಸನ:** ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ ಯುವ ಶಾಸಕ ರಿಜ್ವಾನ್ ಅರ್ಷದ್ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಯೂತ್ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸೈಯದ್ ಇರ್ಫಾನ್ ಅವರು ಒತ್ತಾಯಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅರ್ಷದ್ ಅವರು ಪಕ್ಷದಲ್ಲಿ ಶಿಸ್ತಿನ ಸಿಪಾಯಿ ಆಗಿದ್ದಾರೆ. ಯೂತ್ ಕಾಂಗ್ರೆಸ್‌ನಲ್ಲಿದ್ದಾಗಿನಿಂದಲೂ ಪಕ್ಷ ನಿಷ್ಠರಾಗಿ ದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲು ಅವರ ಶ್ರಮವೂ ಇದೆ. ಹಾಗಾಗಿ ಮೂರ್ನಾಲ್ಕು ಮಂದಿ ಮುಸ್ಲಿಂ ಶಾಸಕರಿಗೆ ಸಂಪುಟದಲ್ಲಿ ಪ್ರಾತಿನಿಧ್ಯ ಕೊಡಬೇಕು. ಆ ಪೈಕಿ ಅರ್ಷದ್ ಅವರನ್ನೂ ಪರಿ ಗಣಿಸ ಬೇಕು. ಹೀಗಾದರೆ ಪಕ್ಷ ಸಂಘಟನೆಗೂ ಅನುಕೂಲ ಆಗಲಿದೆಂದು ಆಗ್ರಹಿಸಿದರು.

ಮುಖಂಡ ಉಮೇಶ್ ಮಾತ ನಾಡಿ, ನಮ್ಮ ಜಿಲ್ಲೆಯ ಏಕೈಕ ಶಾಸಕ ರಾದ ಶಿವಲಿಂಗೇಗೌಡರಿಗೆ ಮಂತ್ರಿ ಸ್ಥಾನ ನೀಡಬೇಕೆಂದು ಒತ್ತಾಯಿಸಿದರು. ಮುಖಂಡ ವೆಂಕಟೇಗೌಡ, ಆನಂದ್, ಸೈಯದ್ ಇದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019